ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಜನವರಿ - ೨೦೧೩ ಸಂಚಿಕೆ-೬



ಸಾಕು ಸಾಕು ಪಕ್ಷತಂತ್ರ

ಬೇಕು ಬೇಕು ಪ್ರಜಾತಂತ್ರ !

ಜನಪದ ವಿಚಾರದಲ್ಲಿ

ಜನೆವರಿ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜನವರಿ – ೨೦೧೩
ಸಂಪುಟ – ೧೩
ಸಂಚಿಕೆ – ೬

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ಶ್ರದ್ಧಾಂಜಲಿ

ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ?
ತನ್ನ ಕೊಲೆಯ ಕೊನೆಗಾಣಿಸೆ ಇವಗೆ ಶರಣು ಬಂದಿತೋ?
'ಅಯ್ಯೋ ಇವನು ಅಮರ, ನಾನೆ ತಾನೆ ಸತ್ತೆ' ಎಂದಿತೋ 'ನಾನೆ ಸತ್ತೆ' ಎಂದಿತೋ?

ಗಾಂಧೀದೇಹ ಸುಟ್ಟ ಬೆಳಕು ಜಗದ ತಮವ ಕಳೆದಿದೆ,
ಗಾಂಧೀ ಹೋದರೆಂಬ ಸುದ್ದಿ ಬಾನ ತುಂಬ ಉಳಿದಿದೆ,
ಗಾಂಧಿಗಂಧ ದಿಗ್–ದಿಗಂತ ಕೀರ್ತಿರೂಪ ತಳೆದಿದೆ– ಕೀರ್ತಿರೂಪ ತಳೆದಿದೆ!

ತೀರ್ಥಗಳ ಪವಿತ್ರ ಮಾಡಿದಂಥ ತೀರ್ಥರೂಪನು
ಯಜ್ಞವಾದ ಬಾಳಿನಲ್ಲಿ ತಾ ಸುಖಸ್ವರೂಪನು
ಸೋಲನೆಲ್ಲ ಗೆಲವುಗೊಳಿಸಿ ಮುಕ್ತನಾದ ಭೂಪನು– ಮುಕ್ತನಾದ ಭೂಪನು.

ಬತ್ತಿ ಸುಟ್ಟುಹೋದರೇನು ಬೆಳಕು ನಂದಿತೆಂಬರೆ?
ಹಾಕಿ ಬತ್ತಿ ದೀಪವೆತ್ತಿ ಇರುವ ಜ್ಯೋತಿ ಕಾಂಬರೆ!
ಎಣ್ಣೆ ತೀರಿತೆನ್ನಬೇಡಿ ಬೇರೆ ನೇಹ ತುಂಬರೆ– ಬೇರೆ ನೇಹ ತುಂಬರೆ?

ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ?
ತನ್ನ ಕೊಲೆಯ ಕೊನೆಗಾಣಿಸೆ ಇವಗೆ ಶರಣು ಬಂದಿತೋ?

– ಅಂಬಿಕಾತನಯದತ್ತ

ವಿಚಾರ ದೀಪ್ತಿ

ಗಾಂಧೀಜಿ ಇಂದು ಮತ್ತೆ ಮತ್ತೆ ನೆನೆಪಿಗೆ ಬರಲು ನಮ್ಮ ಸಮಕಾಲೀನ ಬದುಕು ಎದುರಿಸುತ್ತಿರುವ ಅನೇಕ ತಲ್ಲಣಗಳು ಕಾರಣವಾಗಿವೆ. ಅವುಗಳನ್ನು ಬಹುಷಃ ಮೂರು ನೆಲೆಗಳಲ್ಲಿ ಗುರುತಿಸಬಹುದು:

ಒಂದು, ಇಂದು ಎಲ್ಲೆಡೆ ಹೆಚ್ಚುತ್ತಿರುವ ಕೋಮು ಹಿಂಸೆ, ಅಸಹನೆ ಮತ್ತು ದ್ವೇಷ; ಹಿಂಸಾತ್ಮಕ ಹೋರಾಟಗಳ ವಿಫಲತೆ; ಸಮಾಜದ ಎಲ್ಲಾ ಸಮುದಾಯಗಳ ನಡುವೆ ಪ್ರೀತಿ–ಸಹಿಷ್ಣುತೆ ಕಡಿಮೆಯಾಗುತ್ತಿರುವ ಸನ್ನಿವೇಶ.

ಎರಡು, ಪರಿಸರದ ಸಮಸ್ಯೆ; ಬೃಹತ್ ಯೋಜನೆ/ ಗಣಿಗಾರಿಕೆ, ಕೈಗಾರಿಕೆಗಳಿಂದ ಹೆಚ್ಚುತ್ತಿರುವ ಮಾಲಿನ್ಯ, ಸಮುದಾಯಗಳ ಎತ್ತಂಗಡಿ, ಬಡಜನರ ಜೀವನವನ್ನು ಇನ್ನಷ್ಟು ಹೈರಾಣಾಗಿಸುತ್ತಿರುವ ಅಭಿವೃದ್ಧಿ ಮಾರ್ಗ, ಇಂದು ಎಲ್ಲೆಡೆ ಹರಡುತ್ತಿರುವ ವಿನಾಶಕಾರಿ ಜೀವನಶೈಲಿ ಇತ್ಯಾದಿ ಬೆಳವಣಿಗೆಗಳು.

ಎಲ್ಲಕ್ಕಿಂತ ಮಿಗಿಲಾಗಿ, ಇಂದು ಭಾರತ ಒಪ್ಪಿಕೊಂಡಿರುವ ಮುಕ್ತ ಮಾರುಕಟ್ಟೆ, ಖಾಸಗೀಕರಣಗಳಿಗೆ ಕಾರಣವಾಗಿರುವ ಜಾಗತೀಕರಣ; ಅದರಿಂದ ಭಾರತದ ಸ್ವಯತ್ತತೆಗೆ ಮತ್ತು ಪ್ರಜಾಪ್ರಭುತ್ವಕ್ಕೆ ಒದಗಿರುವ ಧಕ್ಕೆ; ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ, ಸಂಸ್ಕೃತಿ, ಜೀವನಶೈಲಿಯೇ ಅಂತಿಮ ಗುರಿ ಎಂಬಂತೆ ಬದಲಾಗುತ್ತಿರುವ ನಮ್ಮ ಸಮಾಜದ ಮೌಲ್ಯಗಳು.

ಗಾಂಧೀಜಿ ಮೇಲಿನ ಮೂರು ವಿದ್ಯಮಾನಗಳನ್ನು ವಿರೋಧಿಸುತ್ತಿದ್ದರೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಉದಾಹರಣೆಗೆ, ನರ್ಮದಾ ಅಣೆಕಟ್ಟಿನಿಂದ ಉಂಟಾಗಿರುವ ಹಿನ್ನೀರಿನಲ್ಲಿ ಮೂರು ವಾರಗಳಿಂದ ನಿಂತು 'ಜಲ ಸಮರ್ಪಣಾ' ಪ್ರತಿಭಟನೆ ಮಾಡುತ್ತಿರುವವರ ಜೊತೆ, ಕೂಡಂಕುಲಂ ಅಣುಸ್ಥಾವರ ಸ್ಥಾಪನೆಯ ವಿರುದ್ಧ ಹೋರಾಡುತ್ತಿರುವವರ ಜೊತೆ, ಕಾಶ್ಮೀರ ಮತ್ತ ಈಶಾನ್ಯ ರಾಜ್ಯಗಳ ಜನತೆಯ ಸ್ವಯಂ ನಿರ್ಧಾರದ ಹಕ್ಕುಗಳ ಪರವಾಗಿ, ಅಷ್ಟೇ ಏಕೆ, ಬಹುಷಃ ಹೋರಾಟದ ಮಾರ್ಗದ ಬಗ್ಗೆ ತಮಗೆ ಇರಬಹುದಾದ ಎಲ್ಲಾ ಭಿನ್ನಾಭಿಪ್ರಾಯಗಳ ನಡುವೆಯೂ ನಕ್ಸಲರು ಹೋರಾಡುತ್ತಿರುವ ಆದಿವಾಸಿಗಳ ಪರವಾಗಿ ಕೂಡ ಗಾಂಧೀಜಿ ತಮ್ಮ ಧ್ವನಿ ಕೂಡಿಸುತ್ತಿದ್ದರು ಎನಿಸುತ್ತದೆ. ಹಾಗೆಯೇ ಜಾಗತೀಕರಣದ ವಿರುದ್ಧ, ಎಸ್.ಇ.ಝಡ್, ಬಿ.ಟಿ.ಬದನೆ, ರೈತರ ಆತ್ಮಹತ್ಯೆಗೆ ಕಾರಣವಾಗಿರುವ ಸರ್ಕಾರಿ ಪಾಲಸಿಗಳ ವಿರುದ್ಧವೂ ಗಾಂಧೀ ನಿಲ್ಲುತ್ತಿದ್ದದ್ದು ಖಂಡಿತ.

(ಸಾಭಾರ : ಸಂವಾದ) — *ಪ್ರೊ. ವಿ. ಎಸ್. ಶ್ರೀಧರ*

ಸಾಕು, ಸಾಕು ಪಕ್ಷತಂತ್ರ ಬೇಕು, ಬೇಕು ಪ್ರಜಾತಂತ್ರ !

– ಸುರೇಂದ್ರ ಕೌಲಗಿ

(ಅಣ್ವಸ್ತ್ರಗಳಷ್ಟೆ ಅಲ್ಲ ಸಮಾಜವನ್ನು ಹಾಳುಗೆಡುವುದು, ಪಕ್ಷ ರಾಜಕಾರಣವು ಸಹ ಅಣ್ವಸ್ತ್ರದಷ್ಟೆ ಭೀಕರ)

ಪ್ರಜಾತಂತ್ರ ಎಂದರೆ ಪಕ್ಷಗಳದೇ ಕಾರುಬಾರು. ಪ್ರಜೆಗಳು ಮೂಲೆಗುಂಪು. ವಿಚಿತ್ರವೆಂದರೆ ಪ್ರಜೆಗಳಿಂದಲೇ ಪೋಷಿತವಾಗಿ ಪ್ರಜೆಗಳ ಸಹಕಾರದಿಂದಲೇ ಜೀವಿಸುವ ರಾಜಕೀಯ ಪಕ್ಷಗಳು ಪ್ರಜೆಗಳನ್ನೇ ಕಾಲಕಸವನ್ನಾಗಿಸುವವು. ಯಾವ ರಾಜಕೀಯ ಪಕ್ಷಗಳ ನಾಯಕರು ಜನತೆಯ ಸೇವಕರಾಗಬೇಕೋ ಅವರೆ ಜನತೆಯ ಮಾಲೀಕರಾಗುತ್ತಾರೆ. ಪಕ್ಷಗಳು ಸಮಾಜದಲ್ಲಿಯ ವೈವಿಧ್ಯತೆಯನ್ನು ಸಮಾಜದ ಒಳಿತಿಗಾಗಿ ಉಪಯೋಗಿಸದೆ ಅದರ ವಿಘಟನೆಗಾಗಿ ಉಪಯೋಗಿಸುತ್ತವೆ. ಇಂಗ್ಲೀಷರು ತಮ್ಮ ಒಡೆದು ಆಳುವ ನೀತಿಯಿಂದ ಬೃಹತ್ ಸಾಮ್ರಾಜ್ಯವನ್ನು ಸ್ಥಾಪಿಸಿ ಮೆರೆದಂತೆ ಇಂದು ರಾಜಕೀಯ ಪಕ್ಷಗಳು ಅದೇ ಪ್ರಕಾರ ಸಮಾಜವನ್ನು ಒಡೆದು ಆಳುವ ನೀತಿಯನ್ನು ಅನುಸರಿಸುತ್ತ ತಾವು ಅಧಿಕಾರಕ್ಕೆ ಬಂದು ತಮ್ಮದೇ ಪ್ರಭುತ್ವವನ್ನು ಜಾರಿಗೊಳಿಸುತ್ತಿವೆ. ಸಮಾಜವನ್ನು ಒಡೆಯಲು ಯಾವ ಯಾವ ಕಾರಣಗಳು ಅಥವಾ ವಿಷಯಗಳು ಸಿಗಲು ಸಾಧ್ಯವೊ ಅದನ್ನು ಹುಡುಕಿ ವ್ಯವಸ್ಥಿತವಾಗಿ ಸಮಾಜವನ್ನು ಒಡೆಯುತ್ತವೆ. ಈ ವಿಷಯದಲ್ಲಿ ರಾಜಕೀಯ ಪಕ್ಷಗಳಲ್ಲಿ ವಿಧ್ವಂಸಕಾರಿ ಪೈಪೋಟಿಯಿದೆ. ಇವುಗಳಿಗೆ ಬಹುದೊಡ್ಡ ಅಸ್ತ್ರವಾಗಿ ಸಿಕ್ಕಿರುವ ಮಂತ್ರ ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಎಂಬುದು. ದೇಶಕ್ಕೆ ಸ್ವಾತಂತ್ರ್ಯ ಬಂದು ೬೫ ವರ್ಷಗಳಾಗಿ ದೇಶದ ಪ್ರಜೆಗಳಲ್ಲಿ ತಾವು ಒಂದೆನ್ನುವ ಭಾವನೆ ಮೂಡಿದಾಗ ರಾಜಕೀಯ ಪಕ್ಷಗಳೂ ಆ ಭಾವನೆಯನ್ನು ಬಲಪಡಿಸುವುದರ ಬದಲಾಗಿ ಜಾತಿಭೇದ ಮಾತನ್ನು ಹೇಳಿ, ಧರ್ಮಭೇದ ಮಾತನ್ನು ಹೇಳಿ ಶ್ರೀಮಂತ-ಬಡವರ ಭೇದ ಮಾತನ್ನು ಹೇಳಿ, ಹಳ್ಳಿಗರ-ನಗರವಾಸಿಗಳ ಭೇದ ಮಾತನ್ನು ಹೇಳಿ ಸಮಾಜವನ್ನು ಒಡೆಯುತ್ತಿವೆ. ಭಾರತೀಯರು ಸಂವಿಧಾನ ಪ್ರಕಾರ ದೇಶವಾಸಿಗಳೆಲ್ಲರೂ ಒಂದೇ. ಯಾವ ತಾರತಮ್ಯವೂ ಇಲ್ಲ. ಆದರೆ ರಾಜಕೀಯ ಪಕ್ಷಗಳ ದೃಷ್ಟಿಯಲ್ಲಿ ಸಂವಿಧಾನದಲ್ಲಿಯ ಮಾತು ಕೇವಲ ಔಪಚಾರಿಕ. ಪ್ರಜಾತಂತ್ರವನ್ನು ಬಲಪಡಿಸುತ್ತೇವೆ ಎಂದು ಹೇಳುವ ರಾಜಕೀಯ ಪಕ್ಷಗಳಲ್ಲೆ ಪ್ರಜಾತಂತ್ರ ಇರುವುದಿಲ್ಲ. ಆಯಾ ಪಕ್ಷದ ಮುಖಂಡನ ಹೇಳಿಕೆಯಂತೆ, ಹೈಕಮಾಂಡಿನ ನಿರ್ದೇಶನದಂತೆ, ರಾಜಕೀಯ ಪಕ್ಷಗಳು ಕೆಲಸಮಾಡುತ್ತವೆ. ಕೆಲವು ಪಕ್ಷಗಳಂತೂ ವಂಶ ಪಾರಂಪರ್ಯದ ಅಧಿಕಾರದ ಹಸ್ತಾಂತರ ನಡೆಯುತ್ತದೆ. ಅಷ್ಟೇ ಅಲ್ಲದೆ ರಾಷ್ಟ್ರದ ಮುಖ್ಯ ನ್ಯಾಯಾಧೀಶರನ್ನು, ರಾಜ್ಯಪಾಲರನ್ನು ಚುನಾವಣಾ

ಆಯೋಗದ ಮುಖ್ಯಸ್ಥರನ್ನು, ಸಿ.ಬಿ.ಐ.ನ ಮುಖ್ಯಸ್ಥರನ್ನು ಮತ್ತು ಇತರ ಆಯಕಟ್ಟಿನ ಸ್ಥಾನಗಳಲ್ಲಿಯ ಅಧಿಕಾರಿಗಳನ್ನು ಪಕ್ಷಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ನೇಮಿಸುತ್ತವೆ. ಈ ರೀತಿ ಇಡೀ ದೇಶವನ್ನೇ ಪಕ್ಷ ತನ್ನ ಪ್ರಭುತ್ವಕ್ಕೆ ತೆಗೆದುಕೊಳ್ಳುತ್ತದೆ. ಅಲ್ಲದೆ ಬಹುಸಂಖ್ಯಾತ ಸದಸ್ಯರು ತಮ್ಮ ಪಕ್ಷದವರೇ ಆಗಿದ್ದಾರೆಂದು ಮಸೂದೆಗಳನ್ನು ದೋಸೆಗಳ ರೀತಿ ತಯಾರಿಸುತ್ತವೆ. ಇತ್ತೀಚಿನ ಉದಾಹರಣೆ ಎಫ್.ಡಿ.ಐ ಮೇಲೆ ಲೋಕಸಭೆಯಲ್ಲಿ ನಡೆದ ಚರ್ಚೆ ಮತ್ತು ಮತದಾನ. ಆ ಸಮಯದಲ್ಲಿ ಯು.ಪಿ.ಎ ಮಿತ್ರಪಕ್ಷಗಳೇ ವಿರೋಧ ವ್ಯಕ್ತಪಡಿಸಿದವು. ಮಾಯಾವತಿ ಪಕ್ಷ ಸಭಾತ್ಯಾಗ ಮಾಡಿತು. ಚರ್ಚೆಯ ಮತ್ತು ಮತದಾನದ ಒಟ್ಟು ನಿಷ್ಕರ್ಷೆಯನ್ನು ಗಮನಿಸಿದರೆ ಎಫ್.ಡಿ.ಐ ಮಸೂದೆ ಅಲ್ಪಮತದಿಂದಲೇ ಸ್ವೀಕೃತವಾಯಿತೆಂದು ಹೇಳಬಹುದು. ಎಫ್.ಡಿ.ಐ ನಂಥ ಮಹತ್ವದ ಮಸೂದೆ ನಿಜವಾಗಿಯೂ ಸರ್ವಸಮ್ಮತಿಯಿಂದ ಅಂಗೀಕಾರ ಅಥವಾ ತಿರಸ್ಕೃತವಾಗಬೇಕಿತ್ತು. ಆದರೆ ಬಹುಮತ ಅಲ್ಪಮತದ ಆಧಾರದ ಮೇಲೆ ಸ್ವೀಕೃತಗೊಂಡಿದೆ. ಮಸೂದೆ ಪರವಾಗಿ ೨೫೩, ಮತ ಚಲಾಯಿಸದೆ ಇರುವವರು ೪೩, ವಿರೋಧ ಮಾಡಿದವರು ೨೧೮ ಹೀಗೆ ವಿರೋಧದ ಧ್ವನಿ ಬಲವಾಗಿದ್ದರೂ ಕೂಡ ಬಹುಮತದ ಕಾರಣದಿಂದ ಅಡಗಿಹೋಯಿತು. ಅಂದರೆ ಆ ಮಸೂದೆ ಬಗ್ಗೆ ಜನಾಭಿಪ್ರಾಯ ಸರಿಯಾಗಿ ದೊರಕಿದಂತೆ ಆಗಲಿಲ್ಲ. ಆದ್ದರಿಂದ ಯು.ಪಿ.ಎ ಪಕ್ಷ ತನ್ನ ಪ್ರಭುತ್ವನ್ನು ಸಾಧಿಸಿಕೊಂಡಿತು. ದೇಶ ನರಳಿತು. ಇನ್ನೊಂದು ಉದಾಹರಣೆ ವಿರೋಧ ಪಕ್ಷಗಳು ಲೋಕಸಭೆಯನ್ನು ಬಹಿಷ್ಕರಿಸಿ ಹೋದಾಗ ಆಡಳಿತ ಪಕ್ಷವು ೧೯ ಮಹತ್ವದ ಮಸೂದೆಗಳು ಅಂಗೀಕಾರವಾಗಿವೆಯೆಂದು ಘೋಷಿಸಿತು. ಈ ೧೯ ಮಸೂದೆಗಳ ಬಗ್ಗೆ ಚರ್ಚೆನಡೆಯಲಿಲ್ಲ. ಬಹುಮತ ಅಲ್ಪಮತವನ್ನು ಹೊಸಕಿಹಾಕಿತು. ಮಹಾ ಚುನಾವಣೆ ನಡೆದಾಗ ಬಂದ ಫಲಿತಾಂಶವನ್ನು ಗಮನಿಸಿದರೆ ಅಲ್ಪಮತ ಪಡೆದವರೇ ಅಧಿಕಾರಕ್ಕೆ ಬರುವುದನ್ನು ಕಾಣುತ್ತೇವೆ. ವಿರೋಧವನ್ನು ಸಂಖ್ಯೆಯಲ್ಲಿ ಗಮನಿಸದೆ ಅಭಿಪ್ರಾಯದ ಆಧಾರದ ಮೇಲೆ ಗಮನಿಸಿದಲ್ಲಿ ಬಹಳಷ್ಟು ಪರಿವರ್ತನೆ ಆಗಲು ಸಾಧ್ಯ. ಈ ಅಲ್ಪಮತ ಮತ್ತು ಬಹುಮತ ಅಶಾಸ್ತ್ರೀಯವಾಗಿವೆ. ವಿನೋಬಾರ ಅಭಿಪ್ರಾಯದಂತೆ 'ಬಹುಮತದ ರಾಜ್ಯವೆಂಬುದು ಬರೀ ಒಂದು ಯಾಂತ್ರಿಕವಾದ ಕೆಲಸ. ಅದರಲ್ಲಿ ಸ್ವತಂತ್ರ ವಿಚಾರಕ್ಕೆ ಅವಕಾಶವಿಲ್ಲ'. ಮೀಸಲಾತಿಯ ಮಾತನ್ನೇ ತೆಗೆದುಕೊಳ್ಳಿ. ಸಾಮಾಜಿಕ ನ್ಯಾಯ ದೃಷ್ಟಿಯಿಂದ ಮೀಸಲಾತಿ ಒಂದು ಹಂತದವರೆಗೆ ಖಂಡಿತವಾಗಿ ಸರಿ, ಆದರೆ ಸದಾಕಾಲಕ್ಕೂ ಪರಿವರ್ತನೆಗೊಂಡ ಪರಿಸ್ಥಿತಿಯಲ್ಲೂ ಮೀಸಲಾತಿ ಎಷ್ಟು ಸರಿ ಎಂಬುದು ಆಲೋಚಿಸಬೇಕಾದ ವಿಚಾರ. ಕೇವಲ ೧೦ ವರ್ಷ ಮೀಸಲಾತಿ ಇರಬೇಕೆಂಬ ಮೊದಲಿದ್ದ ವಿಚಾರ ರಾಜಕೀಯ ಒತ್ತಡದಿಂದಾಗಿ ಮೀಸಲಾತಿಯ ವ್ಯವಸ್ಥೆ ಮುಂದುವರಿದುಕೊಂಡೇ ಬಂದಿದೆ. ಮೀಸಲಾತಿ ಅನಗತ್ಯವೆನಿಸುವಂಥ ಸಾಮಾಜಿಕ ಪರಿಸ್ಥಿತಿಯನ್ನು ನಿರ್ಮಿಸಬೇಕಿದೆ, ಸರ್ವೋದಯ ಸಮಾಜ ರಚನೆ ಮಾಡಬೇಕಿದೆ. ಆದರೆ ರಾಜಕೀಯ ಪಕ್ಷಗಳು ಮತಬ್ಯಾಂಕನ್ನು ಮಾಡಿಕೊಳ್ಳಲು ಈ ಮೀಸಲಾತಿಯ ವಿಷಯವನ್ನು ಸದಾ ಜ್ವಲಂತವಾಗಿ ಇಟ್ಟಿವೆ. ಈ ಸಂದರ್ಭದಲ್ಲಿ ದೇಶದ ಒಟ್ಟು ಹಿತವನ್ನು ಮರೆತುಬಿಟ್ಟಿವೆ. ಮೀಸಲಾತಿ ವಿಷಯವನ್ನು ದೊಡ್ಡದಾಗಿ ಚಿತ್ರಿಸಿ ರಾಜಕೀಯ ಪಕ್ಷಗಳು ತಮ್ಮ ಪ್ರಭುತ್ವವೇ

ನಡೆಯುವಂತೆ ಪ್ರಯತ್ನಿಸುತ್ತಿವೆ. ಸಮಾಜ ಒಂದಾಗಲು ಬಯಸುತ್ತದೆ. ಪಕ್ಷಗಳು ಅದನ್ನು ಆಗಗೊಡುತ್ತಿಲ್ಲ. ಅಧಿಕಾರದ ಮೋಹ ಅವನ್ನು ಕುರುಡು ಮಾಡಿದೆ. ದೇಶದ ವಿಭಜನೆ ಆಗುವುದಕ್ಕೂ ಮಹಮದ್ ಅಲಿ ಜಿನ್ನಾರ ಅಧಿಕಾರದ ಆಸೆ ಬಹುಮಟ್ಟಿಗೆ ಕಾರಣವಾಯಿತು. ಪರಿಣಾಮ ದೇಶದ ವಿಭಜನೆ, ಸಮಾಜದ ವಿಭಜನೆ, ಮನೆ ವಿಭಜನೆ, ಮನ ವಿಭಜನೆ. ಅಂಥದೇ ಭೀಕರ ಸ್ಥಿತಿ ಮೀಸಲಾತಿಯ ವಿಷಯದಿಂದ ಆಗುತ್ತಿದೆ. ಉತ್ತರ ಪ್ರದೇಶದ ಸಮಾಜವಾದಿ ಪಕ್ಷ ಮೀಸಲಾತಿಗೆ ಪೂರ್ಣ ವಿರೋಧವಾಗಿದ್ದರೆ, ಬಹುಜನ ಪಕ್ಷ ಪೂರ್ಣ ಪರವಾಗಿದೆ. ಈ ಎರಡು ರಾಜಕೀಯ ಪಕ್ಷಗಳ ಅನುಯಾಯಿಗಳು ಪರಸ್ಪರ ವಿರೋಧಿಸುವುದಕ್ಕೆ ಮತ್ತು ದ್ವೇಷಿಸುವುದಕ್ಕೆ ಕಾರಣವಾಗಿದೆ.

ಇತ್ತೀಚಿಗೆ ಗುಜರಾತ್‌ನಲ್ಲಿ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಜಾತಿಯ ಮೇಲಾಟವೇ ನಡೆದಿದೆ. ೧೦ ವರ್ಷ ಹಿಂದಿನ ದುಃಸ್ವಪ್ನ ಮತ್ತೆ ಕಾಡದಿರಲಿ ಎಂದು ಅಲ್ಲಿಯ ಜನ ಕಂಡ ಕಂಡ ದೇವರಿಗೆ ಹರಕೆ ಕಟ್ಟುತ್ತಿದ್ದಾರೆ. ಒಂದು ಸಮೀಕ್ಷೆ ಪ್ರಕಾರ ಮುಸ್ಲಿಂ ಸಮಾಜ ಮೋದಿ ಅವರನ್ನು ನಂಬುವ ಸ್ಥಿತಿಯಲ್ಲಿಲ್ಲ. ಮುಸ್ಲಿಮರನ್ನು ಪ್ರಜಾಸತ್ತಾತ್ಮಕ ವ್ಯವಸ್ಥೆಯಿಂದ ದೂರವಿಟ್ಟು ಗುಜರಾತನ್ನು ಧರ್ಮದ ಆಧಾರದಲ್ಲಿ ಒಡೆದಿದ್ದಾರೆ ಎಂಬ ಭಾವನೆ ಹಲವರಲ್ಲಿದ್ದರೆ, ಕರ್ನಾಟಕದಲ್ಲಿ ಜೆ.ಡಿ.ಎಸ್ ಪಕ್ಷ ೧೫ ಮುಸ್ಲಿಮರಿಗೆ ಟಿಕೆಟ್ ಕೊಡುವುದರ ಮೂಲಕ ಮುಸ್ಲಿಮರನ್ನು ಓಲೈಸುವ ಪ್ರಯತ್ನ ಮಾಡಿದೆ.

ಇಂದು ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬರಲಿ ಮತ್ತು ಅವುಗಳ ಪ್ರನಾಳಿಕೆ ಸೈದ್ಧಾಂತಿಕವಾಗಿ ಎಷ್ಟು ಭಿನ್ನವಾಗಿರಲಿ ಅವು ಅಧಿಕಾರಕ್ಕೆ ಬಂದೊಡನೆಯೇ ಜಪಿಸುವ ಮಂತ್ರ ಅದೇ ಅಭಿವೃದ್ಧಿಯದು. ಅಭಿವೃದ್ಧಿ ಎಂದರೆ ಭಾರತೀಯ ಪರಿಸ್ಥಿತಿಗೆ ಅನುಸಾರವಲ್ಲ, ಬದಲಿಗೆ ಪಾಶ್ಚಿಮಾತ್ಯ ರೀತಿಯ ಆಧುನಿಕತೆಯ ಕಾರ್ಬನ್‌ಕಾಪಿ ಆಗಿರುತ್ತದೆ. ಈ ಅಭಿವೃದ್ಧಿ ಮೂಲಕ ಜನತೆಯನ್ನು ಎಲ್ಲ ರೀತಿಯಲ್ಲಿ ನಿಸ್ಸಾಹಯಕರನ್ನಾಗಿ ಮಾಡಿ ಪ್ರತಿಯೊಂದಕ್ಕೂ ಸರ್ಕಾರವನ್ನೇ ಅವಲಂಬಿಸುವಂತೆ ಮಾಡುತ್ತವೆ. ಅದರ ಪರಿಣಾಮ ಜನಶಕ್ತಿ ಎಂಬುದು ಕುಂಠಿತವಾಗಿ ಸರ್ಕಾರದ ಶಕ್ತಿ ಅರ್ಥಾತ್ ದಂಡಶಕ್ತಿ ಬಲವಾಗುವಂತೆ ಮಾಡುತ್ತದೆ. ಸರ್ಕಾರ ಕೈಗೊಂಡ ತಪ್ಪು ಅಭಿವೃದ್ಧಿ ಯೋಜನೆಗಳಿಂದ ತೊಂದರೆಯಿದೆ ಎಂದು ಜನತೆ ಪ್ರತಿಭಟನೆ ಮಾಡಿದರೆ ಅವರಿಗೆ ದೊರೆಯುವ ಉತ್ತರ ಲಾಟಿ ಪ್ರಹಾರ. ಇದಕ್ಕೆ ಇತ್ತಿಚಿನ ಉದಾಹರಣೆ ಕುಡಂಕುಲಂ ಅಣ್ವಸ್ತ್ರ ವಿರೋಧ ಮತ್ತು ದಮನವನ್ನು ನೆನಪಿಸಿಕೊಳ್ಳಬಹುದು. ರಾಜಕೀಯಪಕ್ಷಗಳ ಪ್ರಭುತ್ವದಲ್ಲಿ ನಿಜವಾದ ಪ್ರಜಾತಂತ್ರ ಅಥವಾ ಲೋಕನೀತಿ ನೆಪಮಾತ್ರದಲ್ಲಿ ಉಳಿಯುತ್ತದೆ. ಪ್ರಪಂಚದಲ್ಲೇ ದೊಡ್ಡದಾದ ಭಾರತೀಯ ಪ್ರಜಾತಂತ್ರ ರಾಜಕೀಯ ಪಕ್ಷಗಳ ಪ್ರಭುತ್ವದ ಕಾರಣದಿಂದ ಅತ್ಯಂತ ದುರ್ಬಲವಾದ ಪ್ರಜಾತಂತ್ರವಾಗಿದೆ. ಏಕೆಂದರೆ ಇಲ್ಲಿಯ ಜನತೆಯ ಸರಾಸರಿ ದಿನದ ಒಬ್ಬನ ಖರ್ಚು ಇಪ್ಪತ್ತು ರೂಪಾಯಿ. ದೈನಂದಿನ ಜೀವನ ನಡೆಸುವುದು ಅತ್ಯಂತ ದುಸ್ತರ. ದಲಿತರ, ಆದಿವಾಸಿಗಳ ಸಮಾಜದ ಇನ್ನುಳಿದ ಇತರರ ಜೀವನ ತುಂಬಾ ಕಷ್ಟಕರವಾಗಿದೆ. ಬಡತನ ಮತ್ತು ಶ್ರೀಮಂತಿಕೆ ಮಧ್ಯೆ ಅಂತರ

ಪಜ್ಞಾಗುತ್ತಿದೆ. ಆಡಳಿತದ ಅತಿಯಾದ ಭ್ರಷ್ಟಾಚಾರ ಜನರ ನೆಮ್ಮದಿಯನ್ನು ಹಾಳುಮಾಡಿದೆ. ಅಭಿವೃದ್ಧಿ ತೋರಿಕೆಯದಾಗಿದೆಯೆ ಹೊರತು ನಿಜವಾದ ಅರ್ಥದಲ್ಲಿ ಸ್ವಾವಲಂಬನೆಯಾಧಾರಿತ ಅಭಿವೃದಿಯಾಗಿಲ್ಲ. ಅಭಿವೃದ್ಧಿಯಲ್ಲಿ ದೇಶದ 'ನಂಬರ್ ಒನ್' ರಾಜ್ಯವೆಂದು ಹೇಳಿಕೊಳ್ಳುವ ಗುಜರಾತಿನಲ್ಲಿ ಆದಿವಾಸಿಗಳು ಪ್ರಾಣಿಗಳಿಗಿಂತ ಕಡೆಯಾಗಿ ಬದುಕುತ್ತಿದ್ದಾರೆ. ಇದು ಉತ್ಪ್ರೇಕ್ಷೆಯ ಮಾತಲ್ಲ. ಕೇಳುವವರಿಲ್ಲದೆ ಅನಾಥವಾಗಿರುವ ಆದಿವಾಸಿಗಳ ಹಾಡಿಗಳಿಗೆಗೊಮ್ಮೆ ಇಣಕುಹಾಕಿದರೆ ನಗ್ನ ಸತ್ಯ ಅನಾವರಣಗೊಳ್ಳುತ್ತದೆ ಎಂದು ಪತ್ರಿಕಾವರದಿಯೊಂದು ಚೀರುತ್ತದೆ. ಇಂಥ ಅಭಿವೃದ್ಧಿಯನ್ನು ವಿರೋಧಿಸುವ ಚೈತನ್ಯ ನಮ್ಮ ಜನರಿಗೆ ಇಲ್ಲವಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಎಲ್ಲರಿಗೂ ಯಥೇಚ್ಛವಾಗಿ ಹಣ ಮತ್ತು ರಿಯಾಯ್ತಿ ಇತ್ಯಾದಿ ಎಲ್ಲ ದೊರೆಯುತ್ತಿರುವುದರಿಂದ ಜನ ಬಾಯಿಮುಚ್ಚಿ ಕುಳಿತ್ತಿದ್ದಾರೆ. ಅಭಿವೃದ್ಧಿ ಹೆಸರಿನಲ್ಲಿ ಹಣದ ಹಂಚಿಕೆ ಭ್ರಷ್ಟಾಚಾರವೇ ಆಗಿದೆ. ದೇಶಾದ್ಯಂತ ನಡೆಯುತ್ತಿರುವ ಅಭಿವೃದ್ಧಿ ಪ್ರಕ್ರಿಯೆಯಿಂದಾಗಿ ಇಡೀ ದೇಶದ ಜನತೆ ಭ್ರಷ್ಟವಾಗಿದೆ ಎಂದ ಮೇಲೆ ಭಾರತದ ಪ್ರಜಾತಂತ್ರ ನಿಜವಾದ ಪ್ರಜಾತಂತ್ರವಾಗಬಲ್ಲದೆ?

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಇಷ್ಟರಲ್ಲಿಯೇ ೩ಹಂತದ ಪಾದಯಾತ್ರೆ ನಡೆಸಿ ಬಿ.ಜೆ.ಪಿ ಸರ್ಕಾರದ ನ್ಯೂನತೆಗಳನ್ನು ಹಾಗೂ ವೈಫಲ್ಯಗಳನ್ನು ಸಾರಿ ತನಗೆ ಮತ ಬೇಕೆಂದು ಯಾಚಿಸಲು ಹೊರಟಿದೆ. ಇದೊಂದು ತಲೆಕೆಳಕಾದ ಕೆಲಸ. ಏಕೆಂದರೆ ಇನ್ನೊಬ್ಬರ ನ್ಯೂನತೆಗಳನ್ನು ಹೇಳಿ ಮತ ಪಡೆಯುವುದಕ್ಕಿಂತ ನಾನೇನು ಮಾಡುತ್ತೇನೆ ಎಂದು ಹೇಳಿ ಮತ ಯಾಚಿಸುವುದು ಸಕಾರಾತ್ಮಕ ಮನೋಭಾವ. ಇದರಿಂದ ಪ್ರಜಾತಂತ್ರ ಬಲಗೊಳ್ಳಲು ಸಾಧ್ಯ. ಕಾಂಗ್ರೆಸ್ ಪಕ್ಷದ ನಕಾರಾತ್ಮಕ ಪ್ರಯತ್ನ ಪ್ರಜಾತಂತ್ರವನ್ನು ದುರ್ಬಲಗೊಳಿಸದೆ ಇರುವುದಿಲ್ಲ. ಯಾವ ದೇಶದಲ್ಲಿ ನಿಜವಾದ ಪ್ರಜಾತಂತ್ರದ ಬದಲು ಪಕ್ಷಗಳ ಪ್ರಭುತ್ವ ಇರುತ್ತದೋ ಅಲ್ಲಿಯ ಜನತೆಯಲ್ಲಿರುವ ಚಿಂತನಾಶಕ್ತಿ ರಾಜಕೀಯವಾಗಿ ಪ್ರಕಟಗೊಳ್ಳುವುದು ಬಲುಕಷ್ಟ. ಅಭಿವ್ಯಕ್ತಿ ಸ್ವಾತಂತ್ರ್ಯವಿರುವುದಿಲ್ಲವೆಂದಲ್ಲ. ಅಲ್ಲಿ ಅಧಿಕಾರದಲ್ಲಿ ಇರುವ ರಾಜಕೀಯ ಪಕ್ಷ ಅಭಿವೃದ್ಧಿ ಅಥವಾ ಸಮಾಜೋಪಯೋಗಿ ಕೆಲಸದ ಹೆಸರಿನಲ್ಲಿ ಹಣವನ್ನು ವಿಚಕ್ಷಣವಿಲ್ಲದೆ ಯಥೇಚ್ಛವಾಗಿ ಖರ್ಚುಮಾಡುವುದರಿಂದ ಜನರೆಲ್ಲ ಪರೋಕ್ಷವಾಗಿ ಅಧಿಕಾರದಲ್ಲಿ ಇರುವ ಪಕ್ಷಕ್ಕೆ ಶರಣಾಗತರಾಗಿರುತ್ತಾರೆ. ಅದರ ಪರಿಣಾಮ ಚುನಾವಣೆಯಲ್ಲಿ ಅಧಿಕಾರದಲ್ಲಿ ಇರುವ ಪಕ್ಷವೇ ಪ್ರಭುತ್ವವನ್ನು ಸ್ಥಾಪಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಇತ್ತೀಚಿಗೆ ನಡೆದ ಗುಜರಾತ್ ಚುನಾವಣೆ. ನರೇಂದ್ರ ಮೋದಿಯವರು ತಮ್ಮೆಲ್ಲ ದೌರ್ಬಲ್ಯಗಳ ಮಧ್ಯೆಯೂ ಅಧಿಕಾರದಲ್ಲಿ ಇದ್ದುದ್ದರಿಂದ ಅವರ ಪಕ್ಷವೇ ಪುನಃ ಅಧಿಕಾರಕ್ಕೆ ಬಂದಿದೆ. ಹಿಮಾಚಲ ಪ್ರದೇಶದಲ್ಲಿಯೂ ಸಹ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವೇ ಚುನಾಯಿತವಾಗಿದೆ. ಪಶ್ಚಿಮ ಬಂಗಾಳದಲ್ಲಿ ಸತತವಾಗಿ ಕಮ್ಯೂನಿಸ್ಟ್ ಪಕ್ಷ ೧೪ ವರ್ಷ ಅಧಿಕಾರ ನಡೆಸಿತು. ಇದೆಲ್ಲವೂ ಅಲ್ಪಮತ ಮತ್ತು ಬಹುಮತ ಎಂಬ ಸಿದ್ಧಾಂತದ ಕಾರಣದಿಂದಲೂ ಆಗುತ್ತದೆ. ಯಾವುದೇ ಒಂದು ವಿಷಯದಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದಾಗಲೂ ಸರ್ವಸಮ್ಮತಿಯಿಂದ ಮಸೂದೆ ಆದರೆ ಅಲ್ಲಿ ಪ್ರಜಾತಂತ್ರ ನಡೆಯಿತೆಂದು

ಹೇಳಬಹುದು. ಇಂಥ ಒಂದು ಉದಾಹರಣೆ ಹೈದರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕೊಡುವ ವಿಧೇಯಕಕ್ಕೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಪಕ್ಷಭೇದ ಹೊರತಾಗಿಯೂ ಸರ್ವಾನುಮತದಿಂದ ವಿಧೇಯಕ ಮಂಡನೆಯಾಯಿತು. ಇದ-ರಿಂದ ಕನ್ನಡಿಗರಿಗೆಲ್ಲರಿಗೂ ಮುಖ್ಯವಾಗಿ ಆ ಪ್ರದೇಶದಲ್ಲಿಯ ಜನರಿಗೆ ವಿಶೇಷವಾದ ಸಂತೋಷ, ಹೆಮ್ಮೆ ಮತ್ತು ಗೌರವ. ಈ ಮಾದರಿಯಲ್ಲಿ ವಿಧೇಯಕಗಳು ರೂಪುಗೊಳ್ಳುತ್ತಾ ಹೋದಲ್ಲಿ ಪ್ರಜಾಪ್ರಭುತ್ವ ಪರಿಪಕ್ವಗೊಳ್ಳುವುದರಲ್ಲಿ ಸಂಶಯವಿಲ್ಲ. ಇಲ್ಲಿ ಮನು ಮಹಾರಾಜರ ಒಂದು ದೃಷ್ಟಾಂತ ನೆನೆಪಾಗುತ್ತದೆ. ಅರಾಜಕತೆಯನ್ನು ಅನುಭವಿಸುತ್ತಿದ್ದ ಜನರೆಲ್ಲರೂ ಮಹಾಜ್ಞಾನಿ ಮತ್ತು ತತ್ವಜ್ಞಾನಿ ಮನು ಬಳಿ ಬಂದು ಅವರನ್ನು ತಮ್ಮ ರಾಜರಾಗಲು ಕೋರಿದರು. ಆಗ ಮನು ಸರ್ವಾನುಮತದಿಂದ ತಮ್ಮನ್ನು ಆಯ್ಕೆ ಮಾಡಿದರೆ ಮಾತ್ರ ರಾಜನಾಗಬಹುದೆಂದು ಹೇಳಿದರು. ೫೧:೪೯ ಅನುಪಾತದಲ್ಲಿ ಆಯ್ಕೆಮಾಡಿ ಅಂದರೆ ೯೯ ಜನ ಒಪ್ಪಿ ಒಬ್ಬನು ಒಪ್ಪದಿದ್ದರೂ ನಾವು ಸಲಹೆ ಮಾತ್ರ ಕೊಡಬಲ್ಲೆವು ಎಂದು ಹೇಳಿದರು. ತಾವು ರಾಜ್ಯಭಾರ ಮಾಡುವಾಗ ಆದ ಪಾಪಗಳಿಗೆ ಜನರೇ ಹೊಣೆಯಾದರೆ ಮಾತ್ರ ತಾವು ರಾಜರಾಗಬಹುದೆಂದು ಹೇಳಿದರು. ಏಕೆಂದರೆ ಒಂದು ಉಕ್ತಿಯ ಪ್ರಕಾರ "ರಾಜ್ಯಂತೇ ನರಕ ಪ್ರಾಪ್ತಿಃ" ಎಂದಿರುವುದರಿಂದ ತಾವು ರಾಜರಾಗುವುದಿಲ್ಲ ಎಂದು ಹೇಳಿದರು. ಆಗ ಜನರು ತಮಗೆ ಒಳ್ಳೆಯ ರಾಜನಿರಲೆಂದು ಸರ್ವಾನುಮತದಿಂದ ಮನುವನ್ನು ರಾಜನನ್ನಾಗಿ ಮಾಡಿದರು. ಇದೇ ರೀತಿಯಲ್ಲಿ ದೇಶದ ಮತದಾರರಾದ ಪ್ರಜೆಗಳು ಯೋಚಿಸಬೇಕು. ಆಡಳಿತಪಕ್ಷ ತನ್ನ ತಪ್ಪಿಗೆ ತಾನೆ ಹೊಣೆಯಾಗಬೇಕು. ಜನತೆಯಲ್ಲ ಎಂಬ ನಿಲುವನ್ನು ತಾಳಬೇಕು. ಭ್ರಷ್ಟಾಚಾರದ ಗಂಗೋತ್ರಿಯಾದ ರಾಜಕೀಯಪಕ್ಷಗಳ ಪ್ರಭುತ್ವ ಇರುವವರೆಗೆ ನಮ್ಮದು ನಿಜವಾದ ಪ್ರಜಾತಂತ್ರ ಎಂದೆನಿಸುವುದಿಲ್ಲ. ಅದು ಪಕ್ಷಗಳ ಪ್ರಭುತ್ವವಾಗುತ್ತದೆಯೇ ಹೊರತು ನಿಜವಾದ ಪ್ರಜಾತಂತ್ರ ಆಗಲಾರದು. ಇದರ ಅರ್ಥ ರಾಜಕೀಯ ಪಕ್ಷಗಳು ಇರಬಾರದು ಎಂದಲ್ಲ. ಕೇಂದ್ರೀಕೃತ ಆಡಳಿತ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಶೈಕ್ಷಣಿಕ ವ್ಯವಸ್ಥೆ ಇತ್ಯಾದಿ ವ್ಯವಸ್ಥೆಗಳು ಇರುವವರೆಗೂ ರಾಜಕೀಯ ಪಕ್ಷಗಳ ಅನಿವಾರ್ಯತೆ ಇರುತ್ತದೆ. ಇದಕ್ಕೆ ಬದಲಾಗಿ ಎಲ್ಲ ಕ್ಷೇತ್ರಗಳೂ ವಿಕೇಂದ್ರಿತವಾದಾಗ ಮುಖಾಮುಖಿ ಸಮಾಜ ಉಂಟಾದಾಗ ಅಂದರೆ ಪ್ರಭುತ್ವ ಬೇರೆ, ಸ್ವರಾಜ್ಯ ಬೇರೆ ಎಂಬರ್ಥದಲ್ಲಿ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಭುತ್ವ ಇರುವುದಾದರೆ ರಾಜಕೀಯಪಕ್ಷಗಳು ಕರಗಿ ಹೋಗುತ್ತವೆ. ಇಷ್ಟರಲ್ಲಿಯೇ ಅಂದರೆ ೨೦೧೩ರಲ್ಲಿ ಕರ್ನಾಟಕದಲ್ಲಿ ಮತ್ತು ೨೦೧೪ರಲ್ಲಿ ಲೋಕಸಭೆ ಚುನಾವಣೆ ನಡೆಯಲಿದೆ ಅಷ್ಟರೊಳಗಾಗಿ ಭಾರತೀಯ ಮತದಾರರು ಈ ನಿಟ್ಟಿನಲ್ಲಿ ಯೋಚಿಸಲೆಂದು ಆಶಿಸಲಾಗಿದೆ. ಇದನ್ನೇ ಸರ್ವೋದಯ ಸಮಾಜ ಎನ್ನುವುದು. ಅಂಥ ಸರ್ವೋದಯ ಸಮಾಜ ನಿರ್ಮಾಣಕ್ಕಾಗಿ ನಾವೆಲ್ಲರೂ ಶ್ರಮಿಸಿ ಪಕ್ಷಗಳ ಪ್ರಭುತ್ವ ತೆಗೆದು ಹಾಕಿ ಪ್ರಜಾತಂತ್ರ ಸ್ಥಾಪಿಸೋಣ.

* * *

ನಾಗರೀಕರೇಕೆ ನಕ್ಸಲರಾಗುತಾರೆ
ಒಂದು ವಸ್ತುಸ್ಥಿತಿ

– ರವೀಂದ್ರ ಭಟ್ಟ

ನಕ್ಸಲರಾಗಲು ಈ ರಸ್ತೆ ಪಯಣ ಒಂದೇ ಸಾಕು

ಇದು ರಾಜ್ಯ ಹೆದ್ದಾರಿ. ಸಕಲೇಶಪುರದಿಂದ ಕುಕ್ಕೆಸುಬ್ರಹ್ಮಣ್ಯಕ್ಕೆ ಹೋಗುತ್ತದೆ. ಬಿಸಲೆ, ವಣಗೂರು, ಗೊದ್ದ, ಸೋಮವಾರಪೇಟೆಗೂ ಇದು ಸಂಪರ್ಕ ರಸ್ತೆ. ಸಕಲೇಶಪುರದಿಂದ ಯಾವುದೇ ವಾಹನದಲ್ಲಿ ಹೊರಟು ವಣಗೂರು ತಲುಪುವುದರೊಳಗೆ ನೀವು ಮಾನಸಿಕವಾಗಿ ನಕ್ಸಲರಾಗಿ ಬಿಡುತ್ತೀರಿ. ರಸ್ತೆಯನ್ನು ಈ ಸ್ಥಿತಿಗೆ ತಂದವರು ಮತ್ತು ಅದನ್ನು ದುರಸ್ತಿ ಮಾಡದೆ ಹಾಗೇ ಬಿಟ್ಟವರಿಗೆ ಕೋವಿಯಿಂದ ಗುಂಡು ಸಿಡಿಸಬೇಕು ಎನ್ನುವಷ್ಟು ಸಿಟ್ಟಿಗೇಳುತ್ತೀರಿ. ಅಷ್ಟೊಂದು ಕೆಟ್ಟ ರಸ್ತೆ ಇದು.

ಕಾರು, ಜೀಪು, ಬೈಕ್‌ಗಳು ಮಾತ್ರ ಅಲ್ಲ ಇಡೀ ಬಸ್ಸೇ ಒಳಕ್ಕೆ ಬೀಳಬಹುದಾದ ಗುಂಡಿಗಳು ಈ ರಸ್ತೆಯಲ್ಲಿವೆ. ಕಷ್ಟವಾದರೂ ಹೇಗಾದರೂ ಸುಧಾರಿಸಿಕೊಂಡು ಹೋಗಬಹುದು ಎಂದರೆ ಅದು ಜೀಪು ಮಾತ್ರ.

ಈಗ ಮಳೆ ಬಂದು ರಸ್ತೆ ಹೊಳೆಯಾಗಿದೆ. ಘಟ್ಟದ ಪ್ರದೇಶವಾಗಿದ್ದರಿಂದ ತಿರುವು ಮುರುವು ಜಾಸ್ತಿ. ಜೀವ ಕೈಯಲ್ಲಿಯೇ ಇಟ್ಟುಕೊಂಡು ಸಾಗಬೇಕು. ಆದರೂ ಈ ರಸ್ತೆಯಲ್ಲಿ ಈಗಲೂ ಬಸ್ಸುಗಳು ಸಂಚರಿಸುತ್ತವೆ.

ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಅವರ ಸ್ವಗ್ರಾಮಕ್ಕೆ ನಕ್ಸಲೀಯರು ಬಂದಿದ್ದರಂತೆ, ಸಕಲೇಶಪುರ ಹೊನ್ನಾಟ್ಟು ಗ್ರಾಮಕ್ಕೆ ಬಂದು ಅಕ್ಕಿ, ಎಣ್ಣೆ ತೆಗೆದುಕೊಂಡು ಹೋದರಂತೆ, ಮೆಣಸಿನಹಾಡ್ಯಕ್ಕೆ ಬಂದು ಊಟ ಮಾಡಿ ಹೋದರಂತೆ ಎಂಬ ಸುದ್ದಿಗಳನ್ನು ತಿಳಿದು ನಕ್ಸಲ್ ಪ್ರಭಾವವಿರುವ ಗ್ರಾಮಗಳ ಪರಿಸ್ಥಿತಿ ಅವಲೋಕನಕ್ಕೆ ಹೊರಟ ನನಗೆ ಸಕಲೇಶಪುರದ ಹೊನ್ನಾಟ್ಟು ಪ್ರಯಾಣವೇ ಪ್ರಯಾಸವಾಗಿತ್ತು.

ನನ್ನ ಜೊತೆ ಇದ್ದ ಜಾನಕೆರೆ ಪರಮೇಶ್ ಕಷ್ಟಪಟ್ಟು ಜೀಪು ಓಡಿಸುತ್ತಿದ್ದರೆ ಪರಿಸರವಾದಿ ಉಮೇಶ್ ಕಾಡಂಚಿನ ಗ್ರಾಮಗಳ ಸಂಕಷ್ಟಗಳನ್ನು ಬಿಚ್ಚಿಡುತ್ತಿದ್ದರು. ರಾಜ್ಯ ಹೆದ್ದಾರಿಯ ಕತೆಯೇ ಹೀಗಾದರೆ ಇನ್ನು ಗ್ರಾಮೀಣ ರಸ್ತೆಗಳ ಕತೆಯನ್ನು ಕೇಳುವುದೇ ಬೇಡ. ತಾಲ್ಲೂಕಿನ ಎಲ್ಲ ರಸ್ತೆಗಳೂ ಹಾಳಾಗಿವೆ. ಆನೆಗಳು ದಾಳಿ ಮಾಡಿದರೆ ತಪ್ಪಿಸಿಕೊಂಡು ಓಡಿಹೋಗಲೂ ರಸ್ತೆ ಇಲ್ಲ ಎಂಬ ಉದ್ಗಾರ ಉಮೇಶ್ ಅವರಿಂದ ಬಂತು.

ಸಕಲೇಶಪುರ ತಾಲ್ಲೂಕಿನ ಐಗೂರು ಗ್ರಾಮ ಪಂಚಾಯ್ತಿ, ಚಿಕ್ಕಕಲ್ಲೂರು, ದೊಡ್ಡಕಲ್ಲೂರು, ಕೊತ್ನಹಳ್ಳಿ, ಕುಂಬ್ರಳ್ಳಿ, ಕೆರೋಡಿ, ಮಾಗಲು, ಯಡಕೇರಿ, ಚಿಕ್ಕುಂದೂರು, ಹಾಡ್ಯ, ಬಾಳಕೆರೆ, ಕಾಗಿನಹರೆ, ಬಾಳೆಹಳ್ಳ, ಬಾಜೇಮನೆ, ಸಿಂಕೇರಿ, ಜಗಾಟ, ಬಟ್ಟೆಕುಮೇರಿ, ಎತ್ತಳ್ಳ, ಬಿಸಿಲೆ, ಮಂಕನಹಳ್ಳಿ, ಅರಣಿ ಮುಂತಾದ

ಪ್ರದೇಶಗಳಲ್ಲಿ ಕಾಡಾನೆಗಳ ಹಾವಳಿ ಜಾಸ್ತಿ.

ಈ ಭಾಗದ ಪ್ರಮುಖ ಬೆಳೆ ಏಲಕ್ಕಿ. ಜೊತೆಗೆ ಬತ್ತ ಬೆಳೆಯುತ್ತಾರೆ. ಏಲಕ್ಕಿಗೆ ಕಟ್ಟೆ, ಕೊಕ್ಕೆಕಂದು ರೋಗ ಬಂದಿದೆ. ಪ್ರತಿಕೂಲ ಹವಾಮಾನದಿಂದ ಇಳುವರಿ ಕಡಿಮೆಯಾಗಿದೆ. ಮಾರುಕಟ್ಟೆಯಲ್ಲಿ ಬೆಲೆ ಇಲ್ಲ. ಬತ್ತ ಮತ್ತು ಬಾಳೆಯನ್ನು ಆನೆ, ಕಾಡುಹಂದಿ, ಕಾಡುಕೋಣಗಳು ಬಿಡುತ್ತಿಲ್ಲ. ಸಂಜೆ ಗಂಟೆಯಾಗುತ್ತಲೇ ಆನೆಗಳ ಹಿಂಡು ಹೊಲಕ್ಕೆ ನುಗ್ಗುತ್ತವೆ. ಎಲ್ಲ ಬೆಳೆಗಳನ್ನೂ ನಾಶ ಮಾಡುತ್ತವೆ.

ಆನೆಗಳ ಕಾಟಕ್ಕೆ ಹೆದರಿ ಹೊಲಗಳನ್ನು ಈಗ ಖಾಲಿ ಬಿಡಲಾಗಿದೆ. ಸಾವಿರಾರು ಎಕರೆ ಏಲಕ್ಕಿ ತೋಟಗಳು ಪಾಳು ಬಿದ್ದಿವೆ. ಕಾಡಂಚಿನ ಗ್ರಾಮಗಳನ್ನು ಎತ್ತಂಗಡಿ ಮಾಡಿ ಆನೆ ಕಾರಿಡಾರ್ ನಿರ್ಮಾಣ ಮಾಡಲಾಗುತ್ತದೆ ಎಂಬ ರಾಜ್ಯ ಸರ್ಕಾರದ ಹೇಳಿಕೆ ಕೂಡ ಇಲ್ಲಿನ ಜನರನ್ನು ಇನ್ನಷ್ಟು ಗೊಂದಲಕ್ಕೆ ಈಡು ಮಾಡಿದೆ.

ಒಂದಿಷ್ಟು ಜನ ಆನೆ ಕಾರಿಡಾರ್ ಪರವಾಗಿದ್ದರೆ ಇನ್ನು ಕೆಲವರು ವಿರೋಧವಾಗಿದ್ದಾರೆ. 'ನಮ್ಮ ಜಮೀನುಗಳಿಗೆ ಉತ್ತಮ ಪರಿಹಾರ ನೀಡಿ ಸೂಕ್ತ ಪುನರ್‌ವಸತಿ ನೀಡಿದರೆ ನಾವು ಸ್ಥಳಾಂತರಕ್ಕೆ ಸಿದ್ಧ' ಎಂದು ಕಾಗಿನಹರೆ ಮೋಹನ್ ಹೇಳುತ್ತಾರೆ.

ಇಲ್ಲಿ ಇನ್ನೊಂದು ಒಳ ಸಮಸ್ಯೆ ಇದೆ. ಬಹುತೇಕ ಮಂದಿ ಕಾಡನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಆರ್‌ಟಿಸಿಯಲ್ಲಿ ಐದು ಎಕರೆ ಎಂದು ಇದ್ದರೆ ಇವರು ಎಕರೆ ಒತ್ತುವರಿ ಮಾಡಿಕೊಂಡಿದ್ದಾರೆ. 'ನನ್ನ ಹೆಸರಿನಲ್ಲಿ ಎಕರೆ ಇದೆ. ಒತ್ತುವರಿ ಎಕರೆ ಇದೆ' ಎಂದು ಒಬ್ಬರು ತುಂಬಾ ಹೆಮ್ಮೆಯಿಂದಲೇ ಹೇಳಿಕೊಂಡರು.

ಆನೆ ಕಾರಿಡಾರ್ ಹೆಸರಿನಲ್ಲಿ ಜನರನ್ನು ಎತ್ತಂಗಡಿ ಮಾಡಿದರೆ ಪರಿಹಾರ ಸಿಗುವುದು ಕೇವಲ ಅಧಿಕೃತ ಜಮೀನುಗಳಿಗೆ ಮಾತ್ರ. ಹೆಚ್ಚು ಹೆಚ್ಚು ಒತ್ತುವರಿ ಮಾಡಿಕೊಂಡವರು ಈಗ ಚಿಂತೆಯಲ್ಲಿದ್ದಾರೆ. ಆದರೂ ಆನೆ ಕಾಟ ಎಷ್ಟಿದೆ ಎಂದರೆ ಒತ್ತುವರಿ ಜಮೀನು ಹೋದರೆ ಹೋಗಲಿ, ಅಧಿಕೃತ ಜಮೀನಿಗೆ ಒಳ್ಳೆ ಪರಿಹಾರ ಕೊಟ್ಟರೆ ಇಲ್ಲಿಂದ ಹೋಗಿ ಬಿಡೋಣ ಎನ್ನುವ ಮಟ್ಟಕ್ಕೂ ಅಲ್ಲಿನ ಜನ ಬಂದಿದ್ದಾರೆ.

ಆನೆ ಮತ್ತು ಇತರ ಕಾಡು ಪ್ರಾಣಿಗಳ ಕಾಟ. ರಸ್ತೆ, ಆಸ್ಪತ್ರೆ, ಶಾಲೆ ಮುಂತಾದ ಮೂಲಭೂತ ಸೌಲಭ್ಯಗಳ ಕೊರತೆಗಳಿಂದ ಹೈರಾಣಾಗಿ ಹೋಗಿರುವ ಇಲ್ಲಿನ ಒಂದಿಷ್ಟು ಜನರಿಗೆ ನಕ್ಸಲರು ಆಶಾಕಿರಣದಂತೆ ಕಂಡರೆ ಇನ್ನು ಕೆಲವರಿಗೆ ಭಯೋತ್ಪಾದಕರಂತೆ ಕಾಣುತ್ತಿದ್ದಾರೆ.

'ನಾವು ಬತ್ತ ಬೆಳೆದು ಆನೆಗಳಿಗೆ ಹಾಕಿ ಅಂಗಡಿಯಿಂದ ಅಕ್ಕಿ ತಂದು ತಿನ್ನುವಂತೆ ಆಗಿದೆ. ಇಲ್ಲಿ ಬದುಕು ಕಷ್ಟ. ಈ ಪ್ರಾಯದಲ್ಲಿ ಬೇರೆಡೆಗೆ ಹೋಗುವುದೂ ಕಷ್ಟ. ದಿಕ್ಕು ತೋಚದಾಗಿದೆ' ಎಂದು ಹೊನ್ನಾಟ್ಟು ಪ್ರಕಾಶ್ ಗೋಳು ಹೇಳಿಕೊಂಡರು. ಇವರ ಮನೆಗೇ ಇತ್ತೀಚೆಗೆ ನಕ್ಸಲರ ತಂಡ ಭೇಟಿ ನೀಡಿ ಅಕ್ಕಿ, ಎಣ್ಣೆ ಪಡೆದುಕೊಂಡು ಹೋಗಿದೆ. ಆ ಅನುಭವಗಳನ್ನು ಪ್ರಕಾಶ್ ಅವರಿಂದ ಕೇಳೋದು ಚೆನ್ನ.

ನಕ್ಸಲೀಯರು ಎಂದರೆ ಭಯೋತ್ಪಾದಕರಲ್ಲ!

ಸಕಲೇಶಪುರ ತಾಲ್ಲೂಕಿನ ಬಿಸಿಲೆ ಮೀಸಲು ಅರಣ್ಯದ ಅಂಚಿನಲ್ಲಿರುವ

ಪುಟ್ಟ ಗ್ರಾಮ ಹೊನ್ನಾಟ್ಳು. ಅಲ್ಲಿ ಇರೋದು ಕೇವಲ ಮನೆಗಳು. ಆನೆ ಕಾಟ ವಿಪರೀತ. ಜೊತೆಗೆ ಕಾಡೆಮ್ಮೆ, ಕಾಡು ಕೋಣ, ಕಾಡು ಹಂದಿಗಳು ಅಲ್ಲಿಗೆ ಬರುವುದು ಅಪರೂಪವೇನಲ್ಲ. ಬೃಹತ್ ಕಾಳಿಂಗ ಸರ್ಪವೊಂದು ಇದೇ ಗ್ರಾಮದಲ್ಲಿ ಹಲವಾರು ದಿನಗಳು ಉಳಿದುಕೊಂಡು ಸುದ್ದಿ ಮಾಡಿತ್ತು. ಕಾಡಿನಿಂದ ಕೇವಲ ಪ್ರಾಣಿಗಳು ಮಾತ್ರ ಬರುತ್ತಿದ್ದ ಈ ಗ್ರಾಮಕ್ಕೆ ಈಗ ನಕ್ಸಲರೂ ಬರುತ್ತಿದ್ದಾರೆ.

ಇತ್ತೀಚೆಗೆ ಹೊನ್ನಾಟ್ಳು ಪ್ರಕಾಶ್ ಅವರ ಮನೆಗೆ ಮೂವರು ನಕ್ಸಲರು ಬಂದಿದ್ದರು. ಮನೆಯಲ್ಲಿ ಕುಳಿತು ಪಟ್ಟಾಂಗ ಹೊಡೆದರು. ಚಹಾ ಕುಡಿದರು. ಒಂದಿಷ್ಟು ಅಕ್ಕಿ, ಎಣ್ಣೆ ಮತ್ತಿತರ ಸಾಮಗ್ರಿಗಳನ್ನು ಬೇಡಿ ಪಡೆದುಕೊಂಡು ಹೋದರು. ತಮ್ಮ ಜೊತೆಗೆ ಇರುವವರಿಗಾಗಿ ಊಟವನ್ನೂ ಕಟ್ಟಿಕೊಂಡರು. ಅವರು ಯಾರನ್ನೂ ಬೆದರಿಸಲಿಲ್ಲ. ಕೋವಿಯನ್ನು ಎತ್ತಿ ಗುಂಡು ಹಾರಿಸಲಿಲ್ಲ. ಅದಕ್ಕೇ ಪ್ರಕಾಶಣ್ಣ ಹೇಳುವುದು ಹೀಗೆ 'ನಕ್ಸಲರೆಂದರೆ ಭಯೋತ್ಪಾದಕರಲ್ಲ.'

ಆ ದಿನ ಸಂಜೆ ಸುಮಾರು ೬ ಗಂಟೆ ಸಮಯ. ನಾನು ನನ್ನ ಮನೆಯ ಹಿಂಭಾಗದಲ್ಲಿ ನಿಂತಿದ್ದೆ. ಕಾಡಿನಿಂದ ಮೂವರು ನಮ್ಮ ಮನೆಯ ಕಡೆಗೇ ಬರುವುದು ಕಾಣಿಸಿತು. ಅವರಲ್ಲಿ ಇಬ್ಬರು ಕಂದು ಹಸಿರು ಬಣ್ಣದ ಬಟ್ಟೆ ಧರಿಸಿದ್ದರು.

ಮತ್ತೊಬ್ಬರದು ಸಮವಸ್ತ್ರ ಏನಲ್ಲ. ಕೈಯಲ್ಲಿ ಗನ್ ಹಿಡಿದುಕೊಂಡಿದ್ದರು. ಮೈಗೆ ಬುಲೆಟ್‌ಗಳ ಹಾರ ಹಾಕಿಕೊಂಡಿದ್ದರು. ಅವರನ್ನು ನೋಡಿದ ತಕ್ಷಣವೇ ನನಗೆ ಅವರು ಯಾರು ಎನ್ನುವುದು ಗೊತ್ತಾಯಿತು.

ಕೈ ಕಾಲುಗಳು ನಡುಗತೊಡಗಿದವು. ಬಾಯಿ ಆರಿತು. ನಾನು ನಿಂತಲ್ಲೇ ನಿಂತು ಬಿಟ್ಟೆ. ಒಣಗಿದ ನನ್ನ ಬಾಯಿಂದ ಶಬ್ದಗಳು ಹೊರಕ್ಕೆ ಬರುತ್ತಿರಲಿಲ್ಲ. ಆದರೂ ಧೈರ್ಯ ಮಾಡಿ ನಮಸ್ಕಾರ ಅಣ್ಣ ಎಂದೆ. ಅವರು ನಮಸ್ಕಾರ ಹೇಳಿದರು ಎಂದು ಪ್ರಕಾಶ್ ಅಂದಿನ ದಿನಕ್ಕೆ ಜಾರಿದರು.

'ನಾನೇ ಅವರನ್ನು ಮನೆಗೆ ಕರೆತಂದೆ. ಇಬ್ಬರು ಮನೆಯ ಒಳಕ್ಕೆ ಬಂದರು. ಒಬ್ಬ ಮಾತ್ರ ಕೈಯಲ್ಲಿ ಗನ್ ಹಿಡಿದುಕೊಂಡು ಮನೆಯ ಬಾಗಿಲಿನಲ್ಲಿಯೇ ಕಾವಲು ನಿಂತ. ಅತ್ತ ಇತ್ತ ಚುರುಕಾಗಿ ನೋಡುತ್ತಿದ್ದ. ಮನೆಯ ಒಳಕ್ಕೆ ಬಂದು ಕುಳಿತವರಲ್ಲಿ ಒಬ್ಬ ವಿಕ್ರಂ ಗೌಡ ಎನ್ನುವುದು ಗೊತ್ತಾಯಿತು. ಇನ್ನೊಬ್ಬ ತಮಿಳು ಮಾತನಾಡುತ್ತಿದ್ದ. ಅವರ ಬಳಿ ಲ್ಯಾಪ್‌ಟಾಪ್ ಇತ್ತು. ಮೊಬೈಲ್ ಬ್ಯಾಟರಿ ಚಾರ್ಜ್ ಮಾಡಿ ಕೊಡಲು ಹೇಳಿದರು. ಅವರು ಮೊಬೈಲ್ ಕೊಡಲಿಲ್ಲ. ಬ್ಯಾಟರಿಯನ್ನು ಮಾತ್ರ ತೆಗೆದುಕೊಟ್ಟರು. ಆದರೆ ನನ್ನ ಬಳಿ ಮೊಬೈಲ್ ಇರಲಿಲ್ಲ. ಅದಕ್ಕೇ ಚಾರ್ಜ್ ಮಾಡಿಕೊಡಲು ಆಗಲಿಲ್ಲ.'

ಬಂದವನು ವಿಕ್ರಂ ಗೌಡ ಎನ್ನುವುದು ನಿಮಗೆ ಹೇಗೆ ಗೊತ್ತಾಯಿತು ಎಂದು ಪ್ರಶ್ನೆ ಮಾಡಿದರೆ, 'ನಾನು ಅವನ ಫೋಟೋವನ್ನು ನೋಡಿದ್ದೇನೆ. ಪತ್ರಿಕೆಯಲ್ಲಿ ಬಂದಿತ್ತು. ಅಲ್ಲದೆ ನಮ್ಮೂರಲ್ಲೂ ಪೊಲೀಸರು ಕರಪತ್ರ ಅಂಟಿಸಿದ್ದಾರೆ. ಅದರಲ್ಲಿಯೂ ಅವನ ಚಿತ್ರ ಇತ್ತು. ಆದರೆ ಈಗ ವಿಕ್ರಂ ಗೌಡ ಫ್ರೆಂಚ್ ಗಡ್ಡ ಬಿಟ್ಟಿದ್ದಾನೆ. ಮತ್ತೆ ಅವನ ಮಾತು ಪಕ್ಕಾ ಹೆಬ್ರಿ ಕನ್ನಡ ಸಾರ್' ಎಂದು ಪ್ರಕಾಶ್ ಹೇಳುತ್ತಾರೆ.

'ನಕ್ಸಲರು ನಮ್ಮ ಮನೆಯ ಹಜಾರದಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದಾಗ ನನ್ನ ಭಯ ಕೊಂಚ ಕಡಿಮೆ ಆಯಿತು. ಅಮ್ಮ ಚಹಾ ಮಾಡಿಕೊಟ್ಟಳು. ಎಲ್ಲರೂ ಕುಡಿದರು. ಕೈಯಲ್ಲಿದ್ದ ಗನ್ ಅನ್ನು ಆತ ಕೆಳಕ್ಕೆ ಇಟ್ಟು ಆರಾಮ್ ಆಗಿ ಕುಳಿತುಕೊಂಡು

ಮಾತನಾಡುತ್ತಿದ್ದ. ನಮ್ಮ ಗ್ರಾಮದ ಸಮಸ್ಯೆ, ಆನೆ ಹಾವಳಿ ಮುಂತಾದ ವಿಷಯಗಳ ಬಗ್ಗೆ ಮಾತನಾಡಿದರು. ಕೆಳಕ್ಕೆ ಇಟ್ಟಿದ್ದ ಗನ್ ಮುಟ್ಟಿ ಒಮ್ಮೆ ಅದನ್ನು ಎತ್ತಿ ನೋಡಲೇ ಎಂದು ಕೇಳಿದೆ. ಅದಕ್ಕೆ ಆತ ಒಪ್ಪಿದ. ಸುಮ್ಮನೆ ಎತ್ತಿ ನೋಡಿದೆ. ಸುಮಾರು ೧೦ರಿಂದ ೧೫ಕೆ.ಜಿ ತೂಕ ಇತ್ತು. ಅತ್ಯಾಧುನಿಕ ಗನ್ ಅದು. ನಮ್ಮ ಪೊಲೀಸರ ಹತ್ತಿರ ಇರುವ ಗನ್‌ಗಿಂತ ಅದು ಚೆನ್ನಾಗಿದೆ. ಪೊಲೀಸರು ಒಂದು ಗುಂಡು ಹಾರಿಸುವುದರೊಳಗೆ ಅವರು ೫೦ ಗುಂಡು ಹಾರಿಸುತ್ತಾರೆ ಸಾರ್' ಎಂದು ಪ್ರಕಾಶ್ ಅರ್ಧ ಹತಾಶೆ ಇನ್ನರ್ಧ ಗತ್ತಿನಲ್ಲಿ ಹೇಳಿದರು.

'ಅವರು ನಮ್ಮ ಮನೆಯಲ್ಲಿ ಊಟ ಮಾಡಲಿಲ್ಲ. ಊಟವನ್ನು ಕಟ್ಟಿಸಿಕೊಂಡು ಹೋದರು. ಜೊತೆಗೆ ಸುಮಾರು ೩೦ ಕೆ.ಜಿ ಅಕ್ಕಿ. ಒಂದಿಷ್ಟು ಎಣ್ಣೆ, ಬೇಳೆ ಎಲ್ಲ ಗಂಟು ಕಟ್ಟಿಕೊಂಡು ಹೋದರು. ಅದನ್ನೂ ಅವರು ಬೆದರಿಸಿ ಕೇಳಲಿಲ್ಲ. ಅಕ್ಕಿ ಇದ್ದರೆ ಕೊಡಿ ಎಂದರು. ಆಗ ನಾನು, 'ನಾವು ಬೆಳೆಯುವ ಬತ್ತ ಎಲ್ಲಾ ಆನೆಗಳ ಪಾಲಾಗುತ್ತದೆ. ನಾವೂ ಅಕ್ಕಿಯನ್ನು ಅಂಗಡಿಯಿಂದ ತಂದೇ ಊಟ ಮಾಡುತ್ತೇವೆ'ಎಂದೆ. ಅದಕ್ಕೆ ಅವರು 'ನಾವು ನಿಮ್ಮ ಪರವಾಗಿ ಕೆಲಸ ಮಾಡುತ್ತಿದ್ದೇವೆ. ನೀವು ಬೆಂಬಲ ಕೊಡಬೇಕು' ಎಂದು ಕೋರಿದರು. ನಾನು ಅಕ್ಕಿ, ಎಣ್ಣೆಕೊಟ್ಟೆ' ಎಂದು ಹೇಳಿದರು.

'ಅದನ್ನು ಎತ್ತಿಕೊಂಡು ಹೋಗುವಾಗ ಅವರಲ್ಲಿ ಒಬ್ಬ ಪಾಪ ತುಂಬ ಬಡವರು. ಹಣ ಕೊಟ್ಟು ಹೋಗೋಣ ಎಂದ. ಆಗ ವಿಕ್ರಂ ಗೌಡ ಕಿಸೆಯಿಂದ ಹಣ ತೆಗೆದ. ಅದರಲ್ಲಿ ಐನೂರು, ಸಾವಿರದ ನೋಟುಗಳಿದ್ದವು. ಹುಡುಕಿ ತೆಗೆದು ನೂರು ರೂಪಾಯಿಯ ಎರಡು ನೋಟು ಕೊಟ್ಟು ನಾವು ಇಲ್ಲಿಗೆ ಬಂದಿದ್ದನ್ನು ಯಾರಿಗೂ ಹೇಳಬೇಡಿ ಎಂದು ಹೇಳಿ ಬಂದ ದಾರಿಯಲ್ಲಿಯೇ ಕತ್ತಲೆಯಲ್ಲಿ ಮಾಯವಾದರು'.

ಪ್ರಕಾಶ್ ತಮ್ಮ ಅನುಭವ ಬಿಚ್ಚಿಟ್ಟು ಸುಮ್ಮನಾದರು. ಅವರ ಭಯ ನಕ್ಸಲೀಯರದ್ದಲ್ಲ. ಕಾಡಾನೆಗಳದ್ದು. ಆನೆ ಕಾರಿಡಾರಿನದ್ದು.

ವೃದ್ಧಾಶ್ರಮವಾಗಿರುವ ಮಾವಿನೂರು!

ಸಕಲೇಶಪುರ ತಾಲ್ಲೂಕಿನ ಕಾಡಂಚಿನಲ್ಲಿರುವ ಈ ಗ್ರಾಮದ ಹೆಸರು ಮಾವಿನೂರು. ಇಲ್ಲಿರುವ ಕುಟುಂಬಗಳ ಸಂಖ್ಯೆ ೪೦ . ಇಡೀ ಗ್ರಾಮದ ಜನಸಂಖ್ಯೆ ಬರೋಬ್ಬರಿ ೮೦. ಅಂದರೆ ಪ್ರತಿ ಕುಟುಂಬದಲ್ಲಿ ವೃದ್ಧ ದಂಪತಿಗಳು ಮಾತ್ರ ಇದ್ದಾರೆ. ಉಳಿದಂತೆ ಮಕ್ಕಳು, ಮರಿಗಳು ಎಲ್ಲರೂ ಪಟ್ಟಣ ಸೇರಿದ್ದಾರೆ. ಇಡೀ ಗ್ರಾಮ ಈಗ ಒಂದರ್ಥದಲ್ಲಿ ವೃದ್ಧಾಶ್ರಮವಾಗಿದೆ.

ಗ್ರಾಮದಲ್ಲಿ ಉತ್ತಮ ಶಾಲಾ ಕಟ್ಟಡವಿದೆ. ಆದರೆ ಮಕ್ಕಳು ಇಲ್ಲದೇ ಇರುವುದರಿಂದ ಶಾಲೆ ಮುಚ್ಚಿ ನಾಲ್ಕು ವರ್ಷಗಳಾಗಿವೆ. ಗ್ರಾಮದಲ್ಲಿ ಇರುವ ದಂಪತಿಗಳ ಮಕ್ಕಳೆಲ್ಲಾ ಭಾರಿ ವಿದ್ಯಾವಂತರೇನೂ ಅಲ್ಲ. ಆದರೆ ಮಾವಿನೂರಿನಲ್ಲಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗದೆ ಖಾಸಗಿ ಬಸ್ ಚಾಲಕ, ನಿರ್ವಾಹಕ, ಹೋಟೆಲ್, ಬಾರ್ ಅಟೆಂಡರ್ ಮುಂತಾದ ಕೆಲಸ ಹುಡುಕಿಕೊಂಡು ಪಟ್ಟಣ ಸೇರಿದ್ದಾರೆ. ಈಗ ಇರುವ ಮಂದಿಗೂ ಇಲ್ಲಿ ಬದುಕು ಇಲ್ಲ. ತಲೆತಲಾಂತರದಿಂದ ಬಂದ ಒಂದಿಷ್ಟು ಜಮೀನು ಇದೆ. ಅದನ್ನು ನೋಡಿಕೊಳ್ಳುವ ಅನಿವಾರ್ಯತೆ ಇರುವುದರಿಂದ ಅವರು

ಇಲ್ಲಿಯೇ ಇದ್ದಾರೆ.

ಮಾವಿನೂರಿಗೆ ಬಸ್ಸಿಲ್ಲ. ಕನಿಷ್ಠ ೪ ಕಿ.ಮೀ ನಡೆದುಕೊಂಡು ಹೋಗಬೇಕು. ಏಲಕ್ಕಿ, ಬತ್ತ ಇಲ್ಲಿನ ಪ್ರಮುಖ ಬೆಳೆ. ಬತ್ತಕ್ಕೆ ಆನೆ ಹಾವಳಿ, ಏಲಕ್ಕಿಗೆ ಕೊಳೆ ರೋಗ ಮತ್ತು ಕೊಕ್ಕೆ ಕಂದು ರೋಗ. ಹೇಗಾದರೂ ಮಾಡಿ ಕೃಷಿ ಮುಂದುವರಿಸೋಣ ಎಂದರೆ ಕೂಲಿ ಕಾರ್ಮಿಕರ ಕೊರತೆ. ಅವರ ಮನೆಯ ಕೂಲಿಗೆ ಇವರ ಮನೆಯವರು, ಇವರ ಮನೆ ಕೂಲಿಗೆ ಅವರ ಮನೆಯವರು ಬರಬೇಕು ಅಷ್ಟೆ.

ಬೇಸಿಗೆಯಲ್ಲಿ ಹಸಿ ಮೆಣಸು ಬೆಳೆಯಲಾಗುತ್ತದೆ. ಏನನ್ನೇ ಬೆಳೆದರೂ ಅದನ್ನು ಇಲ್ಲಿಂದ ೨೬ ಕಿ.ಮೀ ದೂರದಲ್ಲಿರುವ ಹೆತ್ತೂರಿಗೆ ತೆಗೆದುಕೊಂಡು ಹೋಗಬೇಕು. ಅದೇ ಹತ್ತಿರದ ಮಾರುಕಟ್ಟೆ. ಇಲ್ಲವಾದರೆ ೩೭ ಕಿ.ಮೀ ದೂರದ ಶನಿವಾರ ಸಂತೆಗೆ ಹೋಗಬೇಕು. ತಾಲ್ಲೂಕು ಕೇಂದ್ರವಾದ ಸಕಲೇಶಪುರ ಇನ್ನೂ ದೂರ.

ಆಸ್ಪತ್ರೆಗೆ ಹೋಗಬೇಕು ಎಂದರೆ ಅತ್ತಹಳ್ಳಿಗೆ ಹೋಗಬೇಕು. ಅದು ೫ ಕಿ.ಮೀ ದೂರ. ಇಲ್ಲವೇ ೧೭ ಕಿ.ಮೀ ದೂರದ ವಣಗೂರಿಗೆ ಹೋಗಬೇಕು. ಅತ್ತಹಳ್ಳಿಗೆ ಹೋಗಲು ರಸ್ತೆ ಇಲ್ಲ. ೫ ಕಿ.ಮೀ ದೂರದಲ್ಲಿ ಹಲವಾರು 'ಮೆಟ್ಟು' (ಸಂಕ)ಗಳನ್ನು ದಾಟಿ ಹೋಗಬೇಕು. ಬೆಟ್ಟ ಗುಡ್ಡ ಕಾಡಿನ ಹಾದಿ. ಕಾಡು ಪ್ರಾಣಿಗಳ ಭಯ ಇದ್ದೇ ಇದೆ. ಆಡಳಿತದ ನಿರ್ಲಕ್ಷ್ಯ ಎಷ್ಟಿದೆ ಎಂದರೆ ಮೂರು ವರ್ಷಗಳ ಹಿಂದೆ ವಿದ್ಯುತ್ ಕಂಬದ ಬಳಿ ಆನೆಯೊಂದಕ್ಕೆ ತಂತಿ ತಗಲಿ ಆನೆ ಸತ್ತು ಹೋಯಿತು. ವಿದ್ಯುತ್ ಕಂಬ ಹಾಳಾಯಿತು. ಕಂಬದ ಬದಲಿಗೆ ಮರದ ತುಂಡನ್ನು ಹಾಕಿ ತಾತ್ಕಾಲಿಕವಾಗಿ ವಿದ್ಯುತ್ ತಂತಿ ಸರಿಪಡಿಸಲಾಯಿತು. ಈಗಲೂ ಇಲ್ಲಿ ವಿದ್ಯುತ್ ತಂತಿಯನ್ನು ಹೊತ್ತುಕೊಂಡು ಮರದ ತುಂಡು ನಿಂತಿದೆ. ಇನ್ನೂ ವಿದ್ಯುತ್ ಕಂಬ ಬಂದಿಲ್ಲ. ಇಂತಹ ಮರದ ಕಂಬಗಳು ಇಲ್ಲಿ ಸಾಕಷ್ಟಿವೆ.

ಯಾವುದೇ ಮೂಲ ಸೌಲಭ್ಯಗಳು ಇಲ್ಲದಿದ್ದರೂ ಈ ಗ್ರಾಮದಲ್ಲಿ ತಲೆತಲಾಂತರದಿಂದ ಜನರು ವಾಸವಾಗಿದ್ದರು. ಈಗ ಕಾಡು ಮಾಯವಾಗಿ ಕಾಡು ಪ್ರಾಣಿಗಳು ಗ್ರಾಮಕ್ಕೆ ನುಗ್ಗುತ್ತಿರುವುದರಿಂದ ಬೇಸಾಯ ಮಾಡುವುದು ಕಷ್ಟವಾಗಿದೆ. ಸಂಜೆಯಾಗುತ್ತಿದ್ದಂತೆ ಕಾಡಾನೆ, ಕಾಡುಕೋಣ, ಕಾಡು ಹಂದಿಗಳು ಗ್ರಾಮಕ್ಕೆ ನುಗ್ಗುತ್ತವೆ. ಬೆಳೆಗಳನ್ನು ನಾಶ ಮಾಡುತ್ತವೆ.

'ಆನೆಗಳು ಗ್ರಾಮಕ್ಕೆ ನುಗ್ಗುವುದನ್ನು ತಪ್ಪಿಸಿ ಅಥವಾ ನಮ್ಮನ್ನೇ ಬೇರೆಲ್ಲಿಗಾದರೂ ಸ್ಥಳಾಂತರಿಸಿ' ಎಂದು ಗ್ರಾಮಸ್ಥರು ಮನವಿ ಮಾಡಿಕೊಂಡರೂ ಪ್ರಯೋಜನವಾಗಿಲ್ಲ. ಆನೆ ಹಾವಳಿಯಿಂದ ಆದ ನಷ್ಟಕ್ಕೆ ಸಿಗುವ ಪರಿಹಾರ ಅತ್ಯಲ್ಪ. ಅದೂ ವಿಳಂಬವಾಗಿ. ಇಡೀ ಗ್ರಾಮದ ೪೦ ಕುಟುಂಬಗಳು ಸೇರಿ ಸುಮಾರು ೨೫೦ ಎಕರೆ ಜಮೀನು ಇರಬಹುದು. 'ಅದಕ್ಕೆ ಸೂಕ್ತ ಪರಿಹಾರ ನೀಡಿ ನಮ್ಮನ್ನು ಸ್ಥಳಾಂತರ ಮಾಡಿ. ಇಲ್ಲವೇ ಕಾಡು ಪ್ರಾಣಿಗಳು ಬಾರದಂತೆ ಕ್ರಮ ಕೈಗೊಳ್ಳಿ' ಎಂಬ ಹೋರಾಟ ನಡೆಯುತ್ತಲೇ ಇದೆ. ಇದು ಯಾರ ಕಿವಿಗೂ ಬಿದ್ದಿಲ್ಲ. 'ಗುಂಡ್ಯ ಜಲ ವಿದ್ಯುತ್ ಯೋಜನೆ ಆದರೆ ಈ ಗ್ರಾಮ ಮುಳುಗಿ ಹೋಗತ್ತೆ ಎಂದರು. ಈ ಗ್ರಾಮದಲ್ಲಿಯೇ ಆನೆ ಕಾರಿಡಾರ್ ಮಾಡುತ್ತೇವೆ ಎಂದರು. ಈವರೆಗೆ ಯಾವುದೂ ಆಗಿಲ್ಲ. ಬದುಕು ಮಾತ್ರ ಮುಳುಗಿ ಹೋಗಿದೆ. ನಮ್ಮದು ಅತಂತ್ರ

ಬದುಕು' ಎನ್ನುತ್ತಾರೆ ಗ್ರಾಮದ ನಾಗೇಶ್.

'ಒಂದು ಎಕರೆ ಭೂಮಿಗೆ ರೂ ಲಕ್ಷ ಕೊಡಿ. ಬೇರೆ ಕಡೆ ಪುನರ್ ವಸತಿ ಕಲ್ಪಿಸಿಕೊಡಿ. ನಂತರ ನೀವು ಆನೆ ಕಾರಿಡಾರ್ ಬೇಕಾದರೂ ಮಾಡಿ; ಇನ್ನೇನು ಬೇಕಾದರೂ ಮಾಡಿ' ಎಂದು ರಾಮಣ್ಣ ಹೇಳುತ್ತಾರೆ. 'ನಮ್ಮ ಭೂಮಿಗೆ ಸೂಕ್ತ ಬೆಲೆ ಕೊಡಬಹುದು. ಆದರೆ ನಾವು ವಾಸ ಮಾಡುವ ಮನೆಗೆ ಎಷ್ಟು ಬೆಲೆ ಕಟ್ಟುತ್ತೀರಿ. ಮನೆಯ ಸಾಮಗ್ರಿಗಳನ್ನು ಲೆಕ್ಕ ಮಾಡಿ ಬೆಲೆ ಕಟ್ಟುವುದು ಒಂದು ರೀತಿ. ಆದರೆ ಇದೇ ಮನೆಯಲ್ಲಿ ನನ್ನ ಅಪ್ಪ, ಅಜ್ಜ, ಮುತ್ತಜ್ಜ ಎಲ್ಲರೂ ಸಂಸಾರ ಮಾಡಿದ್ದಾರೆ. ಬದುಕು ಕಟ್ಟಿಕೊಂಡಿದ್ದಾರೆ. ಜೊತೆಗೆ ಈ ಕಾಡನ್ನು ಇಲ್ಲಿಯವರೆಗೆ ಉಳಿಸಿದ್ದಾರೆ. ಅದಕ್ಕೆ ಬೆಲೆ ಕಟ್ಟುವುದು ಹೇಗೆ' ಎಂದು ಹರೀಶ್ ಪ್ರಶ್ನೆ ಮಾಡುತ್ತಾರೆ.

'ಮಾವಿನೂರಿನಲ್ಲಿ ವಿಪರೀತ ಜಿಗಣೆಗಳು. ಕಾಲಿಟ್ಟರೆ ನಮ್ಮ ರಕ್ತ ಹೀರುತ್ತವೆ. ನನ್ನ ಕಾಲಿಗೆ ಕಚ್ಚಿದ್ದ ಜಿಗಣೆಗಳನ್ನು ತೆಗೆಯಲು ನಾನು ಬಾಗಿದ್ದಾಗ ರಾಮಣ್ಣ ಕೂಡ ಬಾಗಿ ನಿಂತು 'ಜಿಗಣೆಗಳೇ ವಾಸಿ ಸಾರ್. ಹೊಟ್ಟೆ ತುಂಬಿದ ನಂತರ ಅವು ನಮ್ಮನ್ನು ಬಿಟ್ಟು ಬಿಡುತ್ತವೆ. ನಮ್ಮನ್ನು ಆಳುವ ಅಧಿಕಾರಸ್ಥರ ತರಹ ಅಲ್ಲ ಅವು.' ಎಂದರು. ನಾನು ಮೌನವಾದೆ.

ಜನರ ಎತ್ತಂಗಡಿಗೆ ನೂರೆಂಟು ದಾರಿಗಳು!

ಪಶ್ಚಿಮಘಟ್ಟ ಪ್ರದೇಶದ ಕಾಡಂಚಿನ ಗ್ರಾಮಗಳನ್ನು ಎತ್ತಂಗಡಿ ಮಾಡುವುದಕ್ಕೆ ಹಲವಾರು ಕಾರಣಗಳು ಸಿಗುತ್ತವೆ. ರಾಷ್ಟ್ರೀಯ ಉದ್ಯಾನ, ಹುಲಿ ರಕ್ಷಣೆ ಯೋಜನೆ, ಬಗರ್‌ಹುಕುಂ, ಮೀಸಲು ಅರಣ್ಯ, ರಕ್ಷಿತ ಅರಣ್ಯ, ಪಶ್ಚಿಮಘಟ್ಟ ಯೋಜನೆ, ಆನೆ ಕಾರಿಡಾರ್, ಇನಾಂ (ದೇವರ) ಭೂಮಿ ವಿವಾದ ಹೀಗೆ ಜನರನ್ನು ಒಕ್ಕಲೆಬ್ಬಿಸಲು ಹಲವಾರು ಕಾರಣಗಳು ಇವೆ. ಆದರೆ ತಲೆತಲಾಂತರದಿಂದ ಜನರು ಬದುಕಿಕೊಂಡು ಬಂದ ಸ್ಥಳದಲ್ಲಿಯೇ ಅವರನ್ನು ಉಳಿಸಲು ಒಂದೇ ಒಂದು ಯೋಜನೆಯೂ ಇಲ್ಲ. ಇದು ನಕ್ಸಲ್ ಪ್ರಭಾವವಿರುವ ಬಹುತೇಕ ಗ್ರಾಮಗಳ ಜನರ ಅಭಿಪ್ರಾಯ. ನಕ್ಸಲ್ ಹೋರಾಟದ ಬಗ್ಗೆ ಇಲ್ಲಿನ ಜನರು ಮನಬಿಚ್ಚಿ ಮಾತನಾಡುತ್ತಾರೆ. ಆದರೆ ತಮ್ಮ ಹೆಸರನ್ನು ಬಹಿರಂಗಪಡಿಸಲು ಇಷ್ಟಪಡುವುದಿಲ್ಲ. ನಕ್ಸಲ್ ಹೋರಾಟದ ಬಗ್ಗೆ ಮಾತನಾಡುವ ಜನ ಚಿಕ್ಕಮಗಳೂರು, ಕಳಸ, ಶೃಂಗೇರಿ, ಆಗುಂಬೆ ಮುಂತಾದ ಕಡೆ ಸಿಗುತ್ತಾರೆ.

ಹೀಗೆ ಚಿಕ್ಕಮಗಳೂರಿನಲ್ಲಿ ನನಗೆ ಸಿಕ್ಕ ಒಬ್ಬರು 'ಕುದುರೆಮುಖ ರಾಷ್ಟ್ರೀಯ ಉದ್ಯಾನದಿಂದ ಆದಿವಾಸಿ ಕುಟುಂಬಗಳನ್ನು ಎತ್ತಂಗಡಿ ಮಾಡುವುದರ ವಿರುದ್ಧ ೨೦೦೦-೨೦೦೧ರಲ್ಲಿ ಆರಂಭವಾದ ನಕ್ಸಲ್ ಹೋರಾಟ ಇನ್ನೂ ಮುಂದುವರಿದಿದೆ. ಅವರ ಬೇಡಿಕೆಗಳಲ್ಲಿ ತೆಗೆದು ಹಾಕುವಂತಹದ್ದು ಏನಿದೆ? ಆದಿವಾಸಿಗಳನ್ನು ಎತ್ತಂಗಡಿ ಮಾಡಬೇಡಿ, ಅವರಿಗೆ ಹಕ್ಕುಪತ್ರಗಳನ್ನು ನೀಡಿ, ಮೂಲಸೌಲಭ್ಯ ಕಲ್ಪಿಸಿ, ರಾಷ್ಟ್ರೀಯ ಉದ್ಯಾನವನ್ನು ರದ್ದು ಮಾಡಿ, ಇಲ್ಲಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅವಕಾಶ ನೀಡಬೇಡಿ, ಗಣಿಗಾರಿಕೆ ನಡೆಸಬೇಡಿ. ಗಣಿಗಾರಿಕೆಯಿಂದ ಪಶ್ಚಿಮ ಘಟ್ಟದ ನದಿ ಮೂಲಗಳು ಬತ್ತಿ ಹೋಗುತ್ತವೆ ಎಂದು ಹೇಳಿ ಹೋರಾಟ ನಡೆಸಿದರೆ ನಕ್ಸಲ್

ಪಟ್ಟ ಕಟ್ಟಿ ಬಿಡುತ್ತಾರೆ. ಇದು ಸರೀನಾ?' ಎಂದು ಪ್ರಶ್ನೆ ಮಾಡುತ್ತಾರೆ.

ನಕ್ಸಲ್ ಪೀಡಿತ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಕಳೆದ ಒಂದು ದಶಕದಲ್ಲಿ ಸಾಕಷ್ಟು ಹಣ ನೀಡಿದೆ. ಆದರೆ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಸರಿಯಾಗಿ ಆಗಿಲ್ಲ. ಕಳಸ ಭಾಗದಲ್ಲಿ ಇನ್ನೂ ಸರಿಯಾದ ರಸ್ತೆ ಇಲ್ಲ. ವಿದ್ಯುತ್ ಸೌಲಭ್ಯ ಇಲ್ಲ. ಮಳೆಗಾಲದಲ್ಲಿ ವಿಪರೀತ ಮಳೆಯಾದರೂ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆಶ್ರಯ ಮತ್ತು ಇತರ ವಸತಿ ಯೋಜನೆಗಳ ಮೂಲಕ ಮನೆಗಳನ್ನು ನೀಡುವಾಗ ತಾರತಮ್ಯ ಇದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದ ಒಳಗೆ ಇನ್ನೂ ಸುಮಾರು ಎರಡು ಸಾವಿರ ಆದಿವಾಸಿ ಕುಟುಂಬಗಳು ಇವೆ. ಅವರಿಗೆ ಸೂಕ್ತ ಸೌಲಭ್ಯ ನೀಡಿಲ್ಲ.

ನನ್ನ ಜೊತೆ ಮಾತನಾಡುತ್ತಿದ್ದವರು ನಕ್ಸಲೀಯರಲ್ಲ. ಅವರ ಬೆಂಬಲಿಗರೂ ಅಲ್ಲ. ಆದರೆ ಅವರಿಗೆ ರಾಜ್ಯ ಸರ್ಕಾರ ನಕ್ಸಲರ ವಿರುದ್ಧ ನಡೆಸುತ್ತಿರುವ ಕಾರ್ಯಾಚರಣೆ ಬಗ್ಗೆ ವಿಪರೀತ ಸಿಟ್ಟಿದೆ. ನಕ್ಸಲರು ನಡೆಸುತ್ತಿರುವ ಹಿಂಸೆಯ ಬಗ್ಗೆಯೂ ಆಕ್ರೋಶವಿದೆ. ನಕ್ಸಲರ ಹಾವಳಿ ಹೆಚ್ಚಾಗಲು ಸರ್ಕಾರದ ಧೋರಣೆಯೇ ಕಾರಣ ಎಂಬ ಭಾವನೆ ಇದೆ.

'ಕಳೆದ ಬಾರಿ ಗ್ರಾಮ ಪಂಚಾಯ್ತಿ ಚುನಾವಣೆ ನಡೆದ ಸಂದರ್ಭದಲ್ಲಿ ಚುನಾವಣೆ ಬಹಿಷ್ಕರಿಸುವಂತೆ ನಕ್ಸಲರು ಕರೆ ನೀಡಿದರು. ಇದನ್ನೇ ನೆಪ ಮಾಡಿಕೊಂಡು ಪೊಲೀಸರು ೧೩ ಆದಿವಾಸಿಗಳನ್ನು ಬಂಧಿಸಿದರು. ಈ ಆದಿವಾಸಿ ಮತ್ತು ಕೆಲವು ದಲಿತರಿಗೂ ನಕ್ಸಲ್ ಚಳವಳಿಗೂ ಯಾವುದೇ ಸಂಬಂಧ ಇರಲಿಲ್ಲ. ಆದರೂ ಅವರು ಬಂಧನಕ್ಕೆ ಒಳಗಾದರು. ಪೊಲೀಸ್ ದೌರ್ಜನ್ಯಕ್ಕೂ ಒಳಗಾದರು. ಹೀಗೆ ಮಾಡಿದರೆ ಪೊಲೀಸರ ಬಗ್ಗೆ ಹೇಗೆ ವಿಶ್ವಾಸ ಬರುತ್ತದೆ' ಎಂದು ಅವರು ಪ್ರಶ್ನೆ ಮಾಡುತ್ತಾರೆ.

ನಕ್ಸಲ್ ಎಂಬ ಹಣೆಪಟ್ಟಿ ಹಚ್ಚಿಕೊಂಡು ಹಲವಾರು ಮಂದಿ ಈಗಲೂ ಜೈಲಿನಲ್ಲಿ ಇದ್ದಾರೆ. ಒಂದು ಪ್ರಕರಣದಲ್ಲಿ ಅವರ ಬಿಡುಗಡೆಯಾದರೆ ಇನ್ನೊಂದು ಪ್ರಕರಣದಲ್ಲಿ ಅವರನ್ನು ಬಂಧಿಸಲಾಗುತ್ತದೆ. ವಿಚಾರಣೆ ಮುಗಿಯುವುದೇ ಇಲ್ಲ. ಅಲ್ಲದೆ ಈಗಾಗಲೇ ನಕ್ಸಲ್ ಎಂಬ ಹಣೆಪಟ್ಟಿ ಹಚ್ಚಿಕೊಂಡು ಬಿಡುಗಡೆಯಾಗಿ ಸಮಾಜದಲ್ಲಿ ಬದುಕಲು ಪ್ರಯತ್ನಿಸುವ ಮಂದಿಯೂ ಸಾಕಷ್ಟಿದ್ದಾರೆ. ಅವರಿಗೆ ಸಮಾಜದಲ್ಲಿ ಬದುಕಲು ಸೂಕ್ತ ವಾತಾವರಣ ಇಲ್ಲ.

'ನ್ಯಾಯಾಲಯದ ವಿಚಾರಣೆ ನಡೆದು 'ಇವರು ನಕ್ಸಲರಲ್ಲ' ಎಂದು ಬಿಡುಗಡೆಯಾದವರನ್ನು ಕರೆದು ತಂದು 'ಈ ನಕ್ಸಲರು ಶರಣಾಗಿದ್ದಾರೆ' ಎಂದು ಹೇಳಿ ಅವರಿಗೆ ಪರಿಹಾರದ ಹಣ ವಿತರಣೆ ಮಾಡಿದ ಉದಾಹರಣೆಗಳೂ ಇವೆ. ನಂತರ ಕೆಲವರು 'ನಮ್ಮನ್ನು ಮೀಟಿಂಗ್ ಇದೆ ಎಂದು ಕರೆದುಕೊಂಡು ಬಂದು ನಕ್ಸಲ್ ಪ್ಯಾಕೇಜ್‌ನಲ್ಲಿ ಶರಣಾಗತಿ' ಎಂದು ಬರೆಸಿದರು ಎಂದು ಸ್ಪಷ್ಟನೆಯನ್ನೂ ನೀಡಿದ್ದಾರೆ. ನಕ್ಸಲ್ ಶರಣಾಗತಿ ಪ್ಯಾಕೇಜ್ ಈ ರೀತಿ ದುರುಪಯೋಗವಾಗುತ್ತಿದೆ. ಇದನ್ನು ತಡೆಯುವ ಕೆಲಸವನ್ನೂ ಸರ್ಕಾರ ಮಾಡುತ್ತಿಲ್ಲ. ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಶರಣಾಗಿ ಎಂದು ಸರ್ಕಾರ ಹೇಳುತ್ತದೆ. ಈಗ 'ಶರಣಾದ' ನಕ್ಸಲರು ಯಾವ ಶಸ್ತ್ರ ವಾಪಸು ಕೊಟ್ಟಿದ್ದಾರೆ. ಎಷ್ಟು ಕೊಟ್ಟಿದ್ದಾರೆ. ಅದನ್ನು ಎಲ್ಲಿ ಇಡಲಾಗಿದೆ ಹೇಳಿ ಸ್ವಾಮಿ'

ಎಂದು ಅವರು ಕೇಳುತ್ತಾರೆ.

'ನಾನು ನಕ್ಸಲೀಯರ ಪರ ಮಾತನಾಡುತ್ತಿದ್ದೇನೆ ಎಂದು ತಿಳಿದುಕೊಳ್ಳಬೇಡಿ. ಆದರೆ ನಕ್ಸಲೀಯರ ಪ್ರಭಾವವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಸರಿಯಾಗಿಲ್ಲ. ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಂದ ಈ ಕೆಲಸ ಮಾಡಲು ಸಾಧ್ಯವಿಲ್ಲ. ಜನರ ಬಗ್ಗೆ ಕಾಳಜಿ ಇರುವ ಅಧಿಕಾರಿಯನ್ನು ಪ್ರತ್ಯೇಕವಾಗಿ ನೇಮಿಸಿ ಅವರ ಮೂಲಕ ಕೆಲಸ ಮಾಡಿಸಬೇಕು. ಅವರನ್ನು ಯಾವುದೇ ಕಾರಣಕ್ಕೂ ೫ ವರ್ಷದವರೆಗೆ ವರ್ಗಾವಣೆ ಮಾಡಬಾರದು. ಈ ಅಧಿಕಾರಿಗಳು ಜನರ ನಡುವೆಯೇ ಇದ್ದು ಕೆಲಸ ಮಾಡಿದರೆ ನಕ್ಸಲರನ್ನು ಓಡಿಸಲು ಕೋವಿ ಬೇಕಾಗುವುದಿಲ್ಲ. ಗುಂಡಿನ ಶಬ್ದ ಕೇಳುವುದಿಲ್ಲ' ಎಂದು ಅವರು ಮಾತು ಮುಗಿಸಿದರು.

ಮುಜೇಕಾನ್‌ನಲ್ಲಿ ಕಾಣದ ಮುಖಗಳು!

ಅಲ್ಲಿ ಮಿಣ ಮಿಣ ಬೆಳಕಿತ್ತು. ಒಬ್ಬರ ಮುಖ ಇನ್ನೊಬ್ಬರಿಗೆ ಕಾಣಿಸುತ್ತಿರಲಿಲ್ಲ. ಮನೆಯ ಹಜಾರದಲ್ಲಿಯೂ ಜೀರೋ ಕ್ಯಾಂಡಲ್ ಬಲ್ಬ್ ಉರಿಯುತ್ತಿತ್ತು. ಆ ಮಬ್ಬು ಬೆಳಕಿನಲ್ಲಿಯೇ ನಾನು, ನನ್ನ ಸುತ್ತಲೂ ಅವರು ಕುಳಿತುಕೊಂಡಿದ್ದರು. ಮೊದಲು ಕಾಡಂಚಿನ ಗ್ರಾಮಗಳ ಸಮಸ್ಯೆಯ ಬಗ್ಗೆ ಮಾತು. ನಂತರ ನಕ್ಸಲರ ದಾರಿಯ ಬಗ್ಗೆ ಮಾತು. ನನ್ನ ಪ್ರಶ್ನೆಗೆ ಎಲ್ಲ ಕಡೆಯಿಂದಲೂ ಉತ್ತರ ಬರುತ್ತಿತ್ತು. ಬಂದೂಕಿನಿಂದ ಗುಂಡು ಸಿಡಿದ ಹಾಗೆ.

ಕಳಸದಿಂದ ಸುಮಾರು ೧೦ ಕಿಮೀ ದೂರದಲ್ಲಿರುವ ಕಾಡಿನಲ್ಲಿರುವ ಮುಜೇಕಾನ್ ಎಂಬ ಪುಟ್ಟ ಹಳ್ಳಿಯ ಒಬ್ಬರ ಮನೆಯಲ್ಲಿ ಕುಳಿತು ನಾನು ಮಾತನಾಡುತ್ತಿದ್ದೆ. ಆ ಗ್ರಾಮಕ್ಕೆ ಹೋಗಿದ್ದು ನನ್ನ ಬದುಕಿನ ಅತ್ಯಂತ ರೋಚಕ ಅನುಭವ. ಕಳಸ ಸುತ್ತಮುತ್ತಲಿನ ಗ್ರಾಮಗಳಲ್ಲಿ ನಕ್ಸಲರು ಓಡಾಡುತ್ತಾರೆ. ಅವರನ್ನು ಬೆಂಬಲಿಸುವ ಸಾಕಷ್ಟು ಮಂದಿಯೂ ಅಲ್ಲಿದ್ದಾರೆ. ಅವರ ಬಗ್ಗೆ ಸಹಾನುಭೂತಿ ಇರುವ ಜನರೂ ಇದ್ದಾರೆ. ಅಂತಹ ವ್ಯಕ್ತಿಗಳನ್ನು ಸಂಪರ್ಕಿಸಿ ಅಲ್ಲಿನ ನಿಜವಾದ ಪರಿಸ್ಥಿತಿಯನ್ನು ಅರಿಯುವುದು ನನ್ನ ಉದ್ದೇಶವಾಗಿತ್ತು.

ನಾನು ಅವರನ್ನು ಸಂಪರ್ಕಿಸಿದಾಗ ನನಗೆ ಸಂಜೆ ೫ ಗಂಟೆ ನಂತರ ಕಳಸಕ್ಕೆ ಬರಲು ಸೂಚಿಸಿದ್ದರು. ಕಳಸ ತಲುಪಿದಾಗ ಸಂಜೆ ೬ ಗಂಟೆ. ತಕ್ಷಣ ಅವರಿಗೆ ಫೋನ್ ಮಾಡಿದೆ. ಈಗಲೇ ಬರುವುದಾಗಿ ಅವರು ತಿಳಿಸಿದರು. ೬.೩೦ರ ವೇಳೆಗೆ ಒಬ್ಬ ಯುವಕ ಬೈಕ್‌ನಲ್ಲಿ ಬಂದ. ನನಗೆ ಹಿಂದೆ ಕುಳಿತುಕೊಳ್ಳಲು ಹೇಳಿದ. ನಾವು ಅಲ್ಲಿಂದ ಹೊರಟೆವು.

ಆಗಲೇ ಕತ್ತಲೆ ಆವರಿಸಿತ್ತು. ಮುಜೇಕಾನ್‌ಗೆ ಕರೆದುಕೊಂಡು ಹೋಗುವುದಾಗಿ ಆತ ಹೇಳಿದ. ಮುಜೇಕಾನ್ ಇರುವುದು ನಿಜವಾದ ಕಾಡಿನಲ್ಲಿ. ಅಲ್ಲಿಗೆ ಹೋಗುವ ರಸ್ತೆಯನ್ನು ರಸ್ತೆ ಎಂದು ಕರೆಯುವುದು ಹೇಗೆ? ಬೆಟ್ಟದಿಂದ ನೀರು ಬರಲು ಇರುವ ಜಾಗವನ್ನೇ ಅವರು ರಸ್ತೆ ಎಂದುಕೊಂಡಿದ್ದಾರೆ ಅಷ್ಟೆ. ನನ್ನನ್ನು ಬೈಕ್‌ನಲ್ಲಿ ಕುಳ್ಳಿರಿಸಿಕೊಂಡಿದ್ದ ವ್ಯಕ್ತಿ ಬೈಕ್ ಓಡಿಸುವ ಪರಿಯನ್ನು ವರ್ಣಿಸಲು ಅಸಾಧ್ಯ.

ಚಂಡಮಾರುತದ ಪ್ರಭಾವದಿಂದ ಸಣ್ಣದಾಗಿ ಮಳೆ ಬರುತ್ತಿತ್ತು. ಈಗಾಗಲೇ ಸಾಕಷ್ಟು ಮಳೆ ಬಂದು ರಸ್ತೆ ಕೊಚ್ಚೆಯಾಗಿತ್ತು. ಬೈಕ್ ಜಾರುತ್ತಿತ್ತು. ಬೆಟ್ಟವನ್ನು ಹತ್ತಲು ಅದು ಕಷ್ಟಪಡುತ್ತಿತ್ತು. ಬೈಕ್ ಸವಾರ ಒಂದು ಕೈಯಲ್ಲಿ ಎಕ್ಸಲೇಟರ್ ತಿರುವುತ್ತಿದ್ದ. ಎರಡೂ ಕಾಲುಗಳನ್ನು ನೆಲಕ್ಕೆ ಒತ್ತಿ ತಳ್ಳುತ್ತಿದ್ದ. ಹೀಗೆ ಎರಡೂ ಶಕ್ತಿಯ ಮೂಲಕ ಬೈಕ್ ಮೇಲಕ್ಕೆ ಹೋಗುತ್ತಿತ್ತು. ಒಮ್ಮೊಮ್ಮೆ ನೆಲವನ್ನು ತಳ್ಳುವಾಗ ಜಾರುತ್ತಿತ್ತು. ಆಗ ಬೈಕ್ ಮುಂದೆ ಹೋಗುವ ಬದಲು ಹಿಂದಕ್ಕೆ ಬರುತ್ತಿತ್ತು. ನನಗೋ ಈವರೆಗೂ ಬೈಕ್ ಓಡಿಸಲು ಬಾರದು. ಬೈಕ್ ಓಡಿಸುತ್ತಿರುವವನು ಅಪರಿಚಿತ ವ್ಯಕ್ತಿ. ರಾತ್ರಿ ಬೇರೆ. ಸುತ್ತಲೂ ಏನೂ ಕಾಣದು. ನೆಲಕ್ಕೆ ಕಾಲಿಟ್ಟರೆ ಜಿಗಣೆಗಳು ಮುತ್ತುತ್ತಿದ್ದವು. ನಾನು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತುಕೊಂಡಿದ್ದೆ.

ಅದು ನಕ್ಸಲ್ ಪ್ರಭಾವವಿರುವ ಪ್ರದೇಶ. ಏನಾದರೂ ಸದ್ದಾದರೆ ನನಗೆ ನಕ್ಸಲರೇ ಕೋವಿ ಹಿಡಿದುಕೊಂಡು ಬಂದ ಹಾಗೆ, ಕಾಡು ಪ್ರಾಣಿಗಳು ದಾಳಿ ನಡೆಸಿದ ಹಾಗೆ. ಎಲ್ಲ ಕೆಟ್ಟ ಯೋಚನೆಗಳೇ. ಅಂತೂ ಸುಮಾರು ಒಂದು ಗಂಟೆಯ ಈ ಸರ್ಕಸ್ ಪಯಣ ಮುಂದುವರಿಯಿತು. ಕಾಡಿನ ಮಧ್ಯದಲ್ಲಿ ಒಂದು ಮನೆ. ಆ ಮನೆಯ ಬಾಗಿಲಿಗೆ ನಮ್ಮ ಬೈಕ್ ಬಂದಾಗ ಸರಿಯಾಗಿ ರಾತ್ರಿ ೭.೪೫.

ಅದೇ ಮುಜೇಕಾನ್ ಎಂಬ ಗ್ರಾಮ. ಕಾಡಿನಲ್ಲಿರುವ ಈ ಗ್ರಾಮವನ್ನು ಅವರು 'ಮುಜೇಖಾನ್' ಎಂದು ಕರೆಯುತ್ತಾರೆ. ಯಾರು ಈ ಮುಜೇಖಾನ್ ಅವನೇನು ಸಲ್ಮಾನ್ ಖಾನ್ ತಮ್ಮನೆ, ಶಾರೂಖ್ ಖಾನ್‌ನ ಭಾವನೇ ಎಂದು ನಾನು ಕೇಳಿದ್ದಕ್ಕೆ ಅಲ್ಲಿಯೇ ಕುಳಿತ ಒಬ್ಬರು ಇದರ ಹೆಸರು ಮುಜೇಕಾನ್ ಅಷ್ಟೆ. ಕಾಡಿಗೆ ಕಾನು ಎಂದು ಕರೆಯುತ್ತಾರೆ ತಾನೆ. ಜನರ ಬಾಯಯಲ್ಲಿ ಅದು ಮುಜೇಖಾನ್ ಎಂದಾಗಿದೆ ಎಂದು ಉತ್ತರಿಸಿದರು.

ಕಳಸ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿಯೇ ಈ ಮುಜೇಕಾನ್ ಬರುತ್ತದೆ. ಅಲ್ಲಿ ಒಟ್ಟಾರೆ ೬೦ ಕುಟುಂಬಗಳು ಇವೆ. ಬಹುತೇಕ ಕುಟುಂಬಗಳು ಗೌಡ್ಲು ಎಂಬ ಗಿರಿಜನ ಜಾತಿಗೆ ಸೇರಿದವರು. ಉಳಿದಂತೆ ಬ್ರಾಹ್ಮಣರು, ಜೈನರು, ಕುಂಬಾರರು, ಪೂಜಾರರು ಇದ್ದಾರೆ.

ಗೌಡ್ಲು ಗಿರಿಜನರೂ ಸೇರಿದಂತೆ ಎಲ್ಲರೂ ಕೃಷಿಕರು. ಅಲ್ಲೊಂದು ಇಲ್ಲೊಂದು ಮನೆ. ಆ ಎಲ್ಲ ಮನೆಗಳನ್ನೂ ಸೇರಿಸಿದರೆ ಅದೊಂದು ಗ್ರಾಮವಾಗುತ್ತದೆ. ಸುತ್ತಲೂ ರತ್ನಗಿರಿ, ಅಡಕೋಡು, ಮಾಗಲು, ಕೆದ್ಲಗದ್ದೆ, ವಾಟೆಕೊಳಲು ಮುಂತಾದ ಗ್ರಾಮಗಳು ಇವೆ. ಬಹುತೇಕ ಎಲ್ಲ ಗ್ರಾಮಗಳಿಗೂ ಮೂಲ ಸೌಲಭ್ಯಗಳ ಕೊರತೆ ಇದೆ. ಶಾಲೆ, ಆಸ್ಪತ್ರೆ ಮುಂತಾದವುಗಳಿಗೆ ಕಳಸಕ್ಕೇ ಬರಬೇಕು. ರಸ್ತೆಯಂತೂ ಇಲ್ಲವೇ ಇಲ್ಲ. ರಸ್ತೆ ಮಾಡಿಕೊಡಿ ಎಂದು ಕಳೆದ ಹಲವಾರು ದಶಕಗಳಿಂದ ಈ ಗ್ರಾಮಸ್ಥರು ಕೇಳುತ್ತಲೇ ಇದ್ದಾರೆ. ಆದರೆ ಈ ಕೂಗು ಅಧಿಕಾರಿಗಳಿಗೆ ಇನ್ನೂ ಕೇಳಿಸಿಲ್ಲ.

ಕಾಫಿ, ಅಡಿಕೆ, ಏಲಕ್ಕಿ, ಬತ್ತ ಇಲ್ಲಿನ ಪ್ರಮುಖ ಬೆಳೆ. ರಾಜ್ಯದ ಇತರ ಕಡೆ ಇರುವ ಗಿರಿಜನರಿಗೆ ಕೃಷಿ ಅಷ್ಟಾಗಿ ಗೊತ್ತಿಲ್ಲ. ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವುದು ಮಾತ್ರ ಗೊತ್ತು. ಆದರೆ ಗೌಡ್ಲು ಜಾತಿಗೆ ಸೇರಿದ ಗಿರಿಜನರಿಗೆ ಕೃಷಿಯೂ ಗೊತ್ತು. ಈಗ ಭೂಗತವಾಗಿರುವ ನಕ್ಸಲೀಯರಲ್ಲಿ ಈ ಜನಾಂಗಕ್ಕೆ ಸೇರಿದವರೂ ಇದ್ದಾರೆ.

ಆ ಮನೆಯಲ್ಲಿ ಬೆಳಕು ಕಡಿಮೆ ಇತ್ತು. ಆದರೆ ನನ್ನ ಸುತ್ತ ಕುಳಿತಿದ್ದ ಜನರು

ಆಡುತ್ತಿದ್ದ ಮಾತಿನಲ್ಲಿ ಬೆಂಕಿ ಇತ್ತು. ಅವರು ಬೆಂಕಿ ಉಗುಳಿದ ವಿವರ ಮುಂದಿನ ಭಾಗದಲ್ಲಿ.

ಗುಂಡು ಹಾರಿಸಿದರಷ್ಟೇ ಹಿಂಸೆಯಲ್ಲ

'ಕೈಯಲ್ಲಿ ಕೋವಿ ಹಿಡಿದು ಜನರನ್ನು ಬೆದರಿಸಿದರಷ್ಟೇ ಹಿಂಸೆಯಲ್ಲ. ಮರಕ್ಕೋ ಕಂಬಕ್ಕೋ ಕಟ್ಟಿ ಹಾಕಿ ಹೊಡೆದರಷ್ಟೇ ದೌರ್ಜನ್ಯ ಅಲ್ಲ. ಮನೆಯಲ್ಲಿ ಜೀತಕ್ಕೆ ಇಟ್ಟುಕೊಂಡು ಯಾವುದೇ ಕನಿಷ್ಠ ಸೌಲಭ್ಯ ನೀಡದಿದ್ದರೆ ಮಾತ್ರ ಮಾನವ ಹಕ್ಕು ಉಲ್ಲಂಘನೆಯಾಗುವುದಿಲ್ಲ. ದಟ್ಟ ಕಾಡಿನ ಮಧ್ಯೆ ೬೦ಕ್ಕೂ ಹೆಚ್ಚು ಕುಟುಂಬಗಳು ವಾಸ ಮಾಡುವ ಈ ಮುಜೇಕಾನಿಗೆ ರಸ್ತೆ ಮಾಡದಿದ್ದರೆ ಅದೂ ಹಿಂಸೆ. ಕಳಸದಲ್ಲಿ ಪದವಿ ಕಾಲೇಜು ತೆರೆದು ಅಧ್ಯಾಪಕರನ್ನೇ ನೀಡದಿದ್ದರೆ ಅದೂ ದೌರ್ಜನ್ಯ. ಆಸ್ಪತ್ರೆಗೆ ವೈದ್ಯರನ್ನು ನೇಮಕ ಮಾಡದಿದ್ದರೆ ಅದೂ ಮಾನವ ಹಕ್ಕು ಉಲ್ಲಂಘನೆ'.

ಮುಜೇಕಾನಿನ ಮನೆಯಲ್ಲಿ ನನ್ನ ಸುತ್ತ ಕುಳಿತ ವ್ಯಕ್ತಿಗಳಿಂದ ಇಂತಹ ಬೆಂಕಿ ಉಂಡೆಗಳು ಹರಿದು ಬರುತ್ತಿದ್ದವು. 'ಕಾಡಿನಲ್ಲಿ ಮಳೆ ಚಳಿ ಎನ್ನದೆ ಬದುಕುತ್ತಾ, ಜಿಗಣೆಗಳಿಂದ ಕಚ್ಚಿಸಿಕೊಳ್ಳುತ್ತಾ, ಯಾವ ಗೊತ್ತು ಗುರಿಯಿಲ್ಲದೆ ಅಲೆಯುತ್ತಾ ಕಷ್ಟ ಪಡುತ್ತಿರುವ ನಕ್ಸಲರನ್ನು ಉತ್ತೇಜಿಸಿದ್ದು, ತಯಾರು ಮಾಡಿದ್ದು ಈ ವ್ಯವಸ್ಥೆ ಮತ್ತು ಸರ್ಕಾರ. ನಕ್ಸಲರನ್ನು ನಿಜವಾಗಿ ಬೆಂಬಲಿಸುತ್ತಿರುವವರು ಕಾಡಂಚಿನ ಗ್ರಾಮದ ಜನರಲ್ಲ. ಸರ್ಕಾರವೇ ಅವರಿಗೆ ಬೆಂಬಲ ನೀಡುತ್ತಿದೆ. ಅವರ ಕಿಚ್ಚನ್ನು ಹೆಚ್ಚಿಸುತ್ತಿದೆ'.

ಈಗ ನಾನು ಹೆಚ್ಚು ಮಾತನಾಡುವ ಅಗತ್ಯ ಇರಲಿಲ್ಲ. ಅವರೇ ಎಲ್ಲ ಹೇಳುತ್ತಿದ್ದರು. ಗ್ರಾಮದ ಜನರು ಅನುಭವಿಸುತ್ತಿರುವ ಸಮಸ್ಯೆ, ಮೂಲಭೂತ ಸೌಲಭ್ಯಗಳ ಕೊರತೆ, ಅಭಿವೃದ್ಧಿಯ ನಾಟಕ, ಪ್ಯಾಕೇಜ್‌ಗಳು ಬಲಾಢ್ಯರ ಪಾಲಾಗುತ್ತಿರುವುದು ಎಲ್ಲವನ್ನೂ ವಿವರಿಸಿದರು. ನಾನು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದವನು ಒಮ್ಮೆಲೆ 'ನಕ್ಸಲರ ವಾದ ಸರಿ ಇರಬಹುದು. ಗುರಿಯೂ ಒಳ್ಳೆಯದಿರಬಹುದು. ಆದರೆ ಅವರು ಅದಕ್ಕಾಗಿ ಹಿಡಿದ ಹಾದಿ ಸರಿಯೇ? ನಮ್ಮದು ಪ್ರಜಾಪ್ರಭುತ್ವ ದೇಶ. ಪ್ರಜಾಪ್ರಭುತ್ವದ ಮಾದರಿಯಲ್ಲಿಯೇ ಹೋರಾಟವನ್ನು ನಡೆಸಿದ್ದರೆ ಆಗುತ್ತಿರಲಿಲ್ಲವೇ? ಕೈಯಲ್ಲಿ ಕೋವಿ ಹಿಡಿದುಕೊಂಡು ಹೋರಾಟ ನಡೆಸುವುದು ಅಗತ್ಯವಾಗಿತ್ತೇ?' ಎಂದು ಪ್ರಶ್ನೆ ಮಾಡಿದೆ.

ಒಮ್ಮೆಲೇ ಅಲ್ಲಿದ್ದವರು ನನ್ನ ಮೇಲೆ ಎಗರಿ ಬಿದ್ದರು. 'ಎಷ್ಟು ವರ್ಷ ಧರಣಿ, ಪ್ರತಿಭಟನೆ, ಹೋರಾಟ, ಮೆರವಣಿಗೆ ಮಾಡಬೇಕು ಸ್ವಾಮಿ. ಇದನ್ನೆಲ್ಲಾ ಮಾಡದೇ ಅವರು ಕೈಯಲ್ಲಿ ಕೋವಿ ಹಿಡಿದಿಲ್ಲ. ಈ ದಾರಿಯಲ್ಲಿ ಹೋದರೆ ನಮ್ಮ ಜೀವನ ಪೂರ್ತಿ ನ್ಯಾಯ ಸಿಗುವುದಿಲ್ಲ ಎಂದೇ ಅವರು ಸಶಸ್ತ್ರ ಹೋರಾಟಕ್ಕೆ ಧುಮುಕಿದರು' ಎಂದರು.

'ಸ್ವಾತಂತ್ರ್ಯ ಬಂದಾಗಿನಿಂದಲೂ ಈ ಗ್ರಾಮಗಳಿಗೆ ಸೌಲಭ್ಯ ನೀಡಿ ಎಂದು ಕೇಳುತ್ತಲೇ ಬಂದಿದ್ದೇವೆ. ಆದರೆ ಯಾವುದೇ ಸರ್ಕಾರ ನಮ್ಮ ಮನವಿಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.

ನಕ್ಸಲರು ಈ ಭಾಗದಲ್ಲಿ ಕಾಣಿಸಿಕೊಂಡ ನಂತರದ ೧೦ ವರ್ಷದಲ್ಲಿ ಆದ

ಅಭಿವೃದ್ಧಿ ಕಾರ್ಯಗಳು ಕಳೆದ ೫೦ ವರ್ಷಗಳಲ್ಲಿಯೂ ಆಗಿರಲಿಲ್ಲ.

ನಕ್ಸಲರು ಸಶಸ್ತ್ರ ಹೋರಾಟ ನಡೆಸಿದ ನಂತರ ಸರ್ಕಾರಿ ಅಧಿಕಾರಿಗಳು ನಮ್ಮನ್ನೂ ಮನುಷ್ಯರಂತೆ ನೋಡಲು ಆರಂಭಿಸಿದರು. ಶಾಲೆ, ಕಾಲೇಜುಗಳು ಬಂದವು. ಆಸ್ಪತ್ರೆ, ರೇಷನ್ ಕಾರ್ಡ್, ನ್ಯಾಯ ಬೆಲೆ ಅಂಗಡಿ, ಅಂಗನವಾಡಿ ಬಂದವು. ನಕ್ಸಲರು ಈ ಭಾಗದ ಗೌಡ್ಲು ಜನಾಂಗ ಹಾಗೂ ದಲಿತರನ್ನು ಮನವೊಲಿಸಿ ಅವರ ಮಕ್ಕಳನ್ನು ಶಾಲೆಗೆ ಸೇರಿಸಿದರು.
೫-೧೦ ವರ್ಷಗಳ ಹಿಂದೆ ಕಳಸದ ಪಿಯು ಕಾಲೇಜಿನಲ್ಲಿ ಕಲಿಯುತ್ತಿದ್ದ ಗೌಡ್ಲು ಜನಾಂಗದ ಮಕ್ಕಳ ಸಂಖ್ಯೆ ೧೦ನ್ನು ಮೀರಿರಲಿಲ್ಲ. ಈಗ ೨೦೦ಕ್ಕೂ ಹೆಚ್ಚು ಮಕ್ಕಳು ಕಲಿಯುತ್ತಿದ್ದಾರೆ. ಇಂತಹ ಎಚ್ಚರ ಬಂದಿದ್ದು, ನಾವು ಹೋರಾಟವನ್ನು ಕಲಿತದ್ದು ನಕ್ಸಲರಿಂದ. ಅಧಿಕಾರಿಗಳು ಮತ್ತು ಭೂಮಾಲಿಕರ ದೌರ್ಜನ್ಯ ಕಡಿಮೆಯಾಗಿದ್ದು ಕೂಡ ಅವರಿಂದಲೆ'.

'ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿರುವ ಗಿರಿಜನರಿಗೆ ಭೂಮಿಯ ಹಕ್ಕು ಪತ್ರ ನೀಡಬೇಕು ಎಂಬ ಹೋರಾಟ ಹಲವಾರು ವರ್ಷಗಳಿಂದ ನಡೆಯುತ್ತಲೇ ಇತ್ತು. ವರ್ಷಾನುಗಟ್ಟಲೆ ಹೋರಾಟ ನಡೆಸಿದ್ದೆವು. ದೆಹಲಿಗೂ ಹೋಗಿ ಪ್ರತಿಭಟನೆ ಮಾಡಿದ್ದೆವು. ಆದರೆ ಫಲಿತಾಂಶ ಮಾತ್ರ ಶೂನ್ಯ. ಒಂದು ದಿನ ನಕ್ಸಲರು ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿ ಕೋವಿಗಳನ್ನು ಅಪಹರಿಸಿಕೊಂಡು ಹೋಗುವಾಗ ಗಿರಿಜನರಿಗೆ ಹಕ್ಕು ಪತ್ರ ತಕ್ಷಣ ನೀಡದೇ ಇದ್ದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಎಚ್ಚರಿಸಿದರು. ಮಾರನೇ ದಿನವೇ ಹಕ್ಕು ಪತ್ರ ವಿತರಿಸಲಾಯಿತು. ಸಶಸ್ತ್ರ ಹೋರಾಟಕ್ಕೆ ಕುಮ್ಮಕ್ಕು ಕೊಟ್ಟಿದ್ದು ನಾವೋ ಸರ್ಕಾರವೋ ನೀವೇ ಹೇಳಿ' ಎಂದು ಅವರು ನನ್ನ ಮುಂದೆ ಪ್ರಶ್ನೆ ಇಟ್ಟರು.

ಬಾಳೆಹೊಳೆಯ ಜೆ.ಎಂ.ಕೃಷ್ಣ ಗೌಡ್ಲು ಜನಾಂಗದಲ್ಲಿಯೇ ಸ್ನಾತಕೋತ್ತರ ಪದವಿ ಪಡೆದ ಮೊದಲ ಯುವಕ. ಸರ್ಕಾರದವರೇ ಅವರನ್ನು ಸನ್ಮಾನ ಕೂಡ ಮಾಡಿದ್ದರು. ಆದರೆ ಉದ್ಯೋಗ ಸಿಗಲಿಲ್ಲ. ಗೌಡ್ಲು ಜನಾಂಗದ ಮಧ್ಯದಲ್ಲಿಯೇ ಇದ್ದು ಜನರಲ್ಲಿ ತಿಳಿವಳಿಕೆ ಮೂಡಿಸುತ್ತಿದ್ದರು. ಒಮ್ಮೆ ಕಳಸಕ್ಕೆ ನೀರು ಕೊಡುವ ವಿಚಾರದಲ್ಲಿ ಮೋಟಮ್ಮ ಅವರ ಕಾರನ್ನು ತಡೆದರು. ಆಗ ಅವರನ್ನು ಬಂಧಿಸಲಾಯಿತು. ಬಿಡುಗಡೆಯ ನಂತರ ಅವರು ಭೂಗತರಾದರು. ನಕ್ಸಲರೊಂದಿಗೆ ಸೇರಿಕೊಂಡರು. ಕೆಲವು ದಿನ ಅವರೊಂದಿಗೆ ಕೆಲಸ ಮಾಡಿ ಮತ್ತೆ ಶರಣಾದರು. ಮೂರೂವರೆ ವರ್ಷ ಜೈಲಿನಲ್ಲಿದ್ದು ಬಿಡುಗಡೆಯಾಗಿ ಸಮಾಜದಲ್ಲಿ ಎಲ್ಲರಂತೆ ಬದುಕಲು ಬಯಸಿದ್ದರು. ಆದರೆ ಅವರಿಗೆ ಪುನರ್‌ವಸತಿ ಕಲ್ಪಿಸಲು ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸಲಿಲ್ಲ. ಸರಿಯಾದ ಕೆಲಸವೂ ಸಿಗಲಿಲ್ಲ. ಅವರು ಮತ್ತೆ ಈಗ ಭೂಗತರಾಗಿದ್ದಾರೆ. ಸಶಸ್ತ್ರ ಹೋರಾಟದಲ್ಲಿ ತೊಡಗಿದ್ದಾರೆ. ಇದಕ್ಕೆ ಯಾರು ಕಾರಣ?

'ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೇವಲ ೧೭ ಜನರ ಬಳಿ ೩೫ ಸಾವಿರ ಎಕರೆ ಜಮೀನು ಇದೆ. ಅವರೆಲ್ಲರೂ ವಿದೇಶದಲ್ಲಿದ್ದಾರೆ. ಅಲ್ಲಿಂದಲೇ ವ್ಯವಹಾರ ಮಾಡುತ್ತಾರೆ. ಅವರ ಜಮೀನುಗಳಲ್ಲಿ ಒಂದೇ ಬಾರಿಗೆ ೬೦೦ರಿಂದ ಸಾವಿರ ಮರಗಳನ್ನು ಕಡಿಯಲು ಅನುಮತಿ ನೀಡಲಾಗುತ್ತದೆ. ಆದರೆ ಬಡವರು ಒಂದು ಮರ ಕಡಿಯಲು ಅನುಮತಿ ಕೇಳಿದರೆ ಕೊಡುವುದಿಲ್ಲ. ಇದಕ್ಕೆಲ್ಲಾ ಏನು ಪರಿಹಾರ?'.

ಪ್ರಶ್ನೆಗಳು ಒಂದರ ಹಿಂದೆ ಒಂದು ಬರುತ್ತಲೇ ಇದ್ದವು.

ಆಗಲೇ ರಾತ್ರಿ ಗಂಟೆಯಾಗಿತ್ತು. ನಾನು ಅಲ್ಲಿಯೇ ಇರಲು ಸಾಧ್ಯವಿರಲಿಲ್ಲ. ಬೇಗನೆ ವಾಪಸು ಬರಬೇಕಿತ್ತು. ಎಲ್ಲ ಪ್ರಶ್ನೆಗಳಿಗೆ ನನ್ನ ಬಳಿ ಉತ್ತರ ಇರಲಿಲ್ಲ. ನಾನು ಉತ್ತರ ಕೊಡುವ ಸ್ಥಾನದಲ್ಲಿಯೂ ಇಲ್ಲ. ಅದಕ್ಕೇ ಅವರ ಸಮಸ್ಯೆಗಳನ್ನು ಕೇಳಿ ಎದ್ದು ನಿಂತೆ. ಅವರು ನನ್ನನ್ನು ಬಿಡಲಿಲ್ಲ. ನಾನೊಬ್ಬ ಆ ಮನೆಯ ನೆಂಟ ಎಂಬಂತೆ ಊಟ ಮಾಡಿಕೊಂಡು ಹೋಗಲೇ ಬೇಕು ಎಂದು ಒತ್ತಾಯಿಸಿದರು. ಬಿಸಿ ಬಿಸಿ ಅನ್ನ, ಬಾಳೆಕಾಯಿ ಸಾಂಬಾರು ಬಡಿಸಿದರು. ಊಟ ಮಾಡಿ ಹೊರಬಂದೆ. ಮತ್ತೆ ಅದೇ ಬೈಕ್. ಅದೇ ದಾರಿ. ಈಗ ಬೆಟ್ಟದಿಂದ ಇಳಿಯುವ ಸರ್ಕಸ್. ರಾತ್ರಿ ೧೦ ಗಂಟೆಗೆ ಸುರಕ್ಷಿತವಾಗಿ ಕಳಸಕ್ಕೆ ತಂದು ಬಿಟ್ಟರು. ನಾನು ಚಿಕ್ಕಮಗಳೂರು ಬಸ್ ಹತ್ತಿದೆ.

ಅಡಕತ್ತರಿಯಲ್ಲಿ ಸಿಲುಕಿದ ಮೆಣಸಿನಹಾಡ್ಯ

ಕರ್ನಾಟಕದಲ್ಲಿ ನಕ್ಸಲರು ಎಂದ ತಕ್ಷಣವೇ ನೆನಪಿಗೆ ಬರುವ ಹೆಸರು ಮೆಣಸಿನಹಾಡ್ಯ. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಮೆಣಸಿನಹಾಡ್ಯ ಎಂಬ ಪುಟ್ಟ ಗ್ರಾಮ ನಕ್ಸಲರಿಂದಾಗಿಯೇ ಪ್ರಸಿದ್ಧಿಗೆ ಬಂದಿದೆ. ಹೊರ ಜಗತ್ತಿಗೆ ಇದೊಂದು ನಕ್ಸಲರ ತರಬೇತಿ ಶಿಬಿರ ಎನ್ನುವಂತೆಯೇ ಬಿಂಬಿತವಾಗಿದೆ. ಇಲ್ಲಿರುವ ಹೆಚ್ಚಿನವರು ನಕ್ಸಲರು ಎನ್ನುವ ಭಾವನೆ ಇದೆ.

ಆದರೆ ಮೆಣಸಿನಹಾಡ್ಯಕ್ಕೆ ಭೇಟಿ ನೀಡಿದರೆ ಹೊರ ಜಗತ್ತು ತಿಳಿದುಕೊಂಡಿದ್ದು ಅರ್ಧ ಸತ್ಯ ಮಾತ್ರ ಎನ್ನುವುದು ಗೊತ್ತಾಗುತ್ತದೆ. ೨೦೦೧ರಲ್ಲಿ ನಕ್ಸಲರ ಕೋವಿಯಿಂದ ಹಾರಿದ ಗುಂಡೊಂದು ಚೀರಮ್ಮ ಎಂಬಾಕೆಯ ಕಾಲಿಗೆ ತಗುಲಿ ಗಾಯವಾದ ನಂತರ ಕರ್ನಾಟಕದಲ್ಲಿ ಸಶಸ್ತ್ರ ನಕ್ಸಲೀಯರು ಇದ್ದಾರೆ ಎನ್ನುವುದು ಜಗತ್ತಿಗೇ ಗೊತ್ತಾಯಿತು. ಅಂದಿನಿಂದಲೇ ಮೆಣಸಿನಹಾಡ್ಯದ ಗ್ರಹಚಾರವೂ ಬದಲಾಯಿತು.

ಮೆಣಸಿನಹಾಡ್ಯದಲ್ಲಿ ಸಾಲುಗೇರಿಗಳಿಲ್ಲ. ಸುಮಾರು ೫ ಕಿಮೀ ವ್ಯಾಪ್ತಿಯಲ್ಲಿ ೬೦ಕ್ಕೂ ಹೆಚ್ಚು ಮನೆಗಳಿವೆ. ಬಹುತೇಕ ಗೌಡ್ಲು ಜನಾಂಗದವರೇ ಜಾಸ್ತಿ. ಬ್ರಾಹ್ಮಣರು ಮತ್ತು ಜೈನರ ತಲಾ ೨ ಕುಟುಂಬಗಳೂ ಇಲ್ಲಿವೆ. ಅನ್ನಪೂರ್ಣೇಶ್ವರಿಯಿಂದ ಖ್ಯಾತಿಗೆ ಬಂದ ಹೊರನಾಡಿನಿಂದ ಕೇವಲ ೧೦ ಕಿ.ಮೀ ದೂರದಲ್ಲಿದೆ ಈ ಮೆಣಸಿನಹಾಡ್ಯ. ಭೂಲೋಕದ ಸ್ವರ್ಗ ಎಂದು ಕರೆಯಬಹುದಾದ ಗ್ರಾಮ ಇದು. ಸುತ್ತಲೂ ಬೆಟ್ಟಗಳು ಆವರಿಸಿವೆ. ವರ್ಷಪೂರ್ತಿ ಹಚ್ಚಹಸಿರಿನ ವಾತಾವರಣ. ಎತ್ತ ತಿರುಗಿದರೂ ಒಂದಕ್ಕಿಂತ ಒಂದು ದೊಡ್ಡದಾದ ಬೆಟ್ಟಗಳು ಕಾಣಿಸುತ್ತವೆ. ದಟ್ಟ ಕಾಡಲ್ಲ. ಬೋಳು ಗುಡ್ಡಗಳು. ಅವುಗಳ ನಡುವೆಯೇ ಅಲ್ಲೊಂದು ಇಲ್ಲೊಂದು ಮನೆಗಳು ಕಾಣಿಸುತ್ತವೆ. ಅದರ ನಡುವೆ ಅಡಿಕೆ ತೋಟ, ಬತ್ತದ ಗದ್ದೆ.

ನಕ್ಸಲ್ ಪೀಡಿತ ಪ್ರದೇಶ ಎಂದು ಗುರುತಿಸಲಾದ ನಂತರ ಇಲ್ಲೊಂದು ಆಶ್ರಮ ಶಾಲೆಯನ್ನು ತೆರೆಯಲಾಗಿದೆ. ಅದರ ಅಂಗಳದಲ್ಲಿ ನಿಂತು ಸುತ್ತಲಿನ ಪರಿಸರವನ್ನು ನೋಡಿದರೆ ಯಾರಿಗೇ ಆದರೂ ಇಲ್ಲಿಯೇ ಉಳಿದುಬಿಡೋಣ ಎನ್ನಿಸುತ್ತದೆ. ಇಂತಹ ವಾತಾವರಣವನ್ನು ನಕ್ಸಲೀಯರು ಇಷ್ಟಪಟ್ಟಿದ್ದರೆ ಅದರಲ್ಲಿ ಅಚ್ಚರಿಯೇನೋ ಇಲ್ಲ. ಅವರಿಗೆ ಇಲ್ಲಿ ಸಾಕಷ್ಟು ಅನುಕೂಲತೆಗಳು ಇವೆ.

ನಕ್ಸಲ್ ನಾಯಕ ಸಾಕೇತ್‌ರಾಜನ್ ಮತ್ತು ಆತನ ಸಹಚರರು ಹತ್ಯೆಗೆ ಈಡಾಗಿದ್ದು ಕೂಡ ಇದೇ ಗ್ರಾಮದಲ್ಲಿ. ಪೇಜಾವರ ಸ್ವಾಮೀಜಿ ಅವರು ನಿರ್ಮಿಸಿದ ದೇವಾಲಯದ ಉದ್ಘಾಟನೆ ಸಮಾರಂಭದ ನಂತರ ನಕ್ಸಲೀಯರು ಬಂದು ಊಟ ಮಾಡಿಕೊಂಡು ಹೋಗಿದ್ದಾರೆ ಎಂಬ ಸುದ್ದಿ ಕೂಡ ಇತ್ತೀಚೆಗೆ ಬಂದಿತ್ತು. ನಕ್ಸಲೀಯರು ಈ ಗ್ರಾಮದ ವ್ಯಕ್ತಿಯೊಬ್ಬನ್ನು ಕೊಂದು ಹಾಕಿದ್ದಾರೆ. ಆಗಾಗ ಇಲ್ಲಿ ನಕ್ಸಲೀಯರು ಕಾಣಿಸಿಕೊಳ್ಳುತ್ತಲೇ ಇರುತ್ತಾರೆ. ಈ ಕಾರಣಗಳಿಗಾಗಿ ಮೆಣಸಿನಹಾಡ್ಯ ಸದಾ ಸುದ್ದಿಯಲ್ಲಿರುತ್ತದೆ.

ರಾಜ್ಯದಲ್ಲಿರುವ ಇತರ ಆದಿವಾಸಿಗಳಿಗಿಂತ ಗೌಡ್ಲು ಜನಾಂಗದವರು ಹೆಚ್ಚು ಮುಂದುವರಿದಿದ್ದಾರೆ. ಶಿಕ್ಷಣದಲ್ಲಿಯೂ ಮುಂದಿದ್ದಾರೆ. ಕೃಷಿಯನ್ನೂ ರೂಢಿಸಿಕೊಂಡಿದ್ದಾರೆ. ಪದವೀಧರರೂ ಇದ್ದಾರೆ. ಹೆಚ್ಚು ಆಧುನಿಕವಾಗಿದ್ದಾರೆ. ಮನೆಗೆ ಬಂದವರನ್ನು ಅತ್ಯಂತ ಪ್ರೀತಿಯಿಂದ ಸ್ವಾಗತಿಸುವ ಅವರು ಯಾರಾದರೂ ಗ್ರಾಮಕ್ಕೆ ಬಂದರೆ ಖುಷಿ ಪಡುತ್ತಾರೆ. ಮಲೆನಾಡಿನ ಇತರ ಮಂದಿಯಂತೆಯೇ ಆತಿಥ್ಯದಲ್ಲಿಯೂ ಇವರು ಹಿಂದೆ ಬಿದ್ದಿಲ್ಲ.

ಕಾಫಿ, ಅಡಿಕೆ, ಬಾಳೆ, ಕರಿಮೆಣಸು, ವೀಳ್ಯದೆಲೆ ಮುಂತಾದ ಬೆಳೆಗಳನ್ನು ಬೆಳೆದುಕೊಂಡು ತಮ್ಮ ಪಾಡಿಗೆ ತಾವಿದ್ದ ಮೆಣಸಿನಹಾಡ್ಯ ಗ್ರಾಮ ಕುಖ್ಯಾತಿಗೆ ಒಳಗಾಗಿದ್ದು ನಕ್ಸಲರಿಂದ. ಈ ಗ್ರಾಮದಲ್ಲಿ ನಕ್ಸಲರು ಕಾಣಿಸಿಕೊಂಡು ಒಂದು ದಶಕವೇ ಕಳೆದು ಹೋಗಿದೆ. ಅಲ್ಲಿಂದ ಗ್ರಾಮದ ಚಿತ್ರಣವೂ ಬದಲಾಗಿ ಹೋಗಿದೆ. ಅತ್ತ ನಕ್ಸಲೀಯರು, ಇತ್ತ ಪೊಲೀಸರು, ನಕ್ಸಲ್ ನಿಗ್ರಹಪಡೆಯ ಯೋಧರು, ಜಿಲ್ಲಾಡಳಿತ ಅಧಿಕಾರಿಗಳು, ರಾಜಕಾರಣಿಗಳು ಎಲ್ಲರೂ ಬಂದು ಇಡೀ ಗ್ರಾಮ ಈಗ ಅಡಕತ್ತರಿಯಲ್ಲಿ ಸಿಲುಕಿಕೊಂಡಿದೆ.

ಗ್ರಾಮದ ಬಹುತೇಕ ಮಂದಿ ಪೊಲೀಸರ ಬಗ್ಗೆಯಾಗಲಿ ನಕ್ಸಲರ ಬಗ್ಗೆಯಾಗಲೀ ಏನನ್ನೂ ಮಾತನಾಡುವುದಿಲ್ಲ. ನಕ್ಸಲರು ಕಾಣಿಸಿಕೊಂಡ ನಂತರ ನಿಮ್ಮ ಬದುಕು ಹೇಗಾಗಿದೆ ಎಂದು ಕೇಳಿದರೆ 'ನಕ್ಸಲರು ಬಂದ ನಂತರ ಅನುಕೂಲವಾಗಿದೆ' ಎಂದೇ ಉತ್ತರಿಸುತ್ತಾರೆ. ಆದರೆ ಇದು ಪೂರ್ಣ ಸತ್ಯ ಅಲ್ಲ ಎನ್ನುವುದು ಅವರ ಮಾತಿನಿಂದಲೇ ಅರಿವಿಗೆ ಬರುತ್ತದೆ. ಪೊಲೀಸರಿಂದ ದೌರ್ಜನ್ಯಕ್ಕೆ ಒಳಗಾಗಿದ್ದೀರಾ, ಕಿರಿಕಿರಿ ಉಂಟಾಗಿದೆಯಾ ಎಂದು ಕೇಳಿದರೆ ಅವರು ಮೌನವಾಗುತ್ತಾರೆ. 'ಆ ವಿಚಾರ ಬಿಡಿ ಸಾರ್, ಎಲ್ಲಾ ನಮ್ಮ ಕರ್ಮ' ಎಂದು ಮಾತು ನಿಲ್ಲಿಸಿಬಿಡುತ್ತಾರೆ.

'ಇಲ್ಲಿಯ ಸತ್ಯಗಳನ್ನು ಹೇಳದಿದ್ದರೆ ನಿಮ್ಮ ಬಗ್ಗೆ ಹೊರ ಜಗತ್ತಿನವರು ತಿಳಿದುಕೊಂಡಿದ್ದೇ ಸತ್ಯ ಎಂದಾಗಿ ಬಿಡುತ್ತದೆ' ಎಂದು ಹೇಳಿದರೆ 'ಸತ್ಯ ಹೇಳುತ್ತೇವೆ ಸಾರ್. ಇಲ್ಲಿ ನಕ್ಸಲೀಯರು ಇಲ್ಲ. ಇದು ನಕ್ಸಲರ ತರಬೇತಿ ಕೇಂದ್ರ ಕೂಡ ಅಲ್ಲ. ನಕ್ಸಲರ ಬೆಂಬಲಿಗರೂ ಇಲ್ಲಿ ಯಾರೂ ಇಲ್ಲ. ನಕ್ಸಲರು ಕೋವಿಯ ತರಬೇತಿ ನಡೆಸುವಾಗ ಚೀರಮ್ಮ ಅವರಿಗೆ ಗಾಯವಾಯಿತು ಎನ್ನುವುದು ಸುಳ್ಳು, ಆ ದಿನ ನಕ್ಸಲರು ಬಂದಿದ್ದರು ಅಷ್ಟೆ. ಆಗ ಆಕಸ್ಮಿಕವಾಗಿ ಅವರಿಗೆ ಗುಂಡು ತಗುಲಿತು. ನಕ್ಸಲರು ಇಲ್ಲಿಯೇ ಇದ್ದಿರಲಿಲ್ಲ. ಸಾಕೇತ್‌ರಾಜನ್ ಹತ್ಯೆಯಾದ ನಂತರ ಈ ಗ್ರಾಮಕ್ಕೆ ನಕ್ಸಲೀಯರು ಬಂದೇ ಇಲ್ಲ. ಆದರೂ ಇದನ್ನು ನಕ್ಸಲರ ಗ್ರಾಮ ಎಂದು ಗುರುತಿಸಲಾಗುತ್ತದೆ. ಆಗಾಗ ಪೊಲೀಸರು ಬಂದು ವಿಚಾರಣೆ ನಡೆಸುತ್ತಾರೆ' ಎಂದು

ಹೇಳುತ್ತಾರೆ.

ನಕ್ಸಲ್ ಗ್ರಾಮ ಎಂಬ ಹೆಸರು ಬಂದ ನಂತರ ಸಾಕಷ್ಟು ಅಭಿವೃದ್ಧಿಯೂ ಆಗಿರಬೇಕಲ್ಲ ಎಂದು ಪ್ರಶ್ನೆ ಮಾಡಿದರೆ 'ಏನ್ ಅಭಿವೃದ್ಧಿ ಸ್ವಾಮಿ ಎಲ್ಲ ಅರೆಬರೆ ಅಭಿವೃದ್ಧಿ ಅಷ್ಟೆ' ಎಂದು ಬೇಸರಿಸಿಕೊಳ್ಳುತ್ತಾರೆ.

ಕತ್ತಲೆಯಲ್ಲಿ ಕೊಳೆವ ಗ್ರಾಮ!

'ನಕ್ಸಲ್ ಗ್ರಾಮ' ಹಣೆಪಟ್ಟಿ ಹಚ್ಚಿಕೊಂಡ ನಂತರ ಮೆಣಸಿನಹಾಡ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಜೋರಾಗಿ ನಡೆದಿವೆಯಾ ಎಂದು ಕೇಳಿದರೆ 'ಹೌದು' ಎನ್ನುವ ಉತ್ತರ ಬರುತ್ತದೆ. ಈ ಅಭಿವೃದ್ಧಿ ಕಾರ್ಯಗಳು ಗುಣಮಟ್ಟದಿಂದ ಕೂಡಿವೆಯಾ? ಜನರಿಗೆ ಇದರಿಂದ ಅನುಕೂಲ ಆಗಿದೆಯಾ ಎಂದು ಕೇಳಿದರೆ 'ಇಲ್ಲ' ಎನ್ನುವ ಉತ್ತರ ಬರುತ್ತದೆ.

ಮೆಣಸಿನಹಾಡ್ಯದಲ್ಲಿ ಮೊದಲು ಒಂದರಿಂದ ೭ನೇ ತರಗತಿವರೆಗಿನ ಶಾಲೆ ಇತ್ತು. ಈಗ ಅಲ್ಲಿ ಆಶ್ರಮ ಶಾಲೆ ತೆರೆಯಲಾಗಿದೆ. ಆಶ್ರಮ ಶಾಲೆಯ ಕಟ್ಟಡ ಭವ್ಯವಾಗಿದೆ. ದೂರದಿಂದ ನೋಡಿದರೆ ರೆಸಾರ್ಟ್ ರೀತಿ ಇದೆ. ಎಲ್ಲ ರೀತಿಯ ಸೌಲಭ್ಯಗಳೂ ಇವೆ. ಸರಿಯಾದ ಶಿಕ್ಷಕರೇ ಇಲ್ಲಿ ಇಲ್ಲ. 'ಇದು ಆಶ್ರಮ ಶಾಲೆಯಲ್ಲ. ಅನಾಥ ಶಾಲೆ' ಎಂದು ಗ್ರಾಮದ ದೇವೇಂದ್ರ ದುಃಖಿಸುತ್ತಾರೆ.

'ಶಾಲೆಯಲ್ಲಿ ಸುಮಾರು ೫೦ ಮಕ್ಕಳಿದ್ದಾರೆ. ಊಟೋಪಚಾರಕ್ಕೆ ಕೊರತೆ ಇಲ್ಲ. ಶಿಕ್ಷಕರು ಇಲ್ಲದೇ ಇರುವುದರಿಂದ ಮಕ್ಕಳಿಗೆ ಅಕ್ಷರಾಭ್ಯಾಸವಾಗುತ್ತಿಲ್ಲ. ೫ನೇ ತರಗತಿಯ ಮಕ್ಕಳಿಗೂ ಓದಲು ಬರೆಯಲು ಬರುವುದಿಲ್ಲ. ಇದರಿಂದ ಈ ಮಕ್ಕಳು ೬ನೇ ತರಗತಿಗೆ ಹೊರಗೆ ಹೋದಾಗ ಅಲ್ಲಿ ಪರದಾಡುತ್ತಾರೆ. ಕಲಿಕೆ ಸಾಧ್ಯವಾಗದೇ ಹಿಂದಿರುಗುತ್ತಾರೆ. ಶಾಲೆ ಎಂದರೆ ಕೇವಲ ಕಟ್ಟಡ ಮಾತ್ರ ಅಲ್ಲವಲ್ಲ' ಎಂದು ಕೆಂಪೇಗೌಡ ಹೇಳುತ್ತಾರೆ.

ಆಶ್ರಮ ಶಾಲೆಗೆ ವಿದ್ಯುತ್ ಸಂಪರ್ಕ ಇದೆ. ಗ್ರಾಮದ ಇತರ ಯಾವುದೇ ಮನೆಗೆ ವಿದ್ಯುತ್ ಸೌಲಭ್ಯ ಕಲ್ಪಿಸಿಲ್ಲ. ಮನೆಯ ಮುಂದೆಯೇ ವಿದ್ಯುತ್ ತಂತಿ ಹಾದು ಹೋಗಿದೆ. ಮನೆಯ ಪಕ್ಕದಲ್ಲಿಯೇ ವಿದ್ಯುತ್ ಕಂಬ ಇದೆ. ಆದರೂ ಮನೆಗಳಿಗೆ ವಿದ್ಯುತ್ ನೀಡಿಲ್ಲ. ಹೊಸದಾಗಿ ತಂತಿ ಎಳೆಯಬೇಕಾಗಿಲ್ಲ. ಕಂಬ ಹಾಕಬೇಕಿಲ್ಲ. ಆದರೂ ನಮ್ಮ ಮನೆಗೆ ವಿದ್ಯುತ್ ಕೊಡುತ್ತಿಲ್ಲ ಯಾಕೆ? ಎನ್ನುವುದು ಗ್ರಾಮಸ್ಥರಿಗೆ ಬಿಡಿಸಲಾಗದ ಒಗಟಾಗಿದೆ.

ಮೆಣಸಿನಹಾಡ್ಯದಲ್ಲಿ ೬೦ಕ್ಕೂ ಹೆಚ್ಚು ಮನೆಗಳಿವೆ. ಹಲವು ಮನೆಗಳಲ್ಲಿ ಸೋಲಾರ್ ಸೌಲಭ್ಯವಿದೆ. ಇಲ್ಲಿಗೆ ಯಾವುದೇ ವೃತ್ತ ಪತ್ರಿಕೆ ಬರುವುದಿಲ್ಲ. ಟಿವಿ ಇಲ್ಲ. ಹಾಗಾಗಿ ಹೊರ ಜಗತ್ತಿನ ವಿಷಯಗಳನ್ನು ತಿಳಿಯಲು ರೇಡಿಯೊ ಒಂದೇ ಸಾಧನ. ಅದೂ ಎಲ್ಲರ ಮನೆಯಲ್ಲಿ ಇಲ್ಲ. ಇತ್ತೀಚೆಗೆ ಮೆಣಿಸಿನಹಾಡ್ಯಕ್ಕೆ ನಕ್ಸಲರ ಭೇಟಿ ಎಂಬ ಸುದ್ದಿ ಎಲ್ಲ ಪತ್ರಿಕೆಗಳಲ್ಲಿ ಬಂದಿತ್ತು. ಈ ವಿಷಯ ಮೆಣಸಿನಹಾಡ್ಯದ ಜನರಿಗೆ ತಿಳಿದಿದ್ದು ೨ ದಿನ ತಡವಾಗಿ.

ಮೆಣಸಿನಹಾಡ್ಯದ ಆಶ್ರಮ ಶಾಲೆಯ ಈಗಿನ ಸ್ಥಿತಿ ಹೇಗೇ ಇರಲಿ. ಈ

ಗ್ರಾಮದಲ್ಲಿ ಸಾಕಷ್ಟು ಮಂದಿ ಪದವೀಧರರಿದ್ದಾರೆ. ಐಟಿಐ, ಎಂಜಿನಿಯರಿಂಗ್ ಓದಿದವರೂ ಇದ್ದಾರೆ. ಬಿಎಡ್ ಮಾಡಿದವರಿದ್ದಾರೆ. ಆದರೆ ಬಹುತೇಕರು ಇನ್ನೂ ನಿರುದ್ಯೋಗಿಗಳಾಗಿದ್ದಾರೆ. ಉದ್ಯೋಗ ಪಡೆಯಲೂ ಕೂಡ 'ಮೆಣಸಿನಹಾಡ್ಯದ ಖ್ಯಾತಿ' ತೊಂದರೆ ಕೊಡುತ್ತಿದೆ.

ಗ್ರಾಮದಲ್ಲಿರುವ ಯುವಕರಿಗೆ ವಿವಿಧ ವೃತ್ತಿ ತರಬೇತಿ ನೀಡುವ ಯೋಜನೆ ಕೂಡ ಹಳ್ಳ ಹಿಡಿದಿದೆ. ಗ್ರಾಮದ ರಸ್ತೆ ಗುಣಮಟ್ಟ ಕೂಡ ಚೆನ್ನಾಗಿಲ್ಲ. ಅದಕ್ಕೇ ಇಲ್ಲಿನ ಜನರು ಭ್ರಮನಿರಸನಗೊಂಡಿದ್ದಾರೆ.

ನಕ್ಸಲರಾಗಿದ್ದು ಈಗ ಶರಣಾದರೆ ಅವರಿಗೆ ಎಲ್ಲ ಸೌಲಭ್ಯಗಳನ್ನು ನೀಡುವುದಾಗಿ ಸರ್ಕಾರ ಹೇಳುತ್ತದೆ. ಅವರಿಗೆ ಜಮೀನು ಕೊಡುತ್ತದೆ. ಒಂದು ಲಕ್ಷ ರೂಪಾಯಿ ಸಹಾಯ ನೀಡಲಾಗುತ್ತದೆ. ಒಂದು ಲಕ್ಷ ರೂಪಾಯಿ ಸಾಲವನ್ನೂ ಕೊಡಿಸಲಾಗುತ್ತದೆ. ಮನೆ ಕಟ್ಟಿಕೊಳ್ಳಲು ನೆರವು ನೀಡಲಾಗುತ್ತದೆ. ಆದರೆ ನಕ್ಸಲೀಯರಿಂದ ಹತನಾದ ವ್ಯಕ್ತಿಯ ಕುಟುಂಬಕ್ಕೆ ಯಾವುದೇ ಸೌಲಭ್ಯವನ್ನೂ ನೀಡುವುದಿಲ್ಲ. ನಕ್ಸಲರು ಸರ್ಕಾರದ ವಿರುದ್ಧ ಹೋರಾಟ ನಡೆಸಿದವರು. ಅವರು ಶರಣಾದರೆ ಸೌಲಭ್ಯ. ಯಾವ ತಪ್ಪನ್ನೂ ಮಾಡದ ವ್ಯಕ್ತಿಯನ್ನು ನಕ್ಸಲರು ಕೊಂದು ಹಾಕಿದರೆ ಆ ವ್ಯಕ್ತಿಯ ಕುಟುಂಬಕ್ಕೆ ಯಾವ ಸೌಲಭ್ಯವೂ ಸಿಗುವುದಿಲ್ಲ. ಇದು ಯಾವ ನ್ಯಾಯ ಎಂದು ಮೆಣಸಿನಹಾಡ್ಯ ಗ್ರಾಮಸ್ಥರು ಪ್ರಶ್ನೆ ಮಾಡುತ್ತಾರೆ.

ಮೆಣಸಿನಹಾಡ್ಯದ ಶೇಷಯ್ಯ ಅವರು ಅತ್ತಿಕುಡಿಗೆ ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದರು. ಶೇಷಯ್ಯ ಅವರ ಮನೆಗೆ ೩ಬಾರಿ ನಕ್ಸಲೀಯರು ಭೇಟಿ ನೀಡಿದ್ದರು. ಯಾವುದೇ ತೊಂದರೆ ಮಾಡಿರಲಿಲ್ಲ. ಆದರೆ ಸಾಕೇತ್‌ರಾಜನ್ ಹತ್ಯೆಯಾದ ನಂತರ ನಕ್ಸಲರಿಗೆ ಶೇಷಯ್ಯ ಅವರ ಬಗ್ಗೆ ಅನುಮಾನ ಬಂತು. ಪೊಲೀಸರಿಗೆ ಮಾಹಿತಿ ನೀಡುವವರು ಇವರೇ ಎಂದು ಅವರು ಭಾವಿಸಿದರು. ೨೦೦೫ರ ಮೇ ೧೭ರಂದು ರಾತ್ರಿ ೯ಕ್ಕೆ ಶೇಷಯ್ಯ ಅವರ ಮನೆ ಮೇಲೆ ದಾಳಿ ಮಾಡಿದ ನಕ್ಸಲರು ಶೇಷಯ್ಯ ಅವರನ್ನು ಹತ್ಯೆ ಮಾಡಿದರು.

ಅಂದಿನ ಘಟನೆಯನ್ನು ನೆನಪಿಸಿಕೊಂಡು ಶೇಷಯ್ಯ ಅವರ ಪತ್ನಿ ಕನ್ನಮ್ಮ ಕಣ್ಣೀರು ಹಾಕುತ್ತಾರೆ. 'ಅಂದು ನಮ್ಮ ಯಜಮಾನರು ಊಟಕ್ಕೆ ಕುಳಿತಿದ್ದರು. ಮಗಳು ಊಟ ಬಡಿಸುತ್ತಿದ್ದಳು. ಆಗ ೪ ಮಂದಿ ಸಶಸ್ತ್ರ ನಕ್ಸಲೀಯ ತಂಡ ಮನೆಯೊಳಕ್ಕೆ ನುಗ್ಗಿತು. ನಮ್ಮ ಯಜಮಾನರನ್ನು ದರದರನೆ ಎಳೆದುಕೊಂಡು ಮನೆಯ ಹೊರಕ್ಕೆ ಹೋದರು. ಮನೆಯ ಬಾಗಿಲುಗಳನ್ನು ಮುಚ್ಚಿದರು. ನಾನು ಮತ್ತು ನನ್ನ ಮೂವರು ಮಕ್ಕಳಿಗೆ ಏನು ಮಾಡಬೇಕು ಎನ್ನುವುದು ತಿಳಿಯಲಿಲ್ಲ. ಅವರಿಗೆ ಹೊಡೆಯಬೇಡಿ. ಬಿಟ್ಟು ಬಿಡಿ ಎಂದು ನಾವು ಕೂಗಿಕೊಳ್ಳುತ್ತಿದ್ದೆವು. ನಮ್ಮ ಕೂಗು ಚೀರಾಟ ಅವರ ಕಿವಿಗೆ ಬೀಳಲೇ ಇಲ್ಲ. ಮನೆಯ ಅಂಗಳದಲ್ಲಿಯೇ ಅವರನ್ನು ಹೊಡೆದು ಹೊಡೆದು ಸಾಯಿಸಿದರು. ಅವರ ಜೀವ ಹೋಗಿದೆ ಎನ್ನುವುದು ಗೊತ್ತಾದ ನಂತರವೇ ಅವರು ಅಲ್ಲಿಂದ ಕಾಲ್‌ಕಿತ್ತರು.

ನಕ್ಸಲರು ನಮ್ಮ ಯಜಮಾನರನ್ನು ಕೊಂದು ಹಾಕಿದ್ದು ಗೊತ್ತಾದ ನಂತರ ಪೊಲೀಸರು, ರಾಜಕಾರಣಿಗಳು ಎಲ್ಲಾ ಬಂದರು. ನಮಗೆ ಪರಿಹಾರ ನೀಡುವುದಾಗಿ ಪ್ರಕಟಿಸಿದರು. ಸಾಲ ಮನ್ನಾ ಮಾಡುವುದಾಗಿ ಹೇಳಿದರು. ಬಿಎಡ್ ಓದಿರುವ ನನ್ನ

ಮಗನಿಗೆ ಉದ್ಯೋಗ ಕೊಡಿಸುವ ಭರವಸೆ ನೀಡಿದರು. ಆದರೆ ಈವರೆಗೆ ಯಾವುದೇ ಭರವಸೆ ಈಡೇರಿಲ್ಲ.'

'ನನ್ನ ಮಗ ಬಿಎಬಿಎಡ್ ಮಾಡಿಕೊಂಡಿದ್ದಾನೆ. ಇಲ್ಲಿರುವ ಆಶ್ರಮ ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡುತ್ತಿದ್ದ. ನೇ ತರಗತಿಯ ಮಕ್ಕಳಿಗೆ ಕಲಿಸಲು ಬಿಎಡ್ ಮಾಡಿದವರು ಬೇಡ ಎಂದು ಬಿಡಿಸಿಬಿಟ್ಟರು. ಈಗ ಆತನಿಗೆ ಕೆಲಸ ಇಲ್ಲ. ನನಗೆ ವಿಧವಾ ವೇತನವನ್ನಾದರೂ ಕೊಡಿ ಎಂದು ಅರ್ಜಿ ಸಲ್ಲಿಸಿ ಸಾಕಾಗಿದೆ. ಇನ್ನೂ ಅದು ಕೂಡ ಬಂದಿಲ್ಲ' ಎಂದು ಅವರು ಗೋಳಿಡುತ್ತಾರೆ.

ಕನ್ನಮ್ಮ ಅವರ ಮಗಳಿಗೆ ಮದುವೆಯಾಗಿದೆ. ಇಬ್ಬರು ಮಕ್ಕಳ ಪೈಕಿ ಪ್ರವೀಣ್‌ಕುಮಾರ್ ಬಿಎಡ್ ಮಾಡಿದ್ದರೂ ಉದ್ಯೋಗ ಸಿಕ್ಕಿಲ್ಲ. ಇನ್ನೊಬ್ಬ ರವಿಚಂದ್ರ ೮ನೇ ತರಗತಿಯವರೆಗೆ ಓದಿದ್ದಾನೆ. ಗ್ರಾಮದಲ್ಲಿಯೇ ಅದು ಇದು ಕೆಲಸ ಮಾಡಿಕೊಂಡಿದ್ದಾರೆ. ಒಂದಿಷ್ಟು ಜಮೀನು ಇದೆ. ಅದು ವರ್ಷದ ಕೂಲಿಗೆ ಸಾಕಾಗುವುದಿಲ್ಲ. ಸರ್ಕಾರ ತಮ್ಮ ಕಡೆಗೂ ಒಮ್ಮೆ ನೋಡಲಿ ಎಂದು ಅವರು ಕಳೆದ ೭ ವರ್ಷದಿಂದ ಕಾಯುತ್ತಲೇ ಇದ್ದಾರೆ.

ಕೋವಿ ನಳಿಕೆಯಲ್ಲಿ ಹಕ್ಕಿಗಳು ಗೂಡು ಕಟ್ಟಲಿ!

ಕೋವಿಗಳ ನಳಿಕೆಯಲ್ಲಿ ಹಕ್ಕಿಗಳು ಗೂಡು ಕಟ್ಟಲಿ, ಜಿರಲೆಗಳು ಮರಿ ಹಾಕಲಿ, ಪಶ್ಚಿಮಘಟ್ಟದ ಕಾಡುಗಳಲ್ಲಿ ನೆತ್ತರು ಹರಿಯದಿರಲಿ, ಎಂದೆಂದೂ ಗುಂಡಿನ ಶಬ್ದ ಕೇಳದಿರಲಿ, ಕೋವಿಗಳು ಹೊಗೆ ಉಗುಳದಿರಲಿ. ಪೊಲೀಸರ ಬಳಿಯೂ ಕೋವಿಗಳಿವೆ. ನಕ್ಸಲರ ಬಳಿಯೂ ಕೋವಿಗಳಿವೆ. ಎಲ್ಲ ಕೋವಿಗಳೂ ಮೂಲೆ ಸೇರಲಿ.

ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಾನು ಓಡಾಡಿದ ಸಂದರ್ಭದಲ್ಲಿ ಒಟ್ಟಾರೆಯಾಗಿ ಅಲ್ಲಿನ ಜನರಲ್ಲಿ ಕಂಡುಬಂದ ಬಯಕೆ ಇದು. ಅವರು ಕನಸು ಕಾಣುವುದು ನೆಮ್ಮದಿಯ ಬದುಕನ್ನು. ಅವರಿಗೆ ಪೊಲೀಸರ ಹಿಂಸೆಯೂ ಬೇಡ. ನಕ್ಸಲರ ಕಿರಿಕಿರಿಯೂ ಬೇಡ. ಅವರ ಪಾಡಿಗೆ ಅವರನ್ನು ಬಿಟ್ಟರೆ ಸಾಕು ಎನ್ನುವ ಮನೋಭಾವ. 'ಸಾಕು ಈ ಅನುಮಾನದ, ಶಂಕೆಯ ಬದುಕು. ಅತ್ತ ಪೊಲೀಸರಿಗೂ ಇತ್ತ ನಕ್ಸಲೀಯರಿಗೂ ನಮ್ಮನ್ನು ಕಂಡರೆ ಅನುಮಾನ. ನಮಗೂ ಅಷ್ಟೆ ಯಾರನ್ನು ನಂಬುವುದು ಯಾರನ್ನು ಬಿಡುವುದು ಎನ್ನುವುದೇ ಗೊತ್ತಾಗುತ್ತಿಲ್ಲ' ಎಂದು ಅವರು ಕನವರಿಸುತ್ತಾರೆ.

ಮೆಣಸಿನಹಾಡ್ಯದ ಆಶ್ರಮ ಶಾಲೆಯ ಟೆರೇಸ್ ಮೇಲೆ ನಿಂತು ನಾನು ಸುಂದರ ಪರಿಸರ ನೋಡುತ್ತಿದ್ದಾಗ 'ಸುತ್ತಲೂ ನೋಡಿ ಸಾರ್. ಎಲ್ಲ ಬೋಳು ಗುಡ್ಡಗಳು. ಇಲ್ಲಿ ಎಲ್ಲವೂ ಪಾರದರ್ಶಕ. ಎಲ್ಲವೂ ಎಲ್ಲರಿಗೂ ಕಾಣಿಸುತ್ತದೆ. ಇಂತಹ ಸ್ಥಳದಲ್ಲಿ ನಕ್ಸಲರು ತರಬೇತಿ ನಡೆಸುತ್ತಿದ್ದಾರೆ ಎಂದು ಹೇಳಿದರೆ ನಂಬಲು ಸಾಧ್ಯನಾ ಸಾರ್' ಎಂದು ಒಬ್ಬರು ಹಿರಿಯರು ಪ್ರಶ್ನಿಸಿದರು.

'ಅದೆಲ್ಲಾ ಸರಿ. ಆದರೆ, ಇಲ್ಲಿಗೆ ನಕ್ಸಲರು ಬಂದು ಹೋಗುವುದಂತೂ ನಿಜ ತಾನೆ' ಎಂದು ನಾನು ಪ್ರಶ್ನೆ ಹಾಕಿದೆ. 'ಹಲವಾರು ಬಾರಿ ಬಂದು ಹೋಗಿದ್ದಾರೆ.

ಇಲ್ಲಿ ಕಾರ್ಯಾಚರಣೆ ಕೂಡ ನಡೆದಿದೆ. ನಕ್ಸಲರು ಹತರಾಗಿದ್ದಾರೆ. ಅಂದ ಮಾತ್ರಕ್ಕೆ ಇಲ್ಲಿರುವ ಎಲ್ಲರೂ ನಕ್ಸಲರು ಎನ್ನಲಾಗದು. ಮೆಣಸಿನಹಾಡ್ಯದ ಮಂದಿ ಎಂದರೆ ಹೊರ ಜಗತ್ತಿನವರಿಗೆ ಬೇರೆಯದೇ ಭಾವನೆ ಇದೆ. ಇದು ಎಂದು ಕೊನೆಯಾಗುವುದೋ ಗೊತ್ತಿಲ್ಲ' ಎಂದು ಉತ್ತರಿಸಿದರು. ನಾನು ಉತ್ತರಿಸದೆ ಟೆರೇಸ್‌ನಿಂದ ಕೆಳಕ್ಕೆ ಇಳಿದೆ. ಸಂಜೆಯಾಗುತ್ತಿತ್ತು. ನಾನು ವಾಪಸು ಹೊರಟು ನಿಂತಿದ್ದೆ.

ಆ ಗ್ರಾಮದ ಯುವಕರು ರಾತ್ರಿ ನಾನು ಅಲ್ಲಿಯೇ ಉಳಿಯುವಂತೆ ಬಲವಂತ ಮಾಡುತ್ತಿದ್ದರು. 'ನಾನು ಉಳಿಯಲು ಸಿದ್ಧ. ಆದರೆ ಕಾಡಿನಲ್ಲಿ ಭೂಗತರಾಗಿರುವ ನಕ್ಸಲರನ್ನು ನೀವು ಕರೆಸಬೇಕು' ಎಂದು ಷರತ್ತು ವಿಧಿಸಿದೆ. 'ಅಯ್ಯೋ ಇಲ್ಲಿ ಬಂದು ಅವರನ್ನು ಕರೆಸಿ ಎಂದರೆ ಅಷ್ಟು ಸುಲಭನಾ ಸಾರ್. ನಾವು ಕರೆದಾಗ ಅವರು ಬರುವುದಿಲ್ಲ' ಎಂದು ಒಬ್ಬರು ಉತ್ತರಿಸಿದರೆ ಇನ್ನೊಬ್ಬ, 'ಅವರನ್ನು ಕಾಣಬೇಕು ಎಂದರೆ ಇಲ್ಲಿ ಯಾಕೆ ಬರ್ತೀರ. ಬೆಂಗಳೂರಿನಲ್ಲಿಯೇ ಕೇಳಿದರೆ ಅವರು ಸಿಗುತ್ತಾರೆ. ಅವರ ಕೀಲಿಕೈ ಎಲ್ಲಾ ಬೆಂಗಳೂರಲ್ಲೇ ಇದೆ' ಎಂದು ಹೇಳಿಬಿಟ್ಟ.

ತಕ್ಷಣವೇ ಉಳಿದವರೆಲ್ಲರೂ ಎಚ್ಚರವಾದರು. 'ಆ ಹುಡುಗ ಏನೋ ಹೇಳ್ತಾನೆ. ಅದೆಲ್ಲ ನಂಬಬೇಡಿ. ನಕ್ಸಲರ ಬಗ್ಗೆ ನಮಗೆ ಏನೂ ಗೊತ್ತಿಲ್ಲ' ಎಂದು ಬಡಬಡಿಸಿದರು. ನಾನು ತಕ್ಷಣಕ್ಕೆ ಸುಮ್ಮನಾದೆ. ಆದರೆ ಮಾಹಿತಿಯ ಕೀಲಿಕೈ ವಾಸನೆ ನನಗೆ ಬಡಿಯುತ್ತಿತ್ತು.

ನಂತರ ನಾನು ಲೋಕಾಭಿರಾಮವಾಗಿ ಮಾತನಾಡುತ್ತಾ ಮುಂಜಾವು ಪತ್ರಿಕೆ ಸಂಪಾದಕ ಸಿರಿಮನೆ ನಾಗರಾಜ್ ಕೂಡ ನಕ್ಸಲರೊಂದಿಗೆ ಇದ್ದಾರೆ. ಅವರಿಗೆ ಈಗ ೬೦ಕ್ಕೂ ಹೆಚ್ಚು ವಯಸ್ಸಾಗಿರಬೇಕು. ನಿಲುಗುಳೀ ಪದ್ಮನಾಭ ಅವರಿಗೂ ಈಗ ಸಾಕಷ್ಟು ವಯಸ್ಸಾಗಿದೆ. ಕರ್ನಾಟಕದ ನಕ್ಸಲೀಯರಲ್ಲಿ ಅವರೇ ಹಿರಿಯರಿರಬೇಕಲ್ಲ ಎಂದು ಕೇಳಿದೆ. 'ಅವರು ವಯಸ್ಸಿನಲ್ಲಿ ಹಿರಿಯರಿರಬಹುದು. ಆದರೆ ಅವರೇ ಮುಖ್ಯಸ್ಥರಲ್ಲ. ಅಲ್ಲಿ ಸಾಮೂಹಿಕ ನಾಯಕತ್ವ ಇರುತ್ತದೆ. ಯಾರೋ ಒಬ್ಬರು ಎಲ್ಲ ತೀರ್ಮಾನ ಕೈಗೊಳ್ಳುವುದಿಲ್ಲ' ಎಂದು ಒಬ್ಬ ಉತ್ತರಿಸಿದ.

'ನಾಲ್ಕು ದಿನಗಳಿಂದ ನಕ್ಸಲ್ ಪ್ರಭಾವವಿರುವ ಪ್ರದೇಶಗಳಲ್ಲಿ ನಾನು ಓಡಾಡುತ್ತಿದ್ದೇನೆ. ಇಲ್ಲಿನ ಸಮಸ್ಯೆಗಳನ್ನು ಅರಿತಿದ್ದೇನೆ. ಈಗಾಗಲೇ ಸಾಕಷ್ಟು ಜಿಗಣೆಗಳು ಕಚ್ಚಿ ನನ್ನ ಕಾಲುಗಳು ಊದಿಕೊಂಡಿವೆ. ನಕ್ಸಲರು ಭೂಗತರಾಗಿ ಇದೇ ಕಾಡಿನಲ್ಲಿ ಹೇಗೆ ವಾಸ ಮಾಡುತ್ತಾರೆ. ರಾತ್ರಿ ಮಲಗಲು ಏನು ಉಪಾಯ ಮಾಡಿಕೊಂಡಿದ್ದಾರೆ. ಮಳೆ, ಚಳಿಯಿಂದ ಹೇಗೆ ರಕ್ಷಣೆ ಪಡೆಯುತ್ತಾರೆ' ಎಂದು ಪ್ರಶ್ನೆ ಮಾಡಿದೆ.

ಆಗಲೂ ಒಬ್ಬ ಆತುರ ಮಾಡಿ ಉತ್ತರ ಹೇಳಿದ. 'ಅಯ್ಯೋ ಅವರು ಯಾವಾಗಲೂ ಕಾಡಿನಲ್ಲಿಯೇ ಇರ್ತಾರೆ ಎಂದು ಹೇಗೆ ಭಾವಿಸುತ್ತೀರಿ. ಅವರು ಆಗಾಗ ನಾಡಿಗೆ ಬಂದು ಹೋಗ್ತಾರೆ. ಒಂದು ಬಿಳಿ ಪಂಚೆ, ಬಿಳಿ ಅಂಗಿ ಹಾಕಿಕೊಂಡು ಬಜರಂಗದಳದವರು ಹಾಕುವಂತೆ ಕುಂಕುಮದ ನಾಮ ಇಟ್ಟುಕೊಂಡು ಹೊರನಾಡು ಅಮ್ಮನ ಬಳಿಗೋ, ಶೃಂಗೇರಿ ಪೇಟೆಗೋ ಬಂದರೆ ಯಾರಿಗೆ ಗೊತ್ತಾಗುತ್ತದೆ. ಮಳೆ ಗಾಳಿ, ಚಳಿಯಿಂದ ರಕ್ಷಣೆ ಪಡೆಯಲು ಅವರ ಬಳಿ ಟೆಂಟ್‌ಗಳು ಇವೆ' ಎಂದು ಹೇಳಿದ.

ಮತ್ತೆ ಅದೇ ರಾಗ. 'ಅವನ ಮಾತು ನಂಬಬೇಡಿ. ಬಾಯಿಗೆ ಬಂದಿದ್ದು ಮಾತನಾಡುತ್ತಾನೆ' ಎಂದು ಕೆಲವರು ಸಮಜಾಯಿಷಿ ನೀಡಿದರೂ ಒಟ್ಟಾರೆ ಆ ಮಾತುಕತೆಯಿಂದ ತಿಳಿದುಬಂದಿದ್ದು ಇಷ್ಟು. ನಕ್ಸಲರು ಯಾವಾಗಲೂ ಕಾಡಿನಲ್ಲಿಯೇ ಇರುವುದಿಲ್ಲ. ನಾಡಿಗೆ ಬಂದು ಹೋಗುತ್ತಾರೆ. ಅವರಿಗೆ ಹಣಕಾಸಿನ ತೊಂದರೆಯೂ ಅಷ್ಟೇನೂ ಇಲ್ಲ. ಒಡಿಶಾ, ಛತ್ತೀಸಗಡ, ಆಂಧ್ರಪ್ರದೇಶ ಮತ್ತು ದೇಶದ ಬೇರೆ ಬೇರೆ ಭಾಗಗಳಲ್ಲಿರುವ ನಕ್ಸಲೀಯರಿಗೂ ಕರ್ನಾಟಕದ ಪಶ್ಚಿಮಘಟ್ಟದ ಕಾಡುಗಳಲ್ಲಿರುವ ನಕ್ಸಲೀಯರಿಗೂ ಸಂಪರ್ಕವಿದೆ. ಶಸ್ತ್ರಾಸ್ತ್ರಗಳು ಸರಬರಾಜು ಆಗುತ್ತವೆ. ಆದರೂ ಅವರು ಯಾರನ್ನೂ ಬೆದರಿಸುವುದಿಲ್ಲ. ದರೋಡೆ ಮಾಡುವುದಿಲ್ಲ ಎನ್ನುವ ಅನುಕಂಪ ಇಲ್ಲಿನ ಜನರಲ್ಲಿದೆ.

ಕಾಡಂಚಿನ ಗ್ರಾಮಗಳಲ್ಲಿರುವ ಬಹುತೇಕರಿಗೆ ಪೊಲೀಸರ ಬಗ್ಗೆ ಕೂಡ ಸಿಟ್ಟಿದೆ. ಪೊಲೀಸರ ಕಿರಿಕಿರಿಯಿಂದ ಅವರು ನೊಂದಿದ್ದಾರೆ. ಜಿಲ್ಲಾಡಳಿತ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನುವ ನೋವಿದೆ. 'ಇಲ್ಲಿಗೆ ಬರುವ ಎಲ್ಲ ಪೊಲೀಸ್ ಅಧಿಕಾರಿಗಳಿಗೆ ತಾವೊಂದು ಎನ್‌ಕೌಂಟರ್ ನಡೆಸಬೇಕು. ಆ ಮೂಲಕ ಮುಖ್ಯಮಂತ್ರಿ, ರಾಷ್ಟ್ರಪತಿ ಪದಕ ಪಡೆಯಬೇಕು ಎನ್ನುವ ಭ್ರಮೆ ಇರುತ್ತದೆಯೇ ವಿನಾ ನಕ್ಸಲರ ಸಮಸ್ಯೆಗೆ ಮೂಲ ಕಾರಣ ಏನು ಎಂದು ಹುಡುಕುವ ಮನಸ್ಸಿಲ್ಲ' ಎಂದು ಅವರು ದೂರುತ್ತಾರೆ.

'ಅಲ್ಲಿ ನಕ್ಸಲರು ಕಾಣಿಸಿಕೊಂಡರು ಎಂದು ಸುಮ್ಮನೆ ಗುಲ್ಲು ಹಬ್ಬಿಸುತ್ತಾರೆ. ನಂತರ ಕೂಂಬಿಂಗ್‌ಗೆ ಹೊರಡುತ್ತಾರೆ. ಇವೆಲ್ಲಾ ನಕ್ಸಲ್ ನಿಗ್ರಹ ಪಡೆಯ ಹುನ್ನಾರ' ಎಂದೂ ಅವರು ಆರೋಪಿಸುತ್ತಾರೆ. ಅವರ ಎಲ್ಲ ಮಾತುಗಳಲ್ಲಿ ಪೂರ್ಣ ಸತ್ಯ ಇಲ್ಲ. ಆದರೆ ಅರ್ಧ ಸತ್ಯವನ್ನಾದರೂ ಹುಡುಕುವ ಕೆಲಸವಾಗಬೇಕಿದೆ.

ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೇ ನಕ್ಸಲ್ ನಿಗ್ರಹ ಹೊಣೆ ಹೊರಿಸುವುದಕ್ಕಿಂತ ಇದಕ್ಕೊಂದು ಪ್ರತ್ಯೇಕ ವ್ಯವಸ್ಥೆ ಮಾಡಬೇಕಾಗಿದೆ. ವರ್ಗಾವಣೆ ಕಿರಿಕಿರಿ ಇಲ್ಲದ ವ್ಯವಸ್ಥೆ ಅದಾಗಬೇಕು. ಪ್ರಾಮಾಣಿಕ ಮತ್ತು ಜನರ ಸಮಸ್ಯೆ ಅರಿಯುವ ಅಧಿಕಾರಿಯನ್ನು ನೇಮಿಸಿದರೆ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟವೇನಲ್ಲ ಎನ್ನುವುದು ಅಲ್ಲಿನ ಜನರ ಅಭಿಮತ.

ಅಷ್ಟರಲ್ಲಾಗಲೇ ಕತ್ತಲೆ ಕವಿದಿತ್ತು. ಕೋವಿಯ ನಳಿಕೆಯಲ್ಲಿ ಹಕ್ಕಿ ಗೂಡು ಕಟ್ಟುವ ಕನಸುಗಳೊಂದಿಗೆ ನಾನು ಮೆಣಸಿನಹಾಡ್ಯ ಬಿಟ್ಟೆ.

* * *

(ಸಾಭಾರ / ಪ್ರಜಾವಾಣಿ)

ಕಾರ್ಪೋರೇಟ್ ಚಿಂತನೆ ಮತ್ತು ನೈತಿಕತೆ

– ಡಾ. ಎಲ್. ಶ್ರೀಧರಮೂರ್ತಿ

೨೦೧೧ರ ಕೊನೆಯ ಕೆಳ ತಿಂಗಳುಗಳಲ್ಲಿ ನಡೆದ ಒಂದೆರೆಡು ಜಾಗತಿಕ ಘಟನೆಗಳು ನಿಮ್ಮ ಗಮನಕ್ಕೆ ಬಂದಿರಬಹುದು. ಭೌಗೋಳಿಕ ಮತ್ತು ತಾತ್ವಿಕ ನೆಲೆಗಳಲ್ಲಿ ಈ ಘಟನೆಗಳು ಭಿನ್ನವಾಗಿದ್ದರೂ ಇವುಗಳ ಮೂಲೋದ್ದೇಶ ಒಂದೇ ಅಗಿದೆ. ಭೌಗೋಳಿಕ ಮತ್ತು ತಾತ್ವಿಕತೆಗಳಲ್ಲಿ ಏನ್ನೇ ಭಿನ್ನತೆ ಇದ್ದರೂ ಶ್ರೀಸಾಮಾನ್ಯನ ಆಶೋತ್ತರಗಳು ಜಗತ್ತಿನ ಎಲ್ಲ ಜಾಗದಲ್ಲೂ ಒಂದೇ- ಅರ್ಥಪೂರ್ಣ ಮತ್ತು ಸ್ವಾಭಿಮಾನದ ಜೀವನವನ್ನು ನಡೆಸುವುದು.

ಜಗತ್ತಿನ ಅತಿದೊಡ್ಡ ಅರ್ಥವ್ಯವಸ್ಥೆಯಾದ ಅಮೆರಿಕಾ ಸಂಯುಕ್ತ ಸಂಸ್ಥಾನವನ್ನೇ ತೆಗೆದುಕೊಳ್ಳಿ, ಪಶ್ಚಿಮ ತೀರದಲ್ಲಿ ಆಸಾಧಾರಣ ಪ್ರತಿಭಾಶಾಲಿಯಾದಂತಹ, ನಮ್ಮ ನಡುವೆ ಈಗ ಇಲ್ಲದಿರುವ, ಸ್ಟೀವ್ ಜಾಬ್ಸ್‌ನಂತಹ ವಿನ್ಯಾಸ ಎಂಜಿನಿಯರ್‌ನಿಂದ ಹಿಡಿದು ನಮ್ಮ ನಿಮ್ಮವರೇ ಆಗಿರಬಹುದಾದಂತಹ ಭಾರತೀಯ ಯಂತ್ರ ಮತ್ತು ತಂತ್ರ ಕುಶಲತೆಯ ಎಂಜಿನಿಯರ್‌ಗಳಿಂದ 'ತಾಂತ್ರಿಕ ಕ್ರಾಂತಿ' ನಿಶ್ಯಬ್ದವಾಗಿ ನಡೆಯುತ್ತಿದ್ದರೆ, ಪೂರ್ವ ತೀರದಲ್ಲಿ ಅಷ್ಟೇನು ನಿಶ್ಯಬ್ದವಾಗಿರದ 'ಸಾಮಾಜಿಕ ಕ್ರಾಂತಿ'ಯ ಮೊದಲ ಕಿಡಿಗಳು ಜಗತ್ತಿನಾದ್ಯಂತ ಪ್ರಭಾವ ಬೀರುತ್ತಿವೆ. ಈ 'ಸಾಮಾಜಿಕ ಕ್ರಾಂತಿ'ಯೇ 'ವಾಲ್ ಸ್ಟ್ರೀಟ್ ಮುತ್ತಿಗೆ' ಎನ್ನುವ ರೀತಿಯಲ್ಲಿ ವ್ಯಕ್ತವಾಗಿದೆ. ವಾಲ್‌ಸ್ಟ್ರೀಟ್ ಒಂದು ಉಪಮೆ ಅಥವಾ ಮೆಟಫರ್. ವಾಲ್‌ಸ್ಟ್ರೀಟ್ ತಮಗೆ ತಿಳಿದಿದುರವ ಹಾಗೆ ಜಗತ್ತಿನ ಅತಿ ಪ್ರತಿಷ್ಠಿತ ಮತ್ತು ಹಳೆಯ ಷೇರು ವಿನಿಮಯ ಮಾರುಕಟ್ಟೆಯಾದಂತಹ ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್ ಇರುವ ರಸ್ತೆ: ಒಂದರ್ಥದಲ್ಲಿ ಅಮೆರಿಕಾದ ಕಾರ್ಪೋರೇಟ್ ವಲಯವನ್ನು ಪ್ರತಿನಿಧಿಸುವ ಹಣಕಾಸಿನ ಶಕ್ತಿ ಕೇಂದ್ರ. ಈ ಕೇಂದ್ರಕ್ಕೇಕೆ ಅಮೆರಿಕಾದ ಶ್ರೀ ಸಾಮಾನ್ಯರು ಮುತ್ತಿಗೆ ಹಾಕಬೇಕು ಮತ್ತು ಈಚಳವಳಿಯ ಕೇಂದ್ರ ಸಂದೇಶ ಜಗತ್ತಿನಾದ್ಯಂತ ತತ್‌ಕ್ಷಣದಲ್ಲಿ ಸ್ವೀಕೃತವಾಗಿ ಅಲ್ಲಿಯೂ ಇಂತಹ ಮುತ್ತಿಗೆ – ನಮ್ಮ ದೇಶದಲ್ಲಿ 'ದಲಾಲ್ ಸ್ಟ್ರೀಟ್ ಮುತ್ತಿಗೆ' – ಆಗಿ ಪ್ರಾರಂಭವಾಗಬೇಕು? ಇದಕ್ಕೆ ಉತ್ತರವೂ ಸರಳ : ಜಗತ್ತಿನಾದ್ಯಂತ ಕಾರ್ಪೋರೇಟ್ ಉದ್ಯಮಗಳು, ಮುಕ್ತ ಕೂಡಬಂಡವಾಳ ಸಂಸ್ಥೆಗಳು ತಮ್ಮ ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ವಿಫಲರಾಗಿದ್ದಾರೆ. 'ಶೇಕಡ ೧ಭಾಗ ನೀವು ಶೇಕಡ ೯೯ ಭಾಗ ನಾವು' ಎನ್ನುವ ಈ ಚಳುವಳಿಯ ಕೇಂದ್ರ ಸಂದೇಶವನ್ನು ಅವಲೋಕಿಸಿ, ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಅನ್ವಯಿಸಿ ಹೇಳುವುದಾದರೆ ಕಳೆದ ಮೂರು ದಶಕಗಳಲ್ಲಿ ಈ ದೇಶದಲ್ಲಿ ನಿರ್ಮಾಣದಂತಹ ಸಂಪತ್ತಿನ ಅತ್ಯಧಿಕ ಪಾಲು ಅಲ್ಲಿನ ಜನಸಂಖ್ಯೆಯ ೧% ರಷ್ಟನ್ನು ತಲುಪಿ, ಉಳಿದ ೯೯% – ಮಧ್ಯಮ ಮತ್ತು ಕೆಳ ವರ್ಗದವರು, ಕಾರ್ಮಿಕರು ಮತ್ತು ನಿರ್ಮಾಣ ಕಾರ್ಯದಲ್ಲಿನ ಕೆಲಸಗಾರರು – ಈ ಸಂಪತ್ತಿನಲ್ಲಿ ಪಾಲನ್ನು ಪಡೆಯದೆ ಹತಾಶೆಯ ಹಂತವನ್ನು ತಲುಪಿ ಈ ಶಾಂತಿಯುತ ಪ್ರತಿಭಟನೆಯ

ದಾರಿಯನ್ನು ಹಿಡಿದಿದ್ದಾರೆ. ಅಂದರೆ ಅಮೆರಿಕಾದ ಆರ್ಥಿಕ ಶಕ್ತಿಯ ಕೇಂದ್ರೀಕರಣ ಮತ್ತು ಅಸಮಾನತೆಗೆ ಕಾರ್ಪೋರೇಟ್ ರಂಗದ ಸಮಾಜದಿಂದ ದೂರವಾದ ನೀತಿಯೇ ಕಾರಣ ಎಂದಂತಾಗುತ್ತದೆ. ಅಮೇರಿಕೆಯಲ್ಲಿ ನಿರ್ಮಾಣವಾದ ಸಂಪತ್ತಿನ ಬಹುಪಾಲು ಕಾರ್ಪೋರೇಟ್ ನಿರ್ವಾಹಕರಿಗೆ ಬ್ಯಾಂಕಿಂಗ್ ರಂಗದಲ್ಲಿನ ಮೇಲಿನ ಹಂತದ ವ್ಯಕ್ತಿಗಳಿಗೆ ಮತ್ತು ರಿಯಲ್ ಎಸ್ಟೇಟ್ ಕಂಪನಿಗಳ ಪಾಲಾಗಿದೆ. ಇಂತಹ ಅಸಮಾನತೆಯ ವಿರುದ್ಧದ ಪ್ರತಿಭಟನೆ ಸಹಜ ಮತ್ತು ಅನುಕರಣಿಯಿವಲ್ಲವೇ?

ಜಗತ್ತಿನ ಮತ್ತೊಂದು ಭಾಗದಲ್ಲಿ, ಅಂದರೆ ಅರಬ್ ರಾಷ್ಟ್ರಗಳಲ್ಲಿ ಉಂಟಾಗಿರುವ ತಲ್ಲಣ, ಸೈದ್ಧಾಂತಿಕವಾಗಿ ಬೇರೊಂದು ನೆಲೆಯಲ್ಲಿದ್ದರೂ ಅದರ ಉದ್ದೇಶವೂ ಇದೇ ಬಗೆಯದೆ. ಅದೇ ಅರಬ್ ಸ್ಪ್ರಿಂಗ್ ಅಥವಾ ಮಲ್ಲಿಗೆ ಕ್ರಾಂತಿ. ಟ್ಯುನಿಷಿಯ ಎಂಬ ಹೆಚ್ಚು ಕೇಳರಿಯದ ಪುಟ್ಟ ದೇಶದ ಯುವಕನೊಬ್ಬ ಮಹಮ್ಮದ್ ಅಬು ಆಝಿ ಆಝಿ ತನ್ನ ಹಣ್ಣಿನ ಅಂಗಡಿಯನ್ನು ಪೊಲೀಸರು ಧ್ವಂಸಗೊಳಿಸಿದ್ದನ್ನು ಪ್ರತಿಭಟಿಸಿ ಆತ್ಮಾಹುತಿ ಮಾಡಿಕೊಳ್ಳಲು ೨೦೧೦ರ ಡಿಸೆಂಬರ್ ೧೭ ರಂದು ಈ ಪತ್ರಿಭಟನೆಗೆ ಇಳಿದಿದ್ದ. ಹದಿನೇಳು ದಿನಗಳ ಕಾಲ ಸಾವು-ಬದುಕಿನ ಹೋರಾಟ ನಡೆಸಿ ೨೦೧೧ರ ಜನವರಿ ನಾಲ್ಕರಂದು ಕೊನೆಯುಸಿರೆಳೆದಾಗ ಪ್ರತಿಭಟನೆಯ ಬೆಂಕಿ ಇಡೀ ಅರಬ್ ಜಗತ್ತನ್ನು ಆವರಿಸಿತು. 'ನನ್ನ ಮಗ ಆತ್ಮಾಹುತಿಮಾಡಿಕೊಂಡಿದ್ದು ಹಣ್ಣಿನ ಅಂಗಡಿ ಕಳೆದುಕೊಂಡದ್ದಕ್ಕಲ್ಲ ಅದು ದುಡಿದು ತಿನ್ನುವ ಅವನ ಆತ್ಮಗೌರವವನ್ನು ಕಿತ್ತುಕೊಂಡದ್ದಕ್ಕಾಗಿ' ಎಂದು ಮೃತಯುವಕನ ತಾಯಿ ಮನ್ನಾಬಿಯಾ ಅಬು ಆಝಿ ಆಝಿ ಬೀದಿಗೆ ಇಳಿದು ಪ್ರತಿಭಟಿಸ ತೊಡಗಿದ್ದರು. ಮಲ್ಲಿಗೆ ಟ್ಯುನಿಷಿಯದ ರಾಷ್ಟ್ರೀಯ ಪುಷ್ಪ. ಅದಕ್ಕಾಗಿ ಈ ಹೆಸರು. ಈ ಪ್ರತಿಭಟನೆಯ ದಾಳಿಯ ಪರಿಣಾಮ ಈಜಿಪ್ಟಿನಲ್ಲಿ, ಲಿಬಿಯಾದಲ್ಲಿ ಸ್ಪಷ್ಟ ರೂಪದಲ್ಲಿ ವ್ಯಕ್ತವಾಗಿರುವುದನ್ನು ತಾವು ಗಮನಿಸುತ್ತಿರಬಹುದು. ಇವರೆಡು ಘಟನೆಗಳ ನೈತಿಕ ಮತ್ತು ವ್ಯಕ್ತವಾಗಿರುವ ಪಾಠ ಇಷ್ಟೆ : ಉದ್ಯಮಗಳು ಮತ್ತು ಉದ್ದಿಮೆಗಳನ್ನು ನಿಯಂತ್ರಿಸುತ್ತಿರುವ ಮಾಲೀಕರ ಚಿಂತನೆಯಲ್ಲಿ ಹಾಗು ಕಾರ್ಯಾಚರಣೆಗಳಲ್ಲಿ ಮೂಲಭೂತವಾದಂತಹ ಬದಲಾವಣೆ ಅನಿವಾರ್ಯ ಎಂಬುದು.

ನಾನು ಈವರೆಗೆ ಉಲ್ಲೇಖಿಸಿದ ಘಟನಾವಳಿಗೆ ಐತಿಹಾಸಿಕ ಚಿಂತನೆ ಇದೆಯೇ ಎಂದು ಕೇಳಿದರೆ ನೀಡಬಹುದಾದ ಸರಳ ಉತ್ತರ. 'ಹೌದು' ಎಂಬುದು. ತಮಗೆಲ್ಲರಿಗೂ ಬಹುಪಾಲು ನೆನಪಿರಬಹುದಾದ ಮಹಾತ್ಮಗಾಂಧಿಯವರ ಏಳು ಸಾಮಾಜಿಕ ಪಾಪಕೃತ್ಯಗಳು ಬಗ್ಗೆ ತಮ್ಮ ಗಮನ ಸೆಳೆಯುತ್ತಿದ್ದೇನೆ. ಈ ಏಳೆಂದರೆ:-

ತತ್ವಗಳಿಲ್ಲದ ರಾಜಕೀಯ
ದುಡಿಮೆಯಿಲ್ಲದ ಸಂಪತ್ತು
ಮನಸಾಕ್ಷಿಯಿಲ್ಲದ ಸಂತೋಷ
ಚಾರಿತ್ರ್ಯವಿಲ್ಲದ ಜ್ಞಾನ
ನೈತಿಕತೆಯಿಲ್ಲದ ವ್ಯವಹಾರ
ಮಾನವೀಯತೆಯಿಲ್ಲದ ವಿಜ್ಞಾನ
ತ್ಯಾಗವಿಲ್ಲದ ಪೂಜೆ

ನಂತರ ಇದಕ್ಕೆ ಮತ್ತೊಂದನ್ನು ಸೇರಿಸಲಾಯಿತು. ಅದೇ ಜವಾಬ್ದಾರಿಯಿಲ್ಲದ

ಹಕ್ಕುಗಳು ಇಂದಿನ ಕಾರ್ಪೋರೇಟ್ ವಲಯುದಲ್ಲಿನ ದುರಂತಗಳೆಲ್ಲಕ್ಕೂ ಗಾಂಧೀಜಿಯವರು ಗುರುತಿಸಿರುವ ನೈತಿಕತೆಯಿಲ್ಲದ ವ್ಯವಹಾರ ಕಾರಣವಲ್ಲವೇ?

ಜಗತ್ತಿನಾದ್ಯಂತ ವ್ಯಾಪಾರೀ ಸಂಸ್ಥೆಗಳ ಕಾರ್ಯವೈಖರಿಯಲ್ಲಿ ನೈತಿಕತೆಯ ಕೊರತೆ ಇದೆ ಎಂಬುದು ಹಲವಾರು ಕಾರ್ಪೋರೇಟ್ ಹಗರಣಗಳಿಂದ ಸಾಬೀತಾಗಿದೆ. ಇಂತಹ ಅಕ್ರಮಗಳು ಗಣಿಗಾರಿಕೆ ಸಂಬಂಧಿಸಿರಬಹುದು ಅಥವಾ ತರಂಗಾಂತರಗಳಿಗೆ ಸಂಬಂಧಿಸಿರಬಹುದು. ಕಾರ್ಪೋರೇಟ್ ಚಿಂತನೆ ದುರಾಸೆಯ, ಕೇವಲ ಲಾಭಗಳಿಸುವ ಸಂಸ್ಥೆಗಳು ಎನ್ನುವ ಭಾವನೆ ಬೇರೂರಿದೆ. ಜಾಗತೀಕರಣದ ವಿರುದ್ಧದ ಚಳುವಳಿ ಒಂದರ್ಥದಲ್ಲಿ ಬೃಹತ್ ಕಂಪನಿಗಳ ವಿರುದ್ಧದ ಚಳುವಳಿ ಎನ್ನಬಹುದು. ಇಂತಹ, ಸಂದೇಹ ಮತ್ತು ನಂಬಿಕೆಗೆ ಜಗತ್ತಿನಾದ್ಯಂತ ಹಂಚಿರುವ ಬಂಡವಾಳಶಾಯಿ ವ್ಯವಸ್ಥೆಯಲ್ಲಿ ಏನೋ ತಪ್ಪಿರಬೇಕು ಎಂಬುವ ಮೂಲಾಂಶದಿಂದ ಉಂಟಾಗಿದೆ ಎನ್ನಬಹುದು.

ಆರ್ಥಿಕ ಮತ್ತು ವ್ಯಾವಹಾರಿಕ ಚಿಂತನೆಗಳ ಪ್ರಾರಂಭಿಕ ಚಿಂತನೆಗಳತ್ತ ಸ್ವಲ್ಪ ಗಮನಹರಿಸೋಣ: ಅರ್ಥಶಾಸ್ತ್ರದ ಪ್ರಾಥಮಿಕ ಸಿದ್ಧಾಂತಗಳು ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಅಭಿವೃದ್ಧಿಯಾದಂತವು ವಾಸ್ತವವಾಗಿ ಕೈಗಾರಿಕಾ ಕ್ರಾಂತಿಯ ಸೈದ್ಧಾಂತಿಕ ತಳಹದಿಯಾಗಿ ಅರ್ಥಶಾಸ್ತ್ರದ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟು ಪ್ರಾರಂಭಿಕ ಅರ್ಥಶಾಸ್ತ್ರದ ಮಾದರಿಗಳು ಕೈಗಾರಿಕಾ ಅರ್ಥವ್ಯವಸ್ಥೆಗೆ ಒಂದು ಚೌಕಟ್ಟನ್ನು ಒದಗಿಸಿದವು. ಈ ಚಿಂತನೆಯಲ್ಲಿ ಗಮನಾರ್ಹ ಬದಲಾವಣೆಗಳಾಗಿದ್ದರೂ, ಹೊಸ ಚಿಂತನೆಯಿಂದ ಶ್ರೀಮಂತಗೊಂಡಿದ್ದರೂ, ಕೈಗಾರಿಕೆ ಮತ್ತು ಯಾಂತ್ರಿಕತೆಯ ಉಪಮೆಗಳನ್ನು ಬಳಸಿ ಅರ್ಥವ್ಯವಸ್ಥೆಯ ವೈಖರಿಯನ್ನು ವಿವರಿಸುತ್ತಿದ್ದಾರೆ. ಉತ್ಪಾದನೆಯ 'ತ್ರಿಪಾದ'ವನ್ನೇ ತೆಗೆದುಕೊಳ್ಳಿ ಶ್ರಮ, ಭೂಮಿ ಮತ್ತು ಬಂಡವಾಳವನ್ನು ಉದ್ದಿಮೆದಾರ ಉತ್ಪಾದನೆಯ ಪ್ರಕ್ರಿಯೆಯಲ್ಲಿ ತೊಡಗಿಸಿ, ಈ ತ್ರಿವಳಿಗಳ ಮೂಲಕ ಲಾಭವೆನ್ನುವ ಗುರಿಯನ್ನು ಸಾಧಿಸಲಾಗುತ್ತಿದೆ. ವ್ಯಾಪಾರ ಒಂದು ಯಾಂತ್ರಿಕ ಕ್ರಿಯೆ, ಯಂತ್ರದ ಒಂದು ತುದಿಯಲ್ಲಿ ಶ್ರಮ ಭೂಮಿ ಮತ್ತು ಬಂಡವಾಳವನ್ನು ಬಳಸುತ್ತಿದ್ದಂತೆ ಲಾಭವು ಹೊರಬರುತ್ತದೆ! ಈ ಬಗೆಯಾದ ಚಿಂತನೆ ೨೧ ಶತಮಾನದ ಅಭಿವೃದ್ಧಿ ಚಿಂತನೆ ಮತ್ತು ಆಶೋತ್ತರಗಳಿಂದ ತುಂಬಾ ದೂರ ಎಂಬುದನ್ನು ವಾಲ್‌ಸ್ಟ್ರೀಟ್ ಮುತ್ತಿಗೆ ಮತ್ತು ಅರಬ್ ಸ್ಪ್ರಿಂಗ್ ಸ್ಪಷ್ಟಪಡಿಸಿದೆಯಲ್ಲವೇ?

ಹಾಗಾದರೆ ಈ ಶತಮಾನದಲ್ಲಿ ಅದೆಂತಹ ಚಿಂತನೆಯನ್ನು ಕಾರ್ಪೋರೇಟ್ ಉದ್ಯಮಗಳು ಅಳವಡಿಸಿಕೊಳ್ಳಬೇಕು ಎಂಬುದಕ್ಕೆ ಸರಳ ಮತ್ತು ನೇರ ಉತ್ತರವಿಲ್ಲದಿದ್ದರೂ ಅದು ಸಮಾಜಮುಖಿಯಾಗಿರಬೇಕು, ನೈತಿಕ ನೆಲೆಗಟ್ಟಿನಲ್ಲಿ ಭದ್ರವಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ.

ವ್ಯಾಪಾರದ ಉದ್ದೇಶವೇನು? ಎಂಬುವ ಸರಳ ಪ್ರಶ್ನೆಯನ್ನು ಬಹಳಷ್ಟು ವ್ಯಾಪಾರಗಾರರು ಕೇಳಿಕೊಂಡಿಲ್ಲವೇನೋ ಎಂದೆನಿಸುತ್ತದೆ. ಮಿಕ್ಕೆಲ್ಲ ರಂಗಗಳಿಗೂ ಇಂತಹ ಉದ್ದೇಶಗಳಿರುವಾಗ ವ್ಯಾಪಾರೋದ್ಯಮಕ್ಕೇಕಿಲ್ಲ? ಒಬ್ಬ ವೈದ್ಯ ಅಥವಾ ಆಸ್ಪತ್ರೆಯ ಗುರಿಯೇನು? ಅವರ ಗುರಿ ಅತ್ಯಂತ ಹೆಚ್ಚು ಲಾಭಗೋಳಿಸುವುದಾ? ಇಂತಹ ಚಿಂತನೆಯನ್ನು ವೈದ್ಯಕೀಯ ಕಾಲೇಜುಗಳು ಬೋಧಿಸುವುದಿಲ್ಲ. ಅನಾರೋಗ್ಯದಲ್ಲಿರುವ ವ್ಯಕ್ತಿಯನ್ನು ಆರೋಗ್ಯವಂತನನ್ನಾಗಿ ಮಾಡು ಎನ್ನುತ್ತದೆ ಈ ವೃತ್ತಿ. ಇಂತಹ

ಉದಾಹರಣೆಯನ್ನು ಶಿಕ್ಷಕ ವೃತ್ತಿಗೆ ಹಾಗೂ ಇತರ ಕ್ಷೇತ್ರಗಳಿಗೂ ವಿಸ್ತರಿಸಬಹುದು. ಹೀಗೆ ಎಲ್ಲ ವೃತ್ತಿಗಳೂ 'ಸಾರ್ವಜನಿಕ ಹಿತ'ಕ್ಕೆ ಒತ್ತು ನೀಡಿ, ಸ್ವಹಿತಕ್ಕಿಂತ ಹೆಚ್ಚಿನ ಉದ್ದೇಶವನ್ನು ಹೊಂದಿವೆ. ವ್ಯಾಪಾರಕ್ಕೆ, ಕಾರ್ಪೋರೇಟ್ ವಲಯಕ್ಕೆ ಏಕೆ ಈ ತತ್ವ ಅನ್ವಯಿಸುವುದಿಲ್ಲ?

ಇತ್ತೀಚಿನ ಅಧ್ಯಯನಗಳ ಪ್ರಕಾರ ಉದ್ದಿಮೆಯನ್ನು ಪ್ರಾರಂಭಿಸಲು ಲಾಭಗಳಿಸುವಿಕೆ ಪ್ರಧಾನ ಉದ್ದೇಶವಾಗಿರದೆ. ಇತರ ಅಂಶಗಳು ಪ್ರೇರಣೆಯನ್ನು ನೀಡಿವೆ ಇಂತಹ ಕೆಲವೆಂದರೆ:-

ತಮ್ಮ ಆತ್ಮಾಭಿಮಾನ ಅಥವಾ ಸ್ವಾಭಿಮಾನ

ತಮ್ಮ ಸಾಮರ್ಥ್ಯವನ್ನು ಕುಟುಂಬಕ್ಕೆ, ಸ್ನೇಹಿತರಿಗೆ ಸಮಾಜಕ್ಕೆ ತೋರಿಸಬೇಕೆಂಬ ಉತ್ಕಟತೆ.

ವ್ಯಕ್ತಿಯಲ್ಲಿರುವ ಸೃಜನಶೀಲತೆ

ಆದರ್ಶಗಳಿಂದ ಪ್ರೇರಣೆ ಉಂಟಾಗಿರಬಹುದು ಅಥವಾ

ಕೇವಲ ಸಂತೋಷಕ್ಕಾಗಿ ಪ್ರಾರಂಭಿಸಬಹುದು.

ಮೂಲದಲ್ಲಿ ಲಾಭಗಳಿಸುವಿಕೆ ಇದ್ದರೂ ನಾನು ಉಲ್ಲೇಖಿಸಿರುವ ವ್ಯಕ್ತಿಗಳ ಸಂಖ್ಯೆಯೂ ಹೆಚ್ಚುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಅಮೇರಿಕದಲ್ಲಿ ಲಾಭಕ್ಕಿಂತ ಭಿನ್ನ ಉದ್ದೇಶವನ್ನು ಹೊಂದಿರುವ ೨೯ ಕಂಪನಿಗಳ ಅಧ್ಯಯನ ಮಾಡಿರುವ ಪುಸ್ತಕವನ್ನು ಉಲ್ಲೇಖಿಸಬಹುದು. ಭಾರತೀಯ ಸಂಜಾತರಾದಂತಹ ರಾಜೇಂದ್ರ ಸಿಸೋಡಿಯ ಮತ್ತು ಜಗದೀಶ್ ಎನ್.ಶೇಟ್‌ರವರು, ಡೇವಿಡ್ ಎಲ್ಫ್ ಜೊತೆಗೂಡಿ ೨೦೦೭ರಲ್ಲಿ "Firms of Endeavment, How World Class Companies Profit from Passion and Purpose" ಎಂಬುವ ಗ್ರಂಥದಲ್ಲಿ ಜಾಗೃತ ಬಂಡವಾಳ ವ್ಯವಸ್ಥೆ ಎಂಬುವ ಹೊಸ ಕಾರ್ಪೋರೇಟ್ ಮಾದರಿಯನ್ನು ಮುಂದಿಟ್ಟಿದ್ದಾರೆ. ಜಾಗೃತ ಎನ್ನುವುದರ ಬದಲು ಮನಸಾಕ್ಷಿಯ ಬಂಡವಾಳ ವ್ಯವಸ್ಥೆ ಎನ್ನಬಹುದೇನೋ! ಬಂಡವಾಳಶಾಹಿ ವ್ಯವಸ್ಥೆಗೆ ಹೊಸ ತಿರುವು ನೀಡುವಂತಿದ್ದು, ಕೇವಲ ಲಾಭಗಳಿಸುವಿಕೆ ಉದ್ದೇಶವಿರದೆ ಕಾರ್ಪೋರೇಟ್ ಚಿಂತನೆ ಸಮಾಜಮುಖಿಯಾಗಿರಬೇಕು ಎಂಬುದೇ ಇದರ ತಿರುಳು. ಸಂಕ್ಷಿಪ್ತವಾಗಿ SPICEE ಮಾದರಿ ಎಂದೇ ಹೆಸರಾಗಿರುವ ಈ ಚಿಂತನೆಯಲ್ಲಿ ಸಮಾಜ, ಪಾಲುದಾರರು, ಹೂಡಿಕೆದಾರರು, ಬಳಕೆದಾರರು, ಉದ್ಯೋಗಿಗಳು ಮತ್ತು ಪರಿಸರಗಳ ನಡುವ ಸಮನ್ವಯತೆ ತರುವಂತಿರಬೇಕು ಎನ್ನುತ್ತದೆ ಈ ಅಧ್ಯಯನ

ಈ ಚಿಂತನೆಯಲ್ಲಿನ ತ್ರಿಪಾದಗಳೆಂದರೆ:-

೧.ಕಾರ್ಪೋರೇಟ್‌ಗಳಿಗೆ ಲಾಭಗಳಿಸುವ ಗುರಿಗಿಂತ ಹೆಚ್ಚಿನ ಉದ್ದೇಶವಿದೆ, ಅಂತರಾವಲಂಬನೆ ಇಂತು ಒಂದು ಧ್ಯೇಯ.

೨.ಕಂಪನಿಗಳು ಉದ್ಯೋಗಿಗಳ ನಿಷ್ಠೆಯನ್ನು ಗಳಿಸಬೇಕು ಮತ್ತು

೩.ದೂರದೃಷ್ಟಿಯಿರುವ ವಿಶ್ವಸನೀಯ ನಾಯಕತ್ವ

ಈ ಉದ್ದೇಶಗಳು ನೈತಿಕವಾಗಿ ನ್ಯಾಯಯುತ ಎನ್ನಿಸುವುದಿಲ್ಲವೇ? ೧೯೨೫ರಲ್ಲಿ ಮಹಾತ್ಮಗಾಂಧಿಯವರ ಹೇಳಿಕೆಗೆ ಪುನರ್ಜನ್ಮ ಕೊಟ್ಟಂತಾಗಲಿಲ್ಲವೇ? ಯೋಚಿಸಿ!

ಜನಪದ ನಿಲಯದ ಅಂತರಂಗದಲ್ಲಿ.. ೧೦೮

- ಸುರೇಂದ್ರ ಕೌಲಗಿ



ಹಳ್ಳಿಯ ವಯಸ್ಕ ಅಂಗವಿಕಲರು ನಗರಕ್ಕೆ ವಲಸೆ ಹೋಗದಂತೆ ಮಾಡಲು ಮತ್ತು ಹಳ್ಳಿಯಿಂದ ಬಂದವರು ವ್ಯವಸಾಯ ಮತ್ತು ಗ್ರಾಮೋದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಳ್ಳಿಯಲ್ಲೇ ತಮ್ಮ ತಂದೆ-ತಾಯಿಗಳ ಜತೆ ಹೊಲಮನೆ ರಾಸುಗಳ ಜತೆ ನೆಲಸಿ ಸುಖಜೀವನ ನಡೆಸುವಂತೆ ಮಾಡುವ ಉದ್ದೇಶದಿಂದ ಸುಮಾರು ೨೦ ಎಕರೆ ವಿಶಾಲ ಭೂಮಿಯಲ್ಲಿ ಹೊಸ ಜೀವನ ದಾರಿ ಎಂಬ ಕೇಂದ್ರವನ್ನು ಪ್ರಾರಂಭಿಸಲಾಯಿತು. ಅದು ನಿರೀಕ್ಷಿಸಿದಂತೆ ಆಗಲಿಲ್ಲ. ಕಾರಣವೇನೆಂದರೆ ಗ್ರಾಮೀಣ ಅಂಗವಿಕಲ ವಯಸ್ಕರಲ್ಲಿಯೂ ನಗರ ಜೀವನದ ಆಕರ್ಷಣೆಯ ಸೆಳತ ಬಲವಾಗಿತ್ತು. ಆ ಆಸೆಯ ಎದಿರು ಹಳ್ಳಿಯ ಜೀವನದ ವಾಸದ ಪುನರ್ವಸತಿ ಕಾರ್ಯ ಸುಲಭವಾಗಲಿಲ್ಲ. ಅಥವಾ ಸಂಸ್ಥೆಗೆ ಆ ಉದ್ದೇಶವನ್ನು ನೆರವೇರಿಸುವುದರಲ್ಲಿ ಬೇಕಾದ ಬಂಡವಾಳ, ಜ್ಞಾನ, ಸಂಪನ್ಮೂಲ ಇಲ್ಲದೇ ಅದು ವಿಫಲವಾಗಿರಬಹುದು. ಯಾವುದೇ ಕಾರ್ಯಕ್ರಮ ಸಫಲವಾಗಲೀ, ವಿಫಲವಾಗಲೀ ಅದು ಗೊತ್ತಾಗುವ ಮೊದಲು ಕಟ್ಟಡಗಳ ನಿರ್ಮಾಣವಂತೂ ಅಗತ್ಯವಾಗಿರುತ್ತದೆ. ಹೊಸ ಜೀವನ ದಾರಿಯ ಕೇಂದ್ರದಲ್ಲಿ ನೆಲೆಸಲು ಅಂಗವಿಕಲರು ಬರುವ ಮೊದಲು ಒಂದು ಸಾಮಾನ್ಯ ಮಣ್ಣಿನ ಕಟ್ಟಡ ಕಟ್ಟಲಾಯಿತು. ಅದು ಪುಟದ ಮಣ್ಣಿನ ಗೋಡೆಯ ಮಂಗಳೂರು ಹೆಂಚಿನ ಮನೆ. ಅದರಲ್ಲಿ ಒಂದು ಭಾಗದಲ್ಲಿ ದನಗಳನ್ನು ಕಟ್ಟಲು ಕೊಟ್ಟಿಗೆ ಮನೆ. ನೆಲಕ್ಕೆ ಚಪ್ಪಡಿಗಳನ್ನು ಹಾಕಲಾಗಿತ್ತು. ವಾಸ ಮತ್ತು ಬಚ್ಚಲು ಮನೆ ಬೇರ್ಪಡಿಸಲು ಕೈಒತ್ತಿನ ಯಂತ್ರದಿಂದ ತಯಾರಾದ ಹಸಿ ಇಟ್ಟಿಗೆಗಳಿಂದ ಗೋಡೆಯನ್ನು ಹಾಕಲಾಗಿತ್ತು. ಆ ಮನೆಯಲ್ಲಿ ಪಿ.ಎಲ್. ಕುಮಾರಸ್ವಾಮಿ, ಹನುಮಂತ, ರಾಚಪ್ಪ, ನರಸಿಂಹ ಮತ್ತು ಇನ್ನು ಕೆಲವರು ಇರಲು ಪ್ರಾರಂಭಿಸಿದರು. ಅಷ್ಟು ಹೊತ್ತಿಗೆ ಸರ್ವಿಸ್ ಸಿವಿಲ್ ಇಂಟರ್‌ನ್ಯಾಷನಲ್ ಎಂಬ ಸಂಸ್ಥೆಯ ಶಿಬಿರವೊಂದು ಹೊಸ ಜೀವನ ದಾರಿ ಕೇಂದ್ರದಲ್ಲಿ ಪ್ರಾರಂಭವಾಯಿತು. ಅದು ಅಂತಾರಾಷ್ಟ್ರೀಯ ಶಿಬಿರವಾಗಿದ್ದರಿಂದ ಜಗತ್ತಿನ ಹಲವಾರು ಬೇರೆ ಬೇರೆ ದೇಶಗಳಿಂದ ಸ್ವಯಂ ಸೇವಕರು ಬಂದಿದ್ದರು. ಈ ಶಿಬಿರಕ್ಕೆ ಮಾರ್ಟಿನ್ ಎಂಬ ಇಂಗ್ಲಿಷ್ ಮನುಷ್ಯ ಮುಖಂಡನಾಗಿದ್ದ. ಇವನ ಹೆಂಡತಿಯೂ ಕೂಡ ಓರ್ವ ಶಿಬಿರಾರ್ಥಿಯಾಗಿದ್ದಳು. ಜೊತೆಗೆ ಅವಳು ಮೂರ್‍ನಾಲ್ಕು ತಿಂಗಳ ಬಸುರಿ. ಆದರೂ ತುಂಬ ಕಷ್ಟಕರ ಕೆಲಸಗಳನ್ನು ಶ್ರಮದಾನದ ರೂಪದಲ್ಲಿ ಎಲ್ಲರಂತೆ ಅವಳೂ ಕೆಲಸ ಮಾಡಬೇಕಾಗಿತ್ತು. ಅವಳ ಗಂಡ ಮುಖಂಡನಾಗಿದ್ದರೂ ಅವಳಿಗೆ ಕೆಲಸದ ವಿಷಯದಲ್ಲಿ ಯಾವ ರಿಯಾಯಿತಿಯನ್ನು ಕೊಡುತ್ತಿರಲಿಲ್ಲ. ಈ ಶಿಬಿರದ ವಿದ್ಯಾರ್ಥಿಗಳು ಅದೇ ಸಾಮಾನ್ಯ ಮಣ್ಣು ನೆಲದ

ಮನೆಯಲ್ಲಿಯೇ ಊಟ ಮಾಡಿ ಮಲಗುತ್ತಿದ್ದರು. ಆ ಮನೆಯನ್ನು ಹೊಸ ಜೀವನ ದಾರಿ ಕೇಂದ್ರದ ಸಮೀಪದಲ್ಲೇ ಇದ್ದ ಹೊಸಳ್ಳಿ ಗ್ರಾಮದ ಕೆಲಸಗಾರರನ್ನು ಉಪಯೋಗಿಸಿ ಕಟ್ಟಲಾಯಿತು. ಮನೆಯ ಛಾವಣಿಗೆ ಬೇಕಾದ ಮರಮುಟ್ಟು, ಹಂಚು ಇವುಗಳನ್ನು ಮಂಡ್ಯದಿಂದ ತರಲಾಯಿತು. ಸುಮಾರು ೩೦x೪೦ ಅಡಿಯ ಮನೆಯನ್ನು ಕಟ್ಟಲು ಆಗಿನ ಕಾಲಕ್ಕೆ ಐದು ಸಾವಿರ ರೂಪಾಯಿ ಖರ್ಚಾಗಿರಬಹುದು. ಮುಂದೊಂದು ದಿನ ಮೇಲುಕೋಟೆ–ಚಿನಕುರಳಿ ರಸ್ತೆಗೆ ಎದುರಾಗಿ ಬಾಗಿಲನ್ನು ಕೂಡಿಸಲಾಯಿತು. ಅಲ್ಲಿಯೇ 'ನಮ್ಮಂಗಡಿ' ಪ್ರಾರಂಭಿಸಲಾಯಿತು. ಕಾಲಕ್ರಮೇಣ ವಯಸ್ಕ ಬುದ್ಧಿ ಮಾಂದ್ಯ ಹುಡುಗರಿಗೂ ಪುನರ್ವಸತಿ ಕೇಂದ್ರವನ್ನು ಪ್ರಾರಂಭಿಸಲಾಯಿತು. ಬುದ್ಧಿಯಿಂದ ಸಬಲರಾದ ಅಂಗವಿಕಲರು ದೇಹದಿಂದ ಸಬಲರಾಗಿದ್ದ ಬುದ್ಧಿ ಮಾಂದ್ಯ ಯುವಕರನ್ನು ಜೊತೆಗೂಡಿಸಿ ಒಂದು ಸಂಘ ಶಕ್ತಿ ನಿರ್ಮಿಸಿ ಅವರಿಬ್ಬರು ಸಮಾಜೋಪಯೋಗಿ ವ್ಯಕ್ತಿಗಳಾಗುವಂತೆ ಮಾಡುವ ಪ್ರಯತ್ನ ಪ್ರಾರಂಭವಾಯಿತು. 'ಜನಪದ ಸೇವಾ ಟ್ರಸ್ಟ್'ನ ಈ ಎಲ್ಲ ಕಾರ್ಯಕ್ರಮಗಳನ್ನು ಗಮನಿಸುತ್ತಿದ್ದ ಟ್ರಸ್ಟಿನ ಅಭಿಮಾನಿ ಬೆಂಗಳೂರಿನ ಕೆ.ಎಸ್.ನಾರಾಯಣಸ್ವಾಮಿಯವರು ತಮ್ಮ ಭಾವನವರಾದ ಹೊಳೆನರಸೀಪುರದ ಜಿ.ವೆಂಕಟಸುಬ್ಬಯ್ಯನವರು ಮತ್ತು ಮಾವನವರಾದ ವೆಂಕಟರಾಮಯ್ಯ ಮತ್ತು ಅತ್ತೆಯವರಾದ ನಂಜಮ್ಮನವರ ಹೆಸರಿನಲ್ಲಿ ಒಂದು ಮನೆ ಕಟ್ಟಲು ಧನಸಹಾಯ ಕೊಡಿಸಿದರು. ಅದು ಸುಮಾರು ಇಪ್ಪತ್ತು ಸಾವಿರ ರೂಪಾಯಿಯಷ್ಟಿರಬಹುದು. ಆ ಮನೆಯವರು ರಾಧೇಶ್ಯಾಮ್ ಎಂದು ಹೆಸರಿಡಲು ಕೋರಿದರು. ಈ ಮನೆಯನ್ನೂ ಸಹ ಸರ್ವಿಸ್ ಸಿವಿಲ್ ಇಂಟರ್‌ನ್ಯಾಷನಲ್ ಸಂಸ್ಥೆಯ ಶ್ರಮದಾನದ ಶಿಬಿರವೊಂದನ್ನು ಏರ್ಪಡಿಸಿ ಕಟ್ಟಲಾಯಿತು. ಈ ಕೆಲಸದಲ್ಲಿ ಕುಮಾರಸ್ವಾಮಿ, ಹನುಮಂತ, ರಾಚಪ್ಪ, ನರಸಿಂಹ ಮತ್ತು ಇನ್ನು ಕೆಲವಾರು ಕರುಣಾಗೃಹದ ಹಿರಿಯ ವಿದ್ಯಾರ್ಥಿಗಳು ಸಹ ಶ್ರಮದಾನ ಮಾಡಿದರು. ಇದಾದ ಹಲವಾರು ವರ್ಷಗಳ ನಂತರ ಅದೇ ಮನೆಯನ್ನು ಎಡಿನ್‌ಬರೋ ವಿಶ್ವವಿದ್ಯಾಲಯದ 'ಹೆಲ್ಪ್' ಸಂಸ್ಥೆಯ ಧನಸಹಾಯ ಮತ್ತು ಅದೇ ಸಂಸ್ಥೆಯ ವಿದ್ಯಾರ್ಥಿಗಳ ಶ್ರಮದಾನದ ಮೂಲಕ ನವೀಕರಿಸಲಾಯಿತು. ಈ ರಾಧೇಶ್ಯಾಮ್ ಹೆಸರಿನ ಮನೆ ಬಹಳ ಉಪಯುಕ್ತವಾಗಿದೆ. ಅನೇಕ ಮಹನೀಯರು ಈ ಮನೆಯಲ್ಲಿ ಇದ್ದು ಹೋಗಿದ್ದಾರೆ. ರಾಧೇಶ್ಯಾಮ್ ಮನೆಯನ್ನು ನೋಡಿದಾಗಲೆಲ್ಲಾ ವೆಂಕಟಸುಬ್ಬಯ್ಯ ಮತ್ತು ನಾರಾಯಣಸ್ವಾಮಿಯವರ ನೆನೆಪು ಬರುತ್ತದೆ. ಮುಂದೆ ಇದೇ ಎಡಿನ್‌ಬರೋ ವಿಶ್ವವಿದ್ಯಾಲಯದ ಹೆಲ್ಪ್ ಸಂಘಟನೆಯ ವಿದ್ಯಾರ್ಥಿಗಳು ಧನಸಹಾಯ ಮತ್ತು ಶ್ರಮದಾನದ ಮೂಲಕ ಇನ್ನೂ ಮೂರ್‍ನಾಲ್ಕು ಕಟ್ಟಡಗಳ ನಿರ್ಮಾಣಕ್ಕೆ ಸಹಕಾರ ನೀಡಿದರು. ಅವುಗಳಲ್ಲಿ ಒಂದರಲ್ಲಿ ಇಂದು ನೇಯ್ಗೆ ಕೇಂದ್ರ ನಡೆಯುತ್ತಿದೆ. ಇನ್ನೊಂದರಲ್ಲಿ ಗೋಶಾಲೆ ಇದೆ. ಮತ್ತೊಂದು ಕಟ್ಟಡ ಅತಿಥಿಗೃಹವಾಗಿದೆ. ಹಾಗೆಯೇ ವೃತ್ತಾಕಾರವಾಗಿ ನಿರ್ಮಿಸಲಾಗಿರುವ ಸಭಾ ಮಂಟಪ ಸಹ ಹೊಸ ಜೀವನ ದಾರಿಯ ಆಕರ್ಷಣೆಯಾಗಿದೆ. ಈ ಮಂಟಪದಲ್ಲಿ ಬಹಳಷ್ಟು ಶಿಬಿರಗಳು, ಅನೇಕ ಪ್ರಖ್ಯಾತ ವ್ಯಕ್ತಿಗಳಿಂದ ಉಪನ್ಯಾಸಗಳೂ, ಮದುವೆ, ಉಪನಯನಗಳಂಥ ಸಾಮಾಜಿಕ ಕಾರ್ಯಕ್ರಮಗಳೂ ನಡೆದಿವೆ. ಹೀಗೆ ಆ ಕೇಂದ್ರದಲ್ಲಿಯ ಎಲ್ಲ ಕಟ್ಟಡಗಳು ಗತಿಸಿ ಹೋದ ಇತಿಹಾಸವನ್ನು ನೆನಪಿಸುತ್ತ ನಿಂತಿವೆ.

ಟಿಬೆಟ್ ಸ್ವಾತಂತ್ರ್ಯಕ್ಕಾಗಿ ಲಾಖರ್ ಚಳುವಳಿ

– ಬಿ.ರಮಣ್

ಚೀನೀಯರು ೨೦೦೮ರಲ್ಲಿ ನಡೆದ ಹಿಂಸಾತ್ಮಕ ಬಂಡಾಯವನ್ನೇನೊ ಹತ್ತಿಕ್ಕಿದರು. ಆದರೆ ಅವರಿಗೆ ಟಿಬೆಟ್ಟಿಯನ್ನರ ಸ್ವಾತಂತ್ರ್ಯದ ಆಸೆಯನ್ನು ಹತ್ತಿಕ್ಕಲಾಗಲಿಲ್ಲ. ದಲೈ ಲಾಮಾರ ಬಗ್ಗೆ ಟಿಬೆಟ್ಟಿಯನ್ನರಿಗೆ ಇರುವ ಪ್ರೇಮವನ್ನು ಮತ್ತು ಬೌದ್ಧ ಧರ್ಮದ ಬಗ್ಗೆ ಅವರಿಗಿರುವ ಭಕ್ತಿಯನ್ನು ಅಳಿಸಲಾಗಲಿಲ್ಲ. ಟಿಬೆಟ್ಟಿಯನ್ನರಿಗೆ ತಮ್ಮ ಅಸ್ಮಿತೆಯಲ್ಲಿರುವ ಹೆಮ್ಮೆಯನ್ನು ನಾಶಮಾಡಲು ಸಾಧ್ಯವಾಗಲಿಲ್ಲ.

ಟಿಬೆಟ್ಟಿಯನ್ನರು ಅದರಲ್ಲಿಯೂ ಮುಖ್ಯವಾಗಿ ಜನರಲ್ ನೆಕ್ಸ್ಟ್ ಒಂದು ಮಾತನ್ನು ಅರ್ಥಮಾಡಿಕೊಂಡರು. ಅದೇನೆಂದರೆ ತಮ್ಮ ಅಭಿಮಾನ ಮತ್ತು ಸ್ವಾತಂತ್ರ್ಯ ಟಿಬೆಟ್ಟಿಯನ್ನರ ಹಾನ್ ವಸಾಹಾತುಶಾಹಿಯ ಅಂತ್ಯದ ಬಗ್ಗೆ ಇರುವ ಅವರ ಆಸೆಗಳು ಒಳ್ಳೆಯ ರೀತಿಯಲ್ಲಿ ಪ್ರದರ್ಶಿಸುವುದಕ್ಕೆ ಇರುವ ಮಾರ್ಗವೆಂದರೆ ಗಾಂಧೀಯವರ ಅಹಿಂಸಾತ್ಮಕ ಹೋರಾಟಧ ಮಾದರಿಯನ್ನು ಅನುಸರಿಸುವುದು. ಈ ರೀತಿ ಲಾಖರ್ ಚಳುವಳಿ ಉದಯಿಸಿತು. ಲಾಖರ್ ಎಂದರೆ ಬಿಳಿಬುಧವಾರ. ಅವರ ದೃಷ್ಟಿಯಲ್ಲಿ ಇದು ಮಹಾಮಹಿಮ ದಲೈ ಲಾಮಾರ ಆತ್ಮದೊಂದಿಗೆ ಸಂಬಂಧಿಸಿದೆ. ಪ್ರತಿಬುಧವಾರ ಸಾವಿರಾರು ಜನ ಟಿಬೆಟ್ಟಿಯನ್ನರು ಗಂಡಸರು, ಹೆಂಗಸರು ಮತ್ತು ಮಕ್ಕಳು ತಮ್ಮ ತಮ್ಮ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಒಟ್ಟು ಸೇರಿ ಈ ಕೆಳಗಿನ ರೀತಿಯಲ್ಲಿ ಪ್ರತಿಜ್ಞೆ ಸ್ವೀಕರಿಸುತ್ತಾರೆ;

ನಾನು ಟಿಬೆಟನ್, ಇದು ನನ್ನ ರಾಷ್ಟ್ರಧ್ವಜ.

ನಾನು ಟಿಬೆಟನ್, ನಾನು ಟಿಬೆಟೆನ್ ವೇಷ ಧರಿಸುತ್ತೇನೆ.

ನಾನು ಟಿಬೆಟಿಯನ್, ಒಣಗಿದ್ ತೀಜ ತಿನ್ನುತ್ತೇನೆ.

ನಾನು ಟಿಬೆಟಿಯನ್, ನಾನು ಸಂಪ ತಿನ್ನುತ್ತೇನೆ.(ಟಿಬೆಟಿಯನ್ನರ ಮುಖ್ಯ ಆಹಾರ)

ನಾನು ಟಿಬೆಟಿಯನ್, ನಾನು ಉಪ್ಪಿನ ರುಚಿಯ ಬೆಣ್ಣೆ ಚಹ ಕುಡಿಯುತ್ತೇನೆ.

ನಾನು ಟಿಬೆಟಿಯನ್, ನಾನು ಟಿಬೆಟಿಯನ್ ಭಾಷೆ ಮಾತನಾಡುತ್ತೇನೆ.

ನಾನು ಟಿಬೆಟಿಯನ್, ನನ್ನ ತಂದೆ-ತಾಯಿಗಳು ಟಿಬೆಟಿಯನ್ನರು.

ನನ್ನ ನಾಯಕ ಪವಿತ್ರಾತ್ಮನಾದ ದಲೈ ಲಾಮ.

ನಾನು ಟಿಬೆಟಿಯನ್, ನಾನು ಆ ಪವಿತ್ರಾತ್ಮನ ಶಿಷ್ಯ.

ನಾನು ಟಿಬೆಟಿಯನ್, ಟಿಬೇಟಿಯನ್ ರಕ್ತ ನನ್ನ ಶರೀರದಲ್ಲಿ ಹರಿಯುತ್ತಿದೆ.

ನಾನು ಟಿಬೆಟಿಯನ್, ನಾನು ಟಿಬೇಟಿಯನ್ ಹೋರಾಟಕ್ಕಾಗಿ ಕೆಲಸ ಮುಂದುವರಿಸುತ್ತೇನೆ.

ನಾನು ಟಿಬೆಟಿಯನ್, ಟಿಬೆಟಿಯನ್ ಆಗಿರಲು ಹೆಮ್ಮೆ ಎನಿಸುತ್ತದೆ.

ನಾನು ಟಿಬೆಟಿಯನ್.

ಥಾಂಗಕ ಪೇನ್ವರ್ ಮತ್ತು ಟಿಬೇಟಿಯನ್ ಸ್ವಾತಂತ್ರ್ಯದ ಕಾರ್ಯಕರ್ತ ಈ

ರೀತಿ ತಮ್ಮ ಅಸ್ಮಿತೆಯನ್ನು ಖಡಾ ಖಂಡಿತವಾಗಿ ವ್ಯಕ್ತಪಡಿಸುತ್ತಾರೆ ಮತ್ತು ಹಾನ್ ಸಂಸ್ಕೃತಿಯೊಂದಿಗೆ ಬರೆಯುವುನ್ನು ನಿರಾಕರಿಸುತ್ತಾರೆ. ನಾನು ಟಿಬೆಟ್ಟನ್ನು ತಿನ್ನುತ್ತೇನೆ, ಟಿಬೆಟನ್ನು ಮಾತನಾಡುತ್ತೇನೆ, ಟಿಬೆಟಿಯನ್ ವೇಷ ಧರಿಸುತ್ತೇನೆ, ಟಿಬೆಟ್ಟನ್ನು ಯೋಚನೆ ಮಾಡುತ್ತೇನೆ. ಟಿಬೆಟ್‌ಗಾಗಿ ಜೀವಿಸುತ್ತೇನೆ. ಟಿಬೆಟಿಯನ್ ಆಗಿ ಸಾಯುತ್ತೇನೆ. ಇದು ಅವರ ಜೀವಿತೋದ್ದೇಶ.

ಟಿಬೆಟ್ಟಿಯನ್ನರು ಸ್ವತಃ ಲಾಖರ್ ಚಳುವಳಿಯನ್ನು ಈ ರೀತಿ ವರ್ಣಿಸುತ್ತಾರೆ. ಲಾಕರ ಮನೆಯಲ್ಲಿ ಬೆಳೆದಿರುವಂಥದು. ಟಿಬೆಟ್ಟಿಯನ್ ಸ್ವಾವಲಂಬಿ ಚಳುವಳಿ ೨೦೦೮ರ ಬಂಡಾಯದ ನಂತರ ಹುಟ್ಟಿದಂಥದು. ಚೀನೀಯರ ತೀವ್ರ ದಮನಕಾರಿ ರೀತಿಯ ನಂತರವೂ ಟಿಬೆಟ್ಟಿಯನ್ನರು ಅಹಿಂಸೆಯ ರಣನೀತಿಯನ್ನು ಸ್ವೀಕರಿಸಿದ್ದಾರೆ. ಪ್ರತಿಬುಧವಾರ ಹೆಚ್ಚು ಹೆಚ್ಚು ಟಿಬೆಟ್ಟಿಯನ್ನರು ತಮ್ಮ ಪರಂಪರಾಗತ ಬಟ್ಟೆ ಧರಿಸಲು, ಟಿಬೆಟಿಯನ್ ಭಾಷೆ ಮಾತನಾಡಲು ಮತ್ತು ಟಿಬೆಟ್ ಉಪಹಾರ ಗೃಹಗಳಲ್ಲಿ ಊಟ ಮಾಡಲು ಮತ್ತು ಟಿಬೆಟಿಯನ್ ಅಂಗಡಿಗಳಲ್ಲಿ ವ್ಯಾಪಾರ ಮಾಡಲು ವಿಶೇಷವಾಗಿ ಪ್ರಯತ್ನಿಸುತ್ತಾರೆ. ಅವರು ತಮ್ಮ ಹೋರಾಟದ ಚೇತನವನ್ನು ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ. ಅವು ಟಿಬೆಟಿಯನ್ ಭಾಷೆ, ಸಂಸ್ಕತಿ ಮತ್ತು ಅಸ್ಮಿತೆಯನ್ನು ಹೆಚ್ಚಿಸುವಂಥವಾಗಿವೆ. ಅಲ್ಲದೆ ಚೀನಾ ಮೂಲದ ಸಂಸ್ಥೆಗಳೊಂದಿಗೆ ಮತ್ತು ವಾಣಿಜ್ಯದೊಂದಿಗೆ ಅಸಹಕಾರ ಮಾಡುವುದೇ ಆಗಿದೆ. ಲಾಖರ್ ಚಳುವಳಿ ಚೀನೀಯರನ್ನು ಹತಾಶಗೊಳಿಸಿದೆ. ಆ ಚಳುವಳಿ ವಿಸ್ತಾರಗೊಳ್ಳದಂತೆ ಹೇಗೆ ತಡೆಯಬೇಕೆಂಬುದು ಅವರಿಗೆ ಗೊತ್ತಾಗುತ್ತಿಲ್ಲ. ಪ್ರತಿಭಟನಾ ಚಳುವಳಿ ಇನ್ನೂ ಬೇರೆ ರೀತಿಯ ಹಲವಾರು ಸ್ವರೂಪವನ್ನು ಪಡೆದಿದೆ. ಟಿಬೆಟಿಯನ್ ಗುರುಗಳಿಂದ ಕಳೆದ ವರ್ಷದ ಮಾರ್ಚ್ ತಿಂಗಳಿಂದ ೨೪ ಆತ್ಮಾಹುತಿಯ ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ೨೨ ಪ್ರಾಣಾಂತಕವಾದವು. ಪವಿತ್ರಾತ್ಮ ದಲೈ ಲಾಮಾರ ಚಿತ್ರವನ್ನು ದೇವಾಲಯಗಳಲ್ಲಿ ಇರಿಸಬೇಕೆಂಬ ಹಠ. ಚೀನಾ ದೇಶದ ಬಾವುಟವನ್ನು ಹಾರಿಸಲು ಹಾಗೂ ಚೀನಾದ ನಾಯಕರ ಚಿತ್ರಗಳನ್ನು ದೇವಾಲಯದಲ್ಲಿ ಪ್ರದರ್ಶಿಸಲು ನಿರಾಕರಿಸುವುದು. ಚೀನಾದ ಹೊಸ ವರ್ಷವನ್ನು ಆಚರಿಸಲು ನಿರಾಕರಿಸುವುದು. ಯಾವ ದೇವಸ್ಥಾನಗಳಲ್ಲಿ ಚೀನಾದ ಸೈನ್ಯವನ್ನು ಇರಿಸಲಾಗಿದೆಯೋ ಅಲ್ಲಿ ಪೂಜೆ ಮಾಡದಿರುವುದು. ಚೀನಾ ಸರ್ಕಾರ ಮತ್ತು ಪಕ್ಷದ ಪದಾಧಿಕಾರಿಗಳಿಂದ ನಡೆಸಲ್ಪಡುವ ಶೈಕ್ಷಣಿಕ ಶಿಬಿರಗಳಿಗೆ ಹೋಗದಿರುವುದು ಇತ್ಯಾದಿ. ಚೀನಾ ಸರ್ಕಾರ ತನ್ನ ಸೈನಿಕರನ್ನು ಟಿಬೆಟಿಯನ್ನರ ಪ್ರದೇಶಗಳಿಗೆ ಕಳುಹಿಸಿದೆ ಮತ್ತು ಎಲ್ಲ ನೆಟ್ ಸಂಪರ್ಕವನ್ನು ತಪ್ಪಿಸಿದೆ. ಇದರ ತರುವಾಯವೂ ಲಾಖರ್ ಚಳುವಳಿ ಕುಂಠಿತವಾಗುವ ಯಾವ ಸೂಚನೆ ಕಂಡುಬರುತ್ತಿಲ್ಲ ಬದಲಾಗಿ ಅದು ಬಲಿಷ್ಠವಾಗುತ್ತಿದೆ. ಚೀನಾದ ದಮನಕಾರಿ ನೀತಿಯ ವಿರುದ್ಧ ಟಿಬೆಟಿಯನ್ನರ ಅಸಂತೋಷ ಪಶ್ಚಿಮ ಸಿಚುವಿನಿಂದ ಕ್ವಿನೆಗೈವರೆಗೆ ಹಬ್ಬಿದೆ. ಇತ್ತೀಚಿಗಿನ ವರದಿ ಪ್ರಕಾರ ಕ್ವಿನೆಗೈ ಹೋರಾಟ ತುಮುಲದಲ್ಲಿದೆ. ಬಹುದೊಡ್ಡ ಸಂಖ್ಯೆಯಲ್ಲಿ ಟಿಬೆಟ್ ಗುರುಗಳು ಹಾಗು ವಿದ್ಯಾರ್ಥಿಗಳು ಬೀದಿಗಳಲ್ಲಿ ಪ್ರತಿಭಟಿಸುತ್ತಿದ್ದಾರೆ. ಇದು ನಿಧಾನವಾಗಿ ಪಶ್ಚಿಮದ ಸಿಚುವರೆಗೆ ಹಬ್ಬುತ್ತಿದೆ. ಈ ಅಸಂತೋಷದ ಅಲೆ ನಾಗ್‌ಚಿನ್ ಜಿಲ್ಲೆಯಲ್ಲಿ ಪ್ರಾಂಭವಾಗಿ ಕ್ವಿನೆಗೈ ರಾಜ್ಯವೆಲ್ಲಾ ಹಬ್ಬಿದೆ. ಒಂದು ಸ್ಥಾನೀಯ ಕ್ರೀಡಾಂಗಣದಲ್ಲಿ ಬಹು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಮತ್ತು ಬೇರೆ ನಾಗರೀಕರು ಒಟ್ಟು ಸೇರಿ 'ಟಿಬೆಟ್‌ಗೆ ಸ್ವಾತಂತ್ರ್ಯ ಬೇಕು', 'ದಲೈ ಲಾಮ

ಅಮರವಾಗಲಿ' ಇತ್ಯಾದಿ ಘೋಷಣೆಗಳನ್ನು ಕೂಗಿದರು. ಅದೇ ದಿನ ಇನ್ನೊಂದು ಟಿಬಿಟ್ಟಿಯನ್ನರ ದೊಡ್ಡ ಗುಂಪು ಮುಖ್ಯ ದೇವಸ್ಥಾನದಲ್ಲಿ ಸೇರಿ ದಲೈ ಲಾಮರು ಹಿಂದಿರುಗಿ ಬರಲೆಂದು ಪ್ರಾರ್ಥಿಸಿತು.

ಚೀನಾ ಅಧಿಕಾರಿಗಳು ಪ್ರದರ್ಶನ ಕಾರರನ್ನು ತಡೆಯಲಿಲ್ಲ. ಅದಕ್ಕೆ ಅವಕಾಶ ಕೊಟ್ಟರು. ಆದರೆ ತದನಂತರ ಅವರನ್ನು ಬಂಧಿಸಿದರು. ಪ್ರದರ್ಶನದಲ್ಲಿ ಭಾಗವಹಿಸಿದವರು ಸ್ವಯಂ ಪ್ರೇರಣೆಯಿಂದ ಪೋಲೀಸರಿಗೆ ಶರಣಾಗಬೇಕೆಂದು ಹಸ್ತಪ್ರತಿಗಳನ್ನು ಹಂಚಿದರು. ೨೦೧೨ ಮಾರ್ಚ್ ೧೪ರಂದು ಸುಮಾರು ನಾಲ್ಕು ಸಾವಿರ ಮಾಧ್ಯಮಿಕ ಶಾಲೆಯ ಮಕ್ಕಳು ರೆಬ್‌ಕಾಂಗ್‌ನಲ್ಲಿ ಪ್ರದರ್ಶನ ನಡೆಸಿದರು. ಅದೇ ರೀತಿ ಚೀನಾದ ಜೆಕೊ ಎಂಬ ರಾಜ್ಯದ ಪಕ್ಕದಲ್ಲಿರುವ ಸೆಕಾಂಗ್‌ನಲ್ಲಿ ಪ್ರದರ್ಶನ ಮಾಡಿದರು. ಈ ಪ್ರದರ್ಶನ ಸ್ಥಳೀಯ ಶಾಲೆಗಳಲ್ಲಿ ಟಿಬೆಟಿಯನ್ ಭಾಷೆ ಬದಲಾಗಿ ಚೀನಿ ಭಾಷೆಯನ್ನು ಅಳವಡಿಸಿದರ ವಿರುದ್ಧ ಇತ್ತು. ಇಂಥದೇ ಪ್ರದರ್ಶನ ೨೦೧೦ ಅಕ್ಟೋಬರ್‌ನಲ್ಲಿ ನಡೆದಿತ್ತು. ಯಾವ ಪ್ರದೇಶದಲ್ಲಿ ಪ್ರದರ್ಶನ ನಡೆದಿತ್ತೋ ಅಲ್ಲಿಯ ಶಾಲೆಗಳನ್ನು ಮುಚ್ಚಲಾಯಿತು ಮತ್ತು ಕೆಲವು ಪ್ರದರ್ಶನಕಾರರನ್ನು ಬಂಧಿಸಲಾಯಿತು.

ಮಾರನೇ ದಿನ ಮೂವತ್ತು ವರ್ಷದ ಟಿಬೆಟ್‌ನ ಧರ್ಮಗುರು ಆತ್ಮಾಹುತಿ ಮಾಡಿಕೊಳ್ಳಲು ಪ್ರಯತ್ನಿಸಿದರು. ಪೋಲಿಸರು ಮಧ್ಯ ಪ್ರವೇಶಿಸಿ ಬೆಂಕಿ ನಂದಿಸಿದರು. ಅವರು ತೀವ್ರ ಗಾಯಗೊಂಡಿದ್ದರು. ಚೀನೀಯರು ಅವರನ್ನು ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಿದ ನೂರಾರು ಜನ ಟಿಬೆಟ್ಟಿಯನ್ನರು ಅವರನ್ನ ಚೀನೀಯರ ಬಂಧನದಿಂದ ಬಿಡಿಸಿದರು ಮತ್ತು ಅವರನ್ನು ಬೌದ್ಧ ದೇವಾಲಯಕ್ಕೆ ಕರೆದುಕೊಂಡು ಹೋದರು. ಈ ಮಧ್ಯೆ ಚೀನೀಯರು ಟಿಬೆಟ್ ಸ್ವಾಯತ್ತ ಪ್ರದೇಶದಿಂದ ಇನ್ನೂರು ಜನ ಧರ್ಮಗುರುಗಳ ಪೈಕಿ ನೂರು ಜನ ಧರ್ಮಗುರುಗಳನ್ನು ಅವರ ಬಳಿ ಅಧಿಕೃತ ಗುರುತಿನ ಚೀಟಿ ಇಲ್ಲವೆಂಬ ಕಾರಣಕ್ಕಾಗಿ ಹೊರದೂಡಲ್ಪಟ್ಟರು. ಅವರಿಗೆ ತಮ್ಮ ಮನೆಗೆ ಹೋಗಲು ಹೇಳಿದರು. ಇನ್ನುಳಿದ ನೂರು ಜನ ಧರ್ಮಗುರುಗಳಿಗೆ ದೇವಾಲಯದಲ್ಲೇ ಇರಲು ಅವಕಾಶ ಕೊಟ್ಟು ಅವರು ಚೀನಾ ಸರ್ಕಾರಕ್ಕೆ ಮತ್ತು ಕಮ್ಯೂನಿಸ್ಟ್ ಪಕ್ಷಕ್ಕೆ ವಿಧೇಯರಾಗುವಂತೆ ಶೈಕ್ಷಣಿಕ ತರಗತಿಗಳನ್ನು ನಡೆಸಲಾಯಿತು. ದೇವಸ್ಥಾನದ ಸುತ್ತಲೂ ಕಾವಲನ್ನು ಬಿಗಿಪಡಿಸಲಾಯಿತು.

ಗಾಂಧೀಜಿಯವರ ಅಹಿಂಸಾ ಚಳುವಳಿ ಬ್ರಿಟಿಷರ ವಿರುದ್ಧ ಯಶಸ್ಸನ್ನು ಪಡೆಯಿತು. ಭಾರತವನ್ನು ಬಿಟ್ಟು ಹೋಗುವಂತೆ ಮಾಡಿತು. ಅದೇ ಗಾಂಧೀ ಮಾದರಿಯ ಅಹಿಂಸಾತ್ಮಕ ಚಳುವಳಿ ಚೀನೀಯರ ವಿರುದ್ಧ ಗೆಲ್ಲಬಹುದೆ? ಚೀನೀಯರು ಬ್ರಿಟಿಷರಿಗಿಂತ ಹೆಚ್ಚು ನಿರ್ದಯಿಗಳಾಗಿದ್ದಾರೆ. ಟಿಬೆಟಿಯನ್ನರ ಚಳುವಳಿ ಯಶಸ್ವಿಯಾಗಬೇಕಾದರೆ ಅಂತರಾಷ್ಟ್ರೀಯ ಸಮುದಾಯದ ಅದರಲ್ಲೂ ವಿಶೇಷವಾಗಿ ಭಾರತದ ನೈತಿಕ ಬೆಂಬಲ ಅಗತ್ಯ. ಒಂದು ವೇಳೆ ಇಂದಿನ ರಾಜಕೀಯ ನೈಜ ಪರಿಸ್ಥಿತಿ ಭಾರತ ಸರ್ಕಾರಕ್ಕೆ ಟಿಬೆಟ್ಟಿಯನ್ನರಿಗೆ ನೈತಿಕ ಬೆಂಬಲ ಕೊಡಲು ಸಾಧ್ಯವಾಗದೇ ಹೋದರೂ ಭಾರತದೇಶದ ಜನಾಭಿಪ್ರಾಯ ಟಿಬೆಟ್ಟಿಯನ್ನರ ಕೈಬಿಡಕೂಡದು. ಅವರು ನಮ್ಮ ಸ್ವಾತಂತ್ರ್ಯ ಚಳುವಳಿ ಪದ್ಧತಿಯನ್ನೆ ಅನುಸರಿಸುತ್ತಿದ್ದಾರೆ. ನಮ್ಮ ದೇಶದ ದಂತಕಥೆಯ ನಾಯಕರು ಯಾರು ಬ್ರಿಟಿಷರ ವಿರುದ್ಧ ಹೋರಾಡಿದರೊ ಅಂಥವರ ಹೆಜ್ಜೆ ಗುರುತಿನಲ್ಲಿ ನಡೆಯುತ್ತಿದ್ದಾರೆ. ಭಾರತೀಯರ ಜನಾಭಿಪ್ರಾಯಕ್ಕೆ ನೈತಿಕವಾದ ಜವಾಬ್ದಾರಿ ಟಿಬೆಟ್ಟಿಯನ್ನರ ಸತ್ಯಾಗ್ರಹವನ್ನು ಬೆಂಬಲಿಸುವುದರಲ್ಲಿದೆ. (ಸಭಾರ–ಫ್ರೀಡಂ ಫಸ್ಟ್; ಅನು–ಸುಕೌ)

ಖಾದಿ ವಿಚಾರ

ಗಾಂಧಿಗೆ ಚರಕ ಸಿಕ್ಕಿತು

ಗಾಂಧೀಜಿ ತಮ್ಮ ಸತ್ಯಾಗ್ರಹ ಆಶ್ರಮದಲ್ಲಿ ಖಾದಿ ಮತ್ತು ಕೃಷಿಗೆ ಮಹತ್ವದ ಸ್ಥಾನ ಕೊಟ್ಟಿದ್ದರು. ಅದರ ಹಿಂದೆ ಮೂರು ಉದ್ದೇಶಗಳು ಇರುವುದು ಗೊತ್ತಾಗುತ್ತದೆ. ಮೊದಲನೆಯದು, ಸಂಪ್ರದಾಯಿ ಮಗ್ಗ ಮತ್ತು ಚರಕಗಳಲ್ಲಿ ಒಂದು ವೇಳೆ ಏನಾದರೂ ಸುಧಾರಣೆ ಆಗುವುದಾದರೆ ಅದಕ್ಕಾಗಿ ಸ್ವಲ್ಪ ಶೋಧವೃತ್ತಿ ಶುರುವಾಗಲಿ; ವಾಸ್ತವದಲ್ಲಿ ಗಾಂಧೀಜಿ ಯಾವುದೇ ಪಾರಂಪರಿಕ ಯಂತ್ರದಲ್ಲಿ ಯಾವುದೇ ಸುಧಾರಣೆಯ ಸಮರ್ಥಕರಾಗಿರಲಿಲ್ಲ. ಅವರ ಹೇಳಿಕೆ ಏನೆಂದರೆ ಭಾರತೀಯ ಮಗ್ಗಗಳಲ್ಲಿ ಯಾವುದೇ ಸುಧಾರಣೆಗೆ ಮಾನ್ಯತೆಯನ್ನು ಕೊಡಬೇಕಾದರೆ ಆ ಸುಧಾರಣೆ ಸುಲಭವಾಗಿ ಆಗುವಂತಿರಬೇಕು ಮತ್ತು ಅಗತ್ಯವಾಗಿರಬೇಕು.

ಎರಡನೆಯ ಉದ್ದೇಶ, ನೂಲುವ ಉದ್ಯೋಗಕ್ಕೆ ಇತರ ಉದ್ಯೋಗಗಳಂತೆ ಗೌರವಯುತ ಸ್ಥಾನ ದೊರೆಯಬೇಕು.

ಮೂರನೆಯದು, ನೇಯ್ಗೆಯ ಕೆಲಸ ಒಳ್ಳೆಯ ರೀತಿ ನಡೆಯಬೇಕು. ತಮ್ಮ ಆಶ್ರಮವು ಮರೆಯಾಗುತ್ತಿರುವ ಭಾರತೀಯ ಕರಕುಶಲ ಉದ್ಯೋಗಗಳ ಪುನರುತ್ಥಾನದ ಕೋಟೆಯಾಗಬೇಕು. ನೇಕಾರಿಕೆಯ ಪುನರ್‌ಸ್ಥಾಪನೆಗಾಗಿ ಆಶ್ರಮದಲ್ಲಿ ತನ್ನ ಅವಶ್ಯಕ ಬಟ್ಟೆಯನ್ನು ಸ್ವತಃ ಉತ್ಪಾದಿಸಲು ಪ್ರಾರಂಭಿಸಲಾಯಿತು. ಆ ಸಮಯದಲ್ಲಿ ಎಷ್ಟೊಂದು ಮಗ್ಗಗಳು ನಡೆಯುತ್ತಿದ್ದವೋ ಅವು ಪೂರ್ಣತಃ ವ್ಯಾಪಾರಿಗಳ ಸ್ವತ್ತಾಗಿದ್ದವು. ಹಾಗೂ ಮಿಲ್‌ಗಳಲ್ಲಿ ಅಳಿದುಳಿದ ದಾರದ ಮೇಲೆ ಅವಲಂಬಿತವಾಗಿದ್ದವು. ಮಿಲ್‌ಗಳಲ್ಲಿ ತಯಾರಾಗುತ್ತಿದ್ದ ಒಳ್ಳೆಯ ದಾರ ಆ ಮಗ್ಗದ್ದಾಗುತ್ತಿತ್ತು. ಇಲ್ಲವೆ ಕಾರ್ಖಾನೆಗಳಲ್ಲಿ ಬಟ್ಟೆ ತಯಾರಿಸುವುದಕ್ಕಾಗಿ ಹೋಗುತ್ತಿತ್ತು. ಕೈಮಗ್ಗಗಳಿಗೆ ಕಡಿಮೆ ಗುಣಮಟ್ಟದ ಉಳಿದ ದಾರ ದೊರೆಯುತ್ತಿತ್ತು. ಇಷ್ಟಾದರೂ ನೇಕಾರರಿಗೆ ಇಡೀ ವರ್ಷ ಪದಾರ್ಥ ಸಿಗುವ ಅಥವಾ ಯಾರಾದರೂ ಕೊಳ್ಳಬಹುದಾದ ಪರಿಸ್ಥಿತಿಯಲ್ಲಿ ಇರಲಿಲ್ಲ. ಸಾಕಷ್ಟು ಹುಡುಕಾಟದ ನಂತರ ಕೆಲವು ನೇಕಾರರು ಒಂದು ವೇಳೆ ಅವರ ಆಶ್ರಮ ಆ ನೇಕಾರರಿಂದ ಬಟ್ಟೆಯನ್ನು ಕೊಳ್ಳುವುದಾದರೆ ಬರುವುದಾಗಿ ಒಪ್ಪಂದ ಮಾಡಿಕೊಂಡರು. ಹೀಗೆ ಆಶ್ರಮದಲ್ಲಿ ೭ ಮಗ್ಗಗಳು ಸ್ಥಾಪಿತವಾದವು. ೨ ಆಶ್ರಮದಲ್ಲಿ ಮತ್ತು ೫ ಆಶ್ರಮದ ಹೊರಗೆ. ಒಟ್ಟು ಮೂರು ಸಾವಿರ ರುಪಾಯಿ ಮೊತ್ತದ ಬಂಡವಾಳ ಹೂಡುವಿಕೆಯಿಂದ ನೂಲುಗಾರಿಕೆ, ನೇಕಾರಿಕೆ ಪ್ರಾರಂಭವಾಯಿತು. ಐದು ನೂರು ರೂಪಾಯಿಯ ಬಟ್ಟೆ ಮಾರಾಟವಾಯಿತು. ಒಟ್ಟು ೭ ಜನ ಈ ಇಡೀ ಕಾರ್ಯದಲ್ಲಿ ತೊಡಗಿದರು. ದಾರ ನೂಲುಗಾರರ ಮೂಲಕ ಆಶ್ರಮದಲ್ಲಿಯೇ ತಯಾರಾಗುತ್ತಿತ್ತು. ನೇಕಾರರಿಗೆ ಮೆಹತಾನ ಪೇಟೆಯಲ್ಲಿನ ದರದಲ್ಲಿ ಕೂಲಿ ಕೊಡಲಾಗುತ್ತಿತ್ತು.

೧೯೧೭ರಲ್ಲಿ ಗಾಂಧೀಜಿ ಸಾಬರಮತಿ ದಂಡೆಯ ಮೇಲೆ ೫೫ ಎಕರೆ ಭೂಮಿ ತೆಗೆದುಕೊಂಡರು ಕೊಚರಬ್‌ದಿಂದ ಇಲ್ಲಿಗೆ ಆಶ್ರಮದ ಸ್ಥಾನಾಂತರ ಮಾಡಿದರು. ಇಲ್ಲಿ ಕೂಡ ನೇಯ್ಗೆ ಮತ್ತು ವ್ಯವಸಾಯ ಪ್ರಮುಖವಾಗಿದ್ದವು. ಮಗನ್‌ಲಾಲ್

ಮುಖ್ಯರೂಪದಲ್ಲಿ ಆಶ್ರಮದ ಹೊಣೆ ನಿರ್ವಹಿಸುತ್ತಿದ್ದರು ಮತ್ತು ಗಾಂಧೀಯವರ ದಿಗ್ದರ್ಶನದಂತೆ ಚರಕ ಮತ್ತು ಖಾದಿ ಸಂಶೋಧನೆಯ ಕಾಯವನ್ನು ಪೂರ್ಣ ನಿಷ್ಠೆಯೊಂದಿಗೆ ಮಾಡುತ್ತಿದ್ದರು. ಅವರು ನೇಯ್ಗೆ ಕಲಿಯಲು ಮದರಾಸಿಗೂ ಕೂಡ ಹೋದರು.

೧೯೧೭ರಲ್ಲಿಯೇ ಗಾಂಧೀಜಿ ಚಂಪಾರಣ್ಯಕ್ಕೆ ಹೋದಾಗ ಅವರಿಗೆ ಹಿಂದೂಸ್ತಾನದ ಬಟ್ಟೆ ಉದ್ಯೋಗ ಹಾಳಾಗಿರುವಿಕೆಯ ಗಂಭೀರ ಪರಿಸ್ಥಿತಿಯನ್ನು ನೋಡಲು ಸಿಕ್ಕಿತು. ಜನರು ಬಟ್ಟೆಯ ಅಭಾವದಿಂದ ಚಳಿಯಲ್ಲಿ ನಡುಗುತ್ತಿದ್ದರೆಂದು ಅವರು ಬರೆದಿದ್ದಾರೆ. ಅವರಿಗೆ ಪ್ರತಿಯೊಂದು ನಿಮಿಷವು ಬಟ್ಟೆಯ ಕೊರತೆಯ ಅನುಭವವಾಗುತ್ತಿತ್ತು. ಒಬ್ಬ ಸ್ತ್ರೀಯನ್ನು ಹರಿದು ಹೋದ ಬಟ್ಟೆಯಲ್ಲಿ ನೋಡಿ ಅವರು ತಮ್ಮ ಪತ್ನಿ ಕಸ್ತೂರ ಬಾ ಅವರಿಗೆ ಇದರ ಕಾರಣವನ್ನು ಪತ್ತೆಹಚ್ಚು ಎಂದು ಹೇಳುತ್ತಾರೆ. ಆಗ ಆ ಸ್ತ್ರೀ ಕಸ್ತೂರ ಬಾ ಅವರನ್ನು ಒಂದು ಪಕ್ಕಕ್ಕೆ ಕರೆದು ಕೊಂಡು ಹೋಗಿ ನನ್ನ ಬಳಿ ಹರಿದಿರುವ ಈ ಸೀರೆಯೊಂದೇ ಇದೆ. ನಾನು ಇದನ್ನು ಹೇಗೆ ಸ್ವಚ್ಛ ಮಾಡಲಿ. ಗಾಂಧೀಜಿಯ ಈ ಪತ್ರ ಮಗನಲಾಲರಿಗೆ ಅವರ ನಿಷ್ಠೆಗೆ ಆಹ್ವಾನವೆಂದು ಕಾಣುತ್ತದೆ. ನೇಯ್ಗೆ ಒಂದು ಕಠಿಣ ಮತ್ತು ವಿಶೇಷ ಪರಿಣಾತಿಯ ಮುಖ್ಯ ಕೆಲಸವೆಂದು ಗಾಂಧೀಜಿಗೆ ಅನಿಸುತ್ತದೆ. ಅಲ್ಲದೆ ಇದು ಜಾತಿಯೊಂದಿಗೋ ಸಂಬಂಧಿಸದಾಗಿದೆ. ಆದ್ದರಿಂದ ಅದರ ಪುನರುತ್ಥಾನದ ಪ್ರಯತ್ನವನ್ನೇನೋ ಮಾಡುತ್ತೇವೆ. ಆದರೆ ನೇಯ್ಗೆಯ ಕೆಲಸವೇ ರಾಷ್ಟ್ರೀಯ ಕರ್ಮವಾಗುತ್ತದೆ. ಏಕೆಂದರೆ ಎಲ್ಲ ಮಗ್ಗಗಳಲ್ಲಿ ಪರಂಪರಾಗತ ಕೆಲಸವು ಸೇರಿದೆ. ಮತ್ತು ಅದರಲ್ಲಿ ಲಿಂಗಭೇದದ ಪ್ರಶ್ನೆಯೇ ಇಲ್ಲ. ಸ್ತ್ರೀ ಮತ್ತು ಪುರುಷ ಈರ್ವರೂ ಸಮಾನ ರೀತಿಯಲ್ಲಿ ನೋಡಬಲ್ಲರು ಆದ್ದರಿಂದ ನೂಲುಗಾರಿಕೆ ಮೇಲೆ ಅವರು ಸರ್ವಾಧಿಕ ಒತ್ತು ಕೊಡುತ್ತಾರೆ ಮತ್ತು ಇಡೀ ದೇಶದಲ್ಲಿ ಇದನ್ನು ಪ್ರಚುರ ಪಡಿಸಲು ಇಚ್ಛಿಸುತ್ತಾರೆ.

ಮೊಟ್ಟ ಮೊದಲು ಗುಜರಾತಿನಲ್ಲಿ ಬಿಜಾಪುರದ ಗಂಗಾ ಬೆಹನ್ ಚರಕವನ್ನು ಹುಡುಕಿ ಗಾಂಧೀಜಿಗೆ ಕೊಟ್ಟಳು. ಗಾಂಧೀಯವರಿಗೆ ಇದೇ ಚರಕಾದ ಹುಡುಕಾಟವಿತ್ತು. ತಮಗೆ ದಾರ ತೆಗೆಯಲು ಹಂಜಿಯ ನಿರಂತರ ಸರಬರಾಜು ಇರಬೇಕು ಮತ್ತು ತಮ್ಮಿಂದ ತೆಗೆಯಲ್ಪಟ್ಟ ದಾರದ ಖರೀದಿ ನಿಯಮಿತವಾಗಿ ಆಗಬೇಕು ಎಂಬ ನಿಂಬಂಧನೆಯೊಡನೆ ಗಂಗಾಬೆಹನ್ ನೂಲುಗಾರಿಕೆಯ ಹೊಣೆ ತೆಗೆದುಕೊಂಡರು. ಗಂಗಾ ಬೆಹನ್ ನೂಲುಗಾರಿಕೆಯನ್ನು ಪ್ರಾರಂಭಿಸಿದರು. ಗಾಂಧೀಜಿ ತಮ್ಮ ಮಿತ್ರ ಒಮರ್ ಸೋಮಾನಿಯವರ ಸಹಾಯವನ್ನು ಅಪೇಕ್ಷಿಸಿದರು. ಅವರು ಮುಂಬೈಯಲ್ಲಿ ಗಿರಣಿಗಳ ಮಾಲೀಕರಿದ್ದರು. ಅವರು ತಮಗೆ ಹಂಜಿ ದೊರಕಿಸಿಕೊಡಬೇಕು. ಆದರೆ ಗಾಂಧೀಯವರ ಮುಂದೆ ಒಂದು ಪ್ರಶ್ನೆ ಬಂದಿತ್ತು. ಒಂದು ವೇಳೆ ಗಿರಣಿಯ ಹಂಜಿಯನ್ನು ಉಪಯೋಗಕ್ಕೆ ತರಬಲ್ಲವಾದರೆ ಗಿರಣಿಯ ದಾರ ಏಕೆ ಬೇಡ? ಆಗ ಅವರು ಹತ್ತಿಯ ವ್ಯವಸಾಯ ಮತ್ತು ಹತ್ತಿ ಹಿಂಜುವುದರಿಂದ ಹಿಡಿದು ಬಟ್ಟೆಯನ್ನು ತಯಾರಿಸುವ ಇಡೀ ಪ್ರಕ್ರಿಯೆಯನ್ನು ಸ್ಥಾಪಿತ ಮಾಡಬೇಕಿದೆ ಎಂದು ತೀರ್ಮಾನಿಸಿದರು. ಕೆಲವೇ ಸಮಯದಲ್ಲಿ ಖಾದಿ ತಯಾರಿಕೆಯ ಈ ಇಡೀ ಪ್ರಕ್ರಿಯೆ ಆಶ್ರಮದ ಜೀವನದ ಪ್ರಮುಖ ಅಂಗವಾಯಿತು ಮತ್ತು ಇಲ್ಲಿಂದಲೇ ಗಾಂಧೀಯವರ ಖಾದಿ ಕೆಲಸ ಪ್ರಾರಂಭವಾಯಿತು.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಟಿ.ಜಿ.ಸತ್ಯನಾರಾಯಣ – ತಗಡೂರು
ಶ್ರೀ ಟಿ.ಎಸ್.ಚನ್ನೇಶ್ – ಬೆಂಗಳೂರು
ಶ್ರೀ ಗುಂಡಪ್ಪಗೌಡರು – ಮೈಸೂರು
ಡಾ॥ ಸುಜಯ್‌ಕುಮಾರ್ – ಶ್ರೀರಂಗಪಟ್ಟಣ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಎಂ.ಜಿ.ಲೋಕೇಶ್ – ಮಂಡ್ಯ
ಡಾ॥ ಶ್ರೀನಾಥನ್ ಆರ್.ಚಕ್ರವರ್ತಿ – ಬೆಂಗಳೂರು
ಶ್ರೀಮತಿ ಕೆ.ನೇತ್ರಾವತಿ – ಹಾಸನ
ಶ್ರೀ ಸಿ.ವಿಶ್ವನಾಥ್ – ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.